ಚೀಣಾದ
ಜನಪದ
ಕಥೆಗಳು

ಚಿನ್ನದ ಕಳಶ

ರಾ. ಲಕ್ಷ್ಮೀನಾರಾಯಣ

ಚಿನ್ನದ ಕಳಶ

[ಚೀಣಾದ ಜನಪದ ಕಥೆಗಳು]

ರಾ. ಲಕ್ಷ್ಮೀನಾರಾಯಣ, ಎಂ.ಎ.,

ಪ್ರಕಾಶಕರು.

ಗಿರೀಶ ಪ್ರಕಾಶನ

ನಂ. 480, ಹೊಸಮನೆ ರಸ್ತೆ, ಚಿಕ್ಕಮಗಳೂರು.

CHINNADA KALASHA, A Collection of Folktales of China in Kannada, By R. Lakshminarayana, M.A. Department of Kannada I. D. S. G. Govt College, Chikmagalure. 1979 Pages X+106

First Editon, 1979, 1,000 Copies.

ಪ್ರಕಾಶಕರು : ಶ್ರೀಮತಿ. ಜಿ. ಬಿ. ಶಿವಗಂಗಾ

ಬೆಲೆ :

ಸಾದಾ ಪ್ರತಿ : Rs. 6-00. ಉತ್ತಮ ಪ್ರತಿ : **Rs. 9-00**

Printed at :
Nolamba Printers,
K.R.Extension,
TIPTUR—572 202.

ಅರ್ಪಣೆ

ನನ್ನಲ್ಲಿ ಸಾಹಿತ್ಯದ ಬಗೆಗೆ ಒಲವನ್ನು ಮೂಡಿಸಿದ

ಶ್ರೀ ರಾ. ನರಸಿಂಹಮೂರ್ತಿ

ಹಾಗೂ

ತಮ್ಮ ವಿಮರ್ಶಾವಿವೇಕದಿಂದ ನನ್ನ ಬರವಣಿಗೆಗೆ ಬೆಳಕಾಗಿರುವ

ಶ್ರೀ ಎಚ್. ಜಿ. ಸಣ್ಣಗುಡ್ಡಯ್ಯ, ಎಂ.ಎ.,

ಈ ಪೂಜ್ಯ ಗುರುಗಳಿಬ್ಬರಿಗೂ ಗೌರವ ಪೂರ್ವಕವಾಗಿ

ಮುನ್ನುಡಿ

ನನ್ನ ಅಧ್ಯಾಪಕ ಮಿತ್ರ ಶ್ರೀ ರಾ. ಲಕ್ಷ್ಮೀನಾರಾಯಣರು ಅನುವಾದಿಸಿ ಪ್ರಕಟಿಸಿರುವ 'ಚಿನ್ನದ ಕಳಶ'ದ ಎಲ್ಲ ಕಿರುಕತೆಗಳನ್ನೂ ಓದಿ ನಾನು ತುಂಬ ಸಂತೋಷಪಟ್ಟಿದ್ದೇನೆ. ನಮ್ಮ ನೆರೆಯ ರಾಷ್ಟ್ರವಾದ ಚೀನಾ ದೇಶದಲ್ಲಿನ ಜನರ ಕಥೆಗಳು ಇವು. ಶ್ರೀ ಲಕ್ಷ್ಮೀನಾರಾಯಣರ ಅನುವಾದ ತುಂಬ ಸರಳವಾಗಿದ್ದು ಭಾಷೆ ಹೂವೆತ್ತಿದಷ್ಟು ಹಗುರವಾಗಿದೆ, ನೇರವಾಗಿ ಜಾನಪದ ಕಥನ ಜಗತ್ತಿಗೆ ನಮ್ಮನ್ನು ಕರೆದೊಯ್ದು ಅಲ್ಲಿನ ಬೆರಗುಗಳನ್ನು ಪರಿಚಯ ಮಾಡಿಕೊಡುತ್ತದೆ.

ಜನಪದ ಕಥನರೂಪಗಳು ಹಿಂದಿನ ಜನಾಂಗದ ಸಾಮಾಜಿಕ ಸಾಂಸ್ಕೃತಿಕ ಮೌಲ್ಯಗಳನ್ನು ಸರಳೀಕರಣಗೊಳಿಸಿಬಿಡುತ್ತವೆ. ಈ ಕಥೆಗಳನ್ನು ನಿರೂಪಿಸುವವರೆಲ್ಲ ಸಾಮಾನ್ಯವಾಗಿ ಸಮಾಜದ ಕೆಳವರ್ಗದ ಅಥವಾ ಕೆಳ ಮಧ್ಯಮ ವರ್ಗದ ಜನ. ಬಡತನದೊಂದಿಗೆ ಪ್ರಾಮಾಣಿಕತೆ, ಉನ್ನತ ಮಟ್ಟದ ಆಕಾಂಕ್ಷೆ, ಭೋಗವಸ್ತುಗಳ ಬಗೆಗೆ ಸುಪ್ತ ಲಾಲಸೆ, ನೀತಿಯುತ ಜೀವನದ ಬಗೆ ಒಲವು ಇಂಥ ಗುಣಗಳನ್ನು ಮೇಳವಿಸಿರುವುದು ಇಲ್ಲಿಯ ಕಥೆಗಳ ವೈಶಿಷ್ಟ್ಯ. ಇದರ ಪರಿಣಾಮವಾಗಿ ಕಥೆಗಳೆಲ್ಲ ಒಂದು ಅದ್ಭುತ ರಮ್ಯ ಆವರಣದಲ್ಲಿ ಸಂಚಾರ ಮಾಡುತ್ತವೆ. ಲೋಕದಲ್ಲಿ ಈ ಜನ ಬಯಸುವ ಶ್ರೀಮಂತ ಜೀವನದ ವಾರಸುದಾರರು ಈ ಜನರಿಗಿಂತ ಭಿನ್ನ. ಎಲ್ಲ ಸುಖ ಭೋಗಗಳ ಒಡೆಯರು ತಾವೇ ಆಗಬೇಕೆಂದು ಬಯಸುವ ಶ್ರೀಮಂತ ವರ್ಗ – ಅಂದರೆ ರಾಜರು, ದೈತ್ಯರು, ವರ್ತಕ ಇತ್ಯಾದಿ – ತಮ್ಮ ಅಂತಸ್ತಿನ ಉಳಿವಿಗೆ ಅಗತ್ಯವಾದ ಕ್ರೌರ್ಯ, ಅಸಹನೆ,

ದೌರ್ಜನ್ಯಗಳನ್ನು ರೂಢಿಸಿಕೊಂಡವರು. ಇವರ ನೇತೃತ್ವದಲ್ಲಿ ಪ್ರಕೃತಿಯ ಸರಳ ಜೀವಿಗಳಾದ ಬಡಜನತೆ ಮತ್ತು ಹೆಂಗಸರು ಬಲುಬೇಗ ಶೋಷಣೆಗೆ ಒಳಗಾಗಿ

ಬಿಡುತ್ತಾರೆ. ಸರಳಜೀವಿಗಳೆಲ್ಲರ ಪರವಾಗಿ ವಕ್ತಾರನಾಗಿ ನಿಲ್ಲುವ ಒಬ್ಬ ಅದ್ಭುತ ಶಕ್ತಿಗಳ ಸಂಚಿತ ಕಾಲ್ಪನಿಕ ವ್ಯಕ್ತಿಗೂ ಶ್ರೀಮಂತ ವರ್ಗಕ್ಕೂ ಮುಖಾಮುಖಿಯಾಗುವ ಸನ್ನಿವೇಶಗಳೇ ಈ ಕಥೆಯ ಮುಖ್ಯ ಸಂಗತಿಗಳಾಗುತ್ತವೆ. ಕೊನೆಗೆ ದುಷ್ಟಶಕ್ತಿಗಳೆಲ್ಲ ಶಿಷ್ಟಶಕ್ತಿಯ ಎದುರು ನಿಲ್ಲಲಾರದೆ ಸೋಲಪ್ಪುತ್ತವೆ ಎಂಬ ಸರಳ ಸಾಮಾಜಿಕ ನೀತಿಯೂ ಈ ಕಥೆಗಳಲ್ಲಿ ತೇಲುತ್ತದೆ. ಪ್ರಾದೇಶಿಕ ಭೇದಗಳ ಒಂದು ಕವಚವನ್ನು ಬಿಟ್ಟರೆ ಪ್ರಪಂಚದ ಎಲ್ಲ ಭಾಷೆಗಳ ಜನಪದ ಕಥೆಗಳೂ ಇಂಥ ಸರಳ ತತ್ವಗಳನ್ನೇ ನಿರೂಪಿಸುತ್ತವೆ.

ಶ್ರೀ ಲಕ್ಷ್ಮೀನಾರಾಯಣರು ಆರಿಸಿಕೊಂಡಿರುವ ಕಥೆಗಳು ಮಕ್ಕಳ ಕಥನ ಕುತೂಹಲವನ್ನು ತಣಿಸಬಲ್ಲ ವೈವಿಧ್ಯ ಪೂರ್ಣ ಕಥಾವಸ್ತುಗಳಿಂದ ಕೂಡಿವೆ. ವಿಶ್ವಾಸದ್ರೋಹ, ರೈತನ ಬುದ್ಧಿವಂತಿಕೆ, ಸಾಹಸಮಯ ಕಾರ್ಯಗಳನ್ನು ಲೀಲಾಜಾಲವಾಗಿ ಮುಗಿಸಬಲ್ಲ ಬೆಟ್ಟದ ಹುಡುಗನ ಸಾಹಸಗಳು, ಸಿಂಗ್ರನ ಸಾಹಸಗಳು, ಸಾಧ್ವಿಯೂ ಚತುರೆಯೂ ಆದ ಹೆಣ್ಣು ಪುರುಷರ ಶೋಷಣೆಯ ವಿರುದ್ಧ ವೈಯಕ್ತಿಕವಾಗಿ ನಡೆಸುವ ಬೌದ್ಧಿಕ ಹೋರಾಟ, ಜೀವಂತ ವಸ್ತುಗಳನ್ನೇ ತನ್ನ ಕುಂಚದಿಂದ ಬಿಡಿಸುತ್ತಿದ್ದ ಕಲಾವಿದ ಮಾಲಿಯಾಂಗನ ಅಪ್ಪಟ ಫ್ಯಾಂಟಸಿ– ಇವೆಲ್ಲ ಇಲ್ಲಿಯ ಕಥನದಲ್ಲಿ ಚಿತ್ರಣಗೊಂಡಿವೆ. ಮಕ್ಕಳ ಮನಸ್ಸನ್ನು ಸೆರೆಹಿಡಿಯಬಲ್ಲ ಸಮುದ್ರ, ಬೆಟ್ಟ, ದೈತ್ಯಪ್ರಾಣಿಗಳು, ಕಾಡಿನ ವಿಚಿತ್ರ ಪ್ರಾಣಿವರ್ಗ, ಮಾಯಾಲೋಕದ ವ್ಯಕ್ತಿಗಳು ಕಥೆಯ ಸಜೀವ ಪಾತ್ರವರ್ಗಗಳಾಗಿ ನಿಂತು ಚಮತ್ಕಾರಿಕವಾಗಿ ಎಳೆಯರನ್ನು ಆಕರ್ಷಿಸಿ ಬಿಡುತ್ತವೆ.

ಇಂಥದೊಂದು ಬೆರಗಿನ ಲೋಕಕ್ಕೆ ಕನ್ನಡದ ಎಳೆಯರನ್ನು ಕೊಂಡೊಯ್ಯುವ ಕಾರ್ಯದಲ್ಲಿ ಗೆಳೆಯ ಲಕ್ಷ್ಮೀನಾರಾಯಣ್ ಸಫಲರಾಗಿದ್ದಾರೆ. ಒಳ್ಳೆಯ ಭಾಷಾಸಿದ್ಧಿಯುಳ್ಳ ಶ್ರೀಯುತರು ಈ ದಿಕ್ಕಿನಲ್ಲಿ ಇನ್ನಷ್ಟು ದೊಡ್ಡ ಹೆಜ್ಜೆ ಹಾಕಿ ಜಗತ್ತಿನಲ್ಲಿ ಪ್ರಚಲಿತವಾಗಿರುವ ಕಥೆಗಳ ಪ್ರಾತಿನಿಧಿಕ ಸಂಕಲನವೊಂದನ್ನು ಪ್ರಕಟಿಸುವ ಪ್ರಯತ್ನ ಮಾಡಲಿ ಎಂದು ಹಾರೈಸುತ್ತೇನೆ.

ಸರಕಾರೀ ವಿಜ್ಞಾನ ಕಾಲೇಜು, **ಅ. ರಾ. ಮಿತ್ರ**

ತುಮಕೂರು.

ನನ್ನ ಮಾತು

ಇದು ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿರುವ ನನ್ನ ಮೊದಲ ಬರಹ. ಆಗೊಮ್ಮೆ ಈಗೊಮ್ಮೆ ಲೇಖನಗಳನ್ನಷ್ಟೇ ಬರೆದು ತೃಪ್ತಿ ಪಟ್ಟುಕೊಳ್ಳುತ್ತಿದ್ದ ನಾನು ಇದೀಗ ಪುಸ್ತಕ ಪ್ರಕಟಣೆಯ ಸಾಹಸಕ್ಕೆ ಕೈಹಾಕಿದ್ದೇನೆ. ಇದಕ್ಕೆ ಮುಖ್ಯ ಪ್ರೇರಕರು ನನ್ನ ವಿದ್ಯಾ ಗುರುಗಳಾದ ಶ್ರೀ ಎಂ. ಎಸ್. ರಾಮಲಿಂಗಪ್ಪನವರು. ಸುಮಾರು ಮೂರು ವರ್ಷಗಳ ಹಿಂದೆಯೇ ಈ ಕಥೆಗಳನ್ನು ವಿವಿಧ ಮೂಲಗಳಲ್ಲಿ ಓದಿ; ಸ್ವಾರಸ್ಯವಾಗಿ ಕಂಡದ್ದರಿಂದ ನಮ್ಮ ಜನಕ್ಕೂ ಇವು ರುಚಿಸಿಯಾವೆಂದು ಅನುವಾದಿಸಿದೆ. ಆದರೆ ಪ್ರಕಟಿಸುವ ಗೋಜಿಗೆ ಹೋಗಿರಲಿಲ್ಲ. ಮಿತ್ರರಾದ ಶ್ರೀ ನೊ. ಸಂ. ತಿಮ್ಮೇಗೌಡರು, ಮತ್ತು ಶ್ರೀ ನಾರಾಯಣರಾಯರು ಮೊದಲಿನಿಂದಲೂ ಪ್ರಕಟಿಸಲು ಒತ್ತಾಯಿಸುತ್ತಿದ್ದರೂ ನಾನೇ ಅಷ್ಟಾಗಿ ಆಸಕ್ತಿ ತೋರಿಸಿರಲಿಲ್ಲ. ಶ್ರೀ ರಾಮಲಿಂಗಪ್ಪನವರ ಪ್ರೀತಿಪೂರ್ವಕವಾದ ಒತ್ತಾಯ ಒತ್ತಾಸೆಗಳಿಲ್ಲದಿದ್ದರೆ ಈಗಲೂ ಇವು ಅಚ್ಚಿನ ಮನೆಯನ್ನು ಕಾಣುವುದು ದುಸ್ತರವಾಗಿತ್ತು. ಇದರ ಕರಡು ತಿದ್ದುವುದರಿಂದ ಹಿಡಿದು ಪ್ರಕಟಣೆಯ ವರೆಗಿನ ಎಲ್ಲ ಹಂತಗಳಲ್ಲಿ ನನ್ನೊಂದಿಗೆ ಉದ್ದಕ್ಕೂ ಅವರು ದುಡಿದಿದ್ದಾರೆ. ಅವರ ಶ್ರಮ ಕೇವಲ ಪ್ರೇಮ ಮೂಲವಾದುದೆಂದು ಬಲ್ಲೆ. ಆದಕ್ಕಾಗಿ ಅವರಿಗೆ ನಾನು ಚಿರಋಣಿ. ನನ್ನ ಮತ್ತೊಬ್ಬ ಗುರುಗಳಾದ ಶ್ರೀ ಸಣ್ಣಗುಡ್ಡಯ್ಯನವರು ಇಲ್ಲಿಯ ಕೆಲವು ಕಥೆಗಳನ್ನು ತಾಳ್ಮೆಯಿಂದ ಓದಿ, ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟು ಇದು ಈ ರೂಪಕ್ಕೆ ಬರಲು ಕಾರಣರಾಗಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಅವರ ನಿಶಿತವಿಮರ್ಶನ ಪ್ರಜ್ಞೆ ಹಾಗೂ ನಿರ್ದುಷ್ಟ ವೈಚಾರಿಕ ನಿಲುವುಗಳಿಂದ ಎಷ್ಟೋ ಪ್ರೇರಣೆ ಪಡೆದಿದ್ದೇನೆ. ಇದಕ್ಕಾಗಿ ನಾನು ಅವರಿಗೆ ತೀರ ಕೃತಜ್ಞ.

ಖ್ಯಾತ ಸಾಹಿತಿಗಳಾದ ಶ್ರೀ ಅ. ರಾ. ಮಿತ್ರ ಅವರು ನಾನು ಕೇಳಿದ ಕೂಡಲೇ ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯದಲ್ಲೂ ಬಿಡುವು ಮಾಡಿ

ಕೆಲಂತು ಇದಕ್ಕೊಂದು ಅಮೂಲ್ಯವಾದ ಮುನ್ನುಡಿಯನ್ನು ಬರೆದು ಕೊಟ್ಟು ಈ ಕೃತಿಯ ಗೌರವವನ್ನು ಹೆಚ್ಚಿಸಿದ್ದಾರೆ. ಅವರ ಪ್ರೀತಿ, ಅಭಿಮಾನ ಮತ್ತು ಪ್ರೋತ್ಸಾಹಗಳಿಗೆ ನಾನು ಅತ್ಯಂತ ಆಭಾರಿ.

ಈ ಕೃತಿಯನ್ನು ತಮಗೆ ಅರ್ಪಿಸಲು ಒಪ್ಪಿಗೆ ಕೊಟ್ಟಿರುವ ಪೂಜ್ಯ ಗುರುಗಳಾದ ಶ್ರೀ ರಾ. ನರಸಿಂಹಮೂರ್ತಿ ಹಾಗೂ ಎಚ್. ಜಿ. ಸಣ್ಣಗುಡ್ಡಯ್ಯ ಇವರುಗಳಿಗೆ ನಾನು ಅತ್ಯಂತ ಕೃತಜ್ಞ.

ಶ್ರೀ ಪ್ರಸನ್ನ, ಶ್ರೀ ಎಂ. ಎಸ್. ಮಲಕಾಯ್ ಮತ್ತು ಸೋಮಶೇಖರ್ ಇವರುಗಳು ಇದಕ್ಕೊಂದು ಸುಂದರ ಮುಖಪುಟ ತಯಾರಿಸುವುದರಲ್ಲೂ ತುಂಬ ನೆರವಾಗಿದ್ದಾರೆ. ಶ್ರೀ ಸೋಮಶೇಖರ್ ಅವರು ಇದರ ಕರಡು ತಿದ್ದುವುದರಲೂ ನೆರವಾಗಿದ್ದಾರೆ. ಈ ಮಿತ್ರರೆಲ್ಲರ ಉಪಕಾರವನ್ನು ತುಂಬು ಹೃದಯದಿಂದ ನೆನೆಯುತ್ತೇನೆ.

ಇದರ ಪ್ರಕಟಣೆಗೆ ಉತ್ತೇಜನವಿತ್ತ ನನ್ನ ಪೂಜ್ಯ ತಂದೆಯವರಾದ ಶ್ರೀ ಓ. ಆರ್. ರಾಮಣ್ಣನವರಿಗೂ, ಆಸಕ್ತಿ ತೋರಿಸಿದ ಹಿರಿಯರಾದ ಡಾ॥ ಜಿ. ಟಿ. ಹಿರೇಮಠ್, ಶ್ರೀ ಟಿ. ಕೆ. ವಿಶ್ವನಾಥಶೆಟ್ಟರು, ಗೆಳೆಯರಾದ ಶ್ರೀ ಕಾಳೇಗೌಡರು, ಶ್ರೀ ಹಾದಿಮನಿ, ಶ್ರೀ ಟಿ. ಕೆ. ನಾಗರಾಜ್ ಮತ್ತು ನನ್ನ ವಿದ್ಯಾರ್ಥಿಮಿತ್ರ ಶ್ರೀ ಎ. ನಾಗರಾಜ್ ಇವರುಗಳಿಗೂ ನಾನು ಕೃತಜ್ಞ.

ಈ ಸಂಕಲನದ ಮೊದಲ ಕಥೆಯಾದ 'ಚಿನ್ನದ ಕಳಶ' ವನ್ನು ಈ ಮೊದಲು ಪ್ರಕಟಿಸಿದ 'ಪುಸ್ತಕ ಪ್ರಪಂಚ'ದ ಸಂಪಾದಕರಿಗೆ ನಾನು ಋಣಿ.

ಈ ಕೃತಿಯನ್ನು ತಮ್ಮ ಮಾಲೆಯಲ್ಲಿ ಸೇರಿಸಿಕೊಂಡಿರುವ ಗಿರೀಶ ಪ್ರಕಾಶನದವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ನಾನು ಕೊಟ್ಟ ಕಿರುಕುಳಗಳನ್ನೆಲ್ಲಾ ಸಹಿಸಿಕೊಂಡು ಅಲ್ಪಕಾಲದಲ್ಲಿ ಇದನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ತಿಪಟೂರಿನ ನೊಳಂಬ ಪ್ರಿಂಟರ್ಸ್ ಅವರ ಸಿಬ್ಬಂದಿವರ್ಗಕ್ಕೂ ನನ್ನ ವಂದನೆಗಳು ಸಲ್ಲುತ್ತವೆ.

ಕೊನೆಯದಾಗಿ ಅಂತರ ರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಬೆಳಕು ಕಾಣುತ್ತಿರುವ ಈ ಕಥಾಸಂಕಲನ ನಮ್ಮ ಎಳೆಯರ ಕುತೂಹಲವನ್ನು ಕಿಂಚಿತ್ತಾದರೂ ತಣಿಸಬಲ್ಲುದಾದರೆ ನನ್ನ ಶ್ರಮ ಸಾರ್ಥಕನೆಂದು ಎಣಿಸಿದ್ದೇನೆ.

ಶ್ರೀಸಿದ್ಧಾರ್ಥಿ ಸಂವತ್ಸರ
ಯುಗಾದಿ, ಗುರುವಾರ. ರಾ. ಲಕ್ಷ್ಮೀನಾರಾಯಣ.
29–3–79
ಐ.ಡಿ.ಎಸ್.ಜಿ. ಸರ್ಕಾರೀ ಕಾಲೇಜು,
ಚಿಕ್ಕಮಗಳೂರು.

ಒಳಗಿನ ಪುಟಗಳಲ್ಲಿ

ಚಿನ್ನದ ಕಳಶ

ಬಹಳ ಹಿಂದಿನ ಮಾತು. ಇಬ್ಬರು ಗೆಳೆಯರಿದ್ದರು. ಇಬ್ಬರಿಗೂ ತುಂಬ ಗಾಢವಾದ ಗೆಳೆತನ. ಒಂದು ದಿನ ಅವರಿಬ್ಬರೂ ಹುಲ್ಲು ಕೊಯ್ಯಲು ಜೊತೆಯಲ್ಲಿ ಬೆಟ್ಟಕ್ಕೆ ಹೋದರು. ಹುಲ್ಲು ಕೊಯ್ಯುವಾಗ ನೆಲದ ಮೇಲೆ ಅವರಿಗೆ ಒಂದು ಥಳ ಥಳ ಹೊಳೆಯುವ ಕಳಶ ಸಿಕ್ಕಿತು. ಅದರ ಮೇಲೆ ನವಿಲಿನ ಒಂದು ಚಿತ್ರವೂ ಇತ್ತು. ಕಳಶವನ್ನು ಚೆನ್ನಾಗಿ ನೋಡಿದ ಮೇಲೆ ಅದು ಚಿನ್ನದ್ದೆಂದು ಗೊತ್ತಾಯಿತು. ಇಬ್ಬರು ಗೆಳೆಯರಲ್ಲಿ ಒಬ್ಬನ ಮನಸ್ಸಿಗೆ ಒಂದು ಕೆಟ್ಟ ಯೋಚನೆ ಬಂತು. ಅದನ್ನು ತಾನೊಬ್ಬನೇ ದಕ್ಕಿಸಿಕೊಳ್ಳಬೇಕೆಂದುಕೊಂಡ. ಆದರೆ ಇನ್ನೊಬ್ಬನಿಗೆ ತಾವಿಬ್ಬರೂ ಅದನ್ನು ಸಮನಾಗಿ ಹಂಚಿಕೊಳ್ಳಬೇಕೆಂದೂ, ತನ್ನ ಪಾಲಿಗೆ ಬಂದದ್ದನ್ನು ಬಡವರಿಗೆ ದಾನಮಾಡಿಬಿಡಬೇಕೆಂದೂ ಅನಿಸಿತು. ಮೊದಲನೆಯವನು ಉಪಾಯವಾಗಿ ಹೇಳಿದ "ನೋಡಣ್ಣ ಬಹುಶಃ ಇದು ಚಿನ್ನದ್ದಾಗಿರಲಾರದೂಂತ ನನಗನ್ನಿಸುತ್ತೆ. ಚಿನ್ನದ ಕಳಶವನ್ನು ಬೆಟ್ಟದ ಮೇಲೆ ಹೀಗೆ ಎಸೆಯುವಂಥ ದಡ್ಡನಾದರೂ ಯಾರು? ಬಹುಶಃ ಇದು ಯಾವುದೋ ನಕಲಿ ಮಾಲು ಇರಬೇಕು".

ಎರಡನೆಯವನು ಹೇಳಿದ "ನಿನ್ನ ಮಾತು ನಿಜವಿದ್ದರೂ ಇರಬಹುದು. ಆದರೆ ನಾವು ಇದನ್ನು ಒರೆ ಹಚ್ಚಿ ನೋಡೋಣ. ಒಂದು ವೇಳೆ ಚಿನ್ನದ್ದು ಅಲ್ಲದೇ ಹೋದರೆ ನಮ್ಮಪ್ಪನ ಗಂಟು ಹೋಗುವುದೇನು? ಇದಂತೂ ಹುಲ್ಲು ಕೊಯ್ಯುವಾಗ ಅಕಸ್ಮಾತ್ ಸಿಕ್ಕಿದೆ".

ಇಬ್ಬರೂ ಬೆಟ್ಟವನ್ನಿಳಿದರು. ಕೆಳಗಡೆ ಮೊದಲ ಸ್ನೇಹಿತನ ಮನೆ ಇತ್ತು. ಆ ರಾತ್ರಿಯ ಮಟ್ಟಿಗೆ ಎರಡನೆಯವನೂ ಅವನ ಮನೆಯಲ್ಲೇ ತಂಗಿದ. ರಾತ್ರಿ ಆಮಾತು ಈ ಮಾತು ಆಡುತ್ತಾ ಮೊದಲ ಗೆಳೆಯ ಹೇಳಿದ "ನೋಡಣ್ಣ ಈ ಕಳಶವನ್ನು ಈಗ ನನ್ನ ಮನೇಲೇ ಬಿಟ್ಟುಹೋಗು. ಯಾರ ಹತ್ತಿರವಾದರೂ

ಕೊಟ್ಟು ಇದನ್ನು ಪರೀಕ್ಷೆ ಮಾಡುಸ್ತೀನಿ. ಮುಂದಿನ ಸಲ ನೀನಿಲ್ಲಿಗೆ ಬಂದಾಗ ನಾವಿಬ್ಬರೂ ಇದನ್ನು ಹಂಚಿಕೊಳ್ಳೋಣ ” ಎರಡನೆಯವನಿಗೆ ತನ್ನ ಮಿತ್ರನ ಮೇಲೆ ಪೂರ್ಣ ನಂಬಿಕೆಇತ್ತು. ಆದ್ದರಿಂದ ಅವನು ಕೂಡಲೇ ಇದಕ್ಕೆ ಒಪ್ಪಿದ.

ಮರುದಿನ ಅವನು ತನ್ನ ಮನೆಗೆ ಹಿಂತಿರುಗಿದ. ಮನೆಗೆ ಬಂದ ಮೇಲೆ ಹಲವಾರು ದಿನಗಳ ತನಕ ತನ್ನ ಮನೆಯ ಕೆಲಸ ಕಾರ್ಯಗಳಲ್ಲೇ ತೊಡಗಿದ್ದ. ಆಮೇಲೆ ಒಂದು ದಿನ ಪುನಃ ತನ್ನ ಮಿತ್ರನ ಮನೆಗೆ ಹೋದ. ಇನ್ನೂ ಹೊಸಿಲು ತುಳಿಯುತ್ತಿದ್ದ ಹಾಗೆಯೇ ನೋಡುತ್ತಾನೆ- ತನ್ನ ಗೆಳೆಯನ ಮುಖದ ಬಣ್ಣವೇ ಇಳಿದು ಹೋಗಿದೆ. ತುಂಬ ಚಿಂತಿತನಾಗಿದ್ದಂತೆ ಕಂಡುಬಂದಿತು.

“ಏನಯ್ಯ ಮಿತ್ರ ನೀನು ಯಾಕೆ ಇಷ್ಟೊಂದು ಚಿಂತೆ ಹಚ್ಚಿಕೊಂಡಿದ್ದೀ? ಹೀಗೆ ದುಃಖಿತನಾಗಲು ಕಾರಣವೇನು ? –ಎಂದು ಗೆಳೆಯನನ್ನು ಕೇಳಿದ.

“ಅಯ್ಯೋ! ಈ ಹಾಳು ಕಳಶವೇ ನನ್ನ ನಿದ್ದೇನ ಕೆಡಿಸಿದೆ. ವಾಸ್ತವವಾಗಿ ಇದು ಚಿನ್ನದಲ್ಲ. ಬೆಂಕಿ ಮೇಲೆ ಇಟ್ಟು ಕಾಯಿಸಿ ನೋಡಿದಾಗ ಇದು ತವರದ್ದೂಂತ ಗೊತ್ತಾಯಿತು. ನಿನಗೆ ಗೊತ್ತಲ್ಲಣ್ಣ ತವರದ್ದು ಏನಂಥ ಬೆಲೆ ಬಾಳುವಂಥದ್ದು ಅಲ್ಲ ಅಂತ. ಸುಮ್ಮನೆ ವ್ಯರ್ಥವಾಗಿ ಇದರಲ್ಲಿ ನಾವು ನಮ್ಮ ಸಮಯ ಎಲ್ಲ ಹಾಳು ಮಾಡಿದೆವು ”.

ಅತಿಥಿ ಗೆಳೆಯ ಮನಸಿನಲ್ಲೇ ಯೋಚನೆ ಮಾಡಿದ “ ಇವನು ನನಗೆ ಕರಗಿಸಿರೋ ಆ ತವರಾನ ಯಾಕೆ ತೋರಿಸ್ತಾ ಇಲ್ಲ ? ಖಂಡಿತವಾಗಿಯೂ ಇದರಲ್ಲಿ ಏನೋ ಮೋಸ ಇದೆ”. ಅವನ ಮೇಲೆ ಸ್ವಲ್ಪ ಸಂಶಯ ಉಂಟಾಯಿತು. ಆದರೂ ತನಗೆ ತಾನೇ ತಾಳ್ಮೆ ತಂದುಕೊಂಡು ಸ್ನೇಹಿತನಿಗೆ ಸಮಾಧಾನ ಹೇಳಿದ.

“ ಅಯ್ಯಾ ಮಿತ್ರ ನೀನು ಯಾಕೆ ನಿನ್ನ ಮನಸ್ಸು ಚಿಕ್ಕದು ಮಾಡಿಕೊಳ್ತೀಯಾ. ಈ ಕಳಶನಂತೂ ನನಗೆ ಅಕಸ್ಮಾತ್ ಸಿಕ್ಕಿತು. ಅದು ಚಿನ್ನದ್ದಾದರೂ ಆಗಲಿ, ತವರದ್ದಾದರೂ ಆಗಲಿ, ಅದಕ್ಕೆ ನೀನು ಯಾಕೆ ಇಷ್ಟು ಒದ್ದಾಡಬೇಕು”.

ಸ್ನೇಹಿತನ ಮಾತಿನಿಂದ ಅವನಿಗೆ ಬಹಳ ಸಂತೋಷವಾಯಿತು. ಈ ಚಿನ್ನ ಇನ್ನೇನು ತನಗೊಬ್ಬನಿಗೇ ದಕ್ಕಿಬಿಟ್ಟಿತೆಂದು ಮನಸ್ಸಿನಲ್ಲೇ ಮಂಡಿಗೆ ತಿನ್ನ

ತೊಡಗಿದ. ಆ ರಾತ್ರಿ ಅವನು ಹೆಂಡತಿಗೆ ಹೇಳಿ ಅತಿಥಿಯಾಗಿ ಬಂದ ಗೆಳೆಯನಿಗೆ ಭರ್ಜರಿ ಔತಣ ಮಾಡಿಸಿದ.

ಮಾರನೇ ದಿನ ತನ್ನ ಮನೆಗೆ ಹೊರಟುನಿಂತ. ಇನ್ನೇನು ಹೊರಡ ಬೇಕು ಎನ್ನುವಾಗ ತನ್ನ ಮಿತ್ರನಿಗೆ ಹೇಳಿದ- "ಏನಪ್ಪಾ ನಿಮ್ಮೂರಲ್ಲಂತೂ ಬರೀ ಬೆಟ್ಟಗಳೇ ಇವೆ. ಆದರೆ ನಮ್ಮೂರಲ್ಲಿ ಬೆಟ್ಟಗಳಷ್ಟೇ ಅಲ್ಲ; ನದಿಗಳೂ ಇವೆ. ಆ ಬೆಟ್ಟಗಳಮೇಲೆ ಬಣ್ಣ ಬಣ್ಣದ ಸುವಾಸನೆಯ ಹೂವುಗಳು ಅರಳಿನಿಂತಿವೆ. ನಿನಗೇನೂ ತೊಂದರೆ ಆಗದೆ ಇದ್ದರೆ ನಾನು ನಿನ್ನ ಮಕ್ಕಳಿಬ್ಬರನ್ನೂ ಒಂದೆರಡು ದಿನದ ಮಟ್ಟಿಗೆ ನಮ್ಮೂರಿಗೆ ಕರೆದು ಕೊಂಡು ಹೋಗಬೇಕೂಂತ ಇದ್ದೀನಿ. ಅಲ್ಲಿ ಅವರು ಅದರ ಹಿತಕರವಾದ ಹವೆಯಲ್ಲಿ ಸಂತೋಷವಾಗಿ ಇರಲಿ. ಇವರು ಇರುವುದರಿಂದ ನನಗೂ ಸ್ವಲ್ಪ ಬೇಜಾರು ಕಳೆಯುತ್ತೆ ".

ಆಶೆಬುರುಕ ಮಿತ್ರನಿಗಂತೂ ತನ್ನ ಉಪಾಯ ಫಲಿಸಿದ್ದನ್ನು ಕಂಡು ಎಲ್ಲಿಲ್ಲದ ಸಂತಸ ಚಿನ್ನದ ಕಲಶವನ್ನು ದಕ್ಕಿಸಿಕೊಂಡ ಸಂತೋಷದಲ್ಲಿ ಮಿತಿ ಮೀರಿ ಮೈಮರೆತಿದ್ದ. . ಹಿಂದೆ ಮುಂದೆ ಯೋಚಿಸದೆ ಸಂತೋಷದಿಂದ ತನ್ನ ಮಿತ್ರನ ಮಾತಿಗೆ ಹೂಗುಟ್ಟಿದ.

"ನನ್ನಮಕ್ಕಳನ್ನು ನೀನು ನಿನ್ನ ಮಕ್ಕಳೂಂತಲೇ ಭಾವಿಸಿಕೊಳ್ಳಣ್ಣ. ನಿನಗೇನೂ ತೊಂದರೆಯಾಗದಿದ್ದರೆ ಖಂಡಿತ ನಿಮ್ಮೂರಿಗೆ ಕರೆದು ಕೊಂಡು ಹೋಗು" -ಎಂದು ಹೇಳಿದ. ಇವನು ಇಬ್ಬರು ಮಕ್ಕಳನ್ನೂ ತನ್ನೊಂದಿಗೆ ಕರೆದು ಕೊಂಡು ಮನೆಯ ಕಡೆ ಹೊರಟ.

ದಾರಿಯಲ್ಲಿ ವಿಪರೀತ ಕೋತಿಗಳಿಂದ ತುಂಬಿದ ಬೆಟ್ಟದ ಮಾರ್ಗವಾಗಿ ಹೋಗಬೇಕಾಗಿತ್ತು. ಅವನು ಮರ ಹತ್ತಿ ಎರಡು ಕೋತಿಗಳನ್ನು ಹಿಡಿದು ಹುಡಗರ ಕೈಗೆ ಕೊಟ್ಟ. ಕೋತಿಗಳು ಸಿಕ್ಕಿದ್ದರಿಂದ ಹುಡುಗರಿಗೆ ತುಂಬ ಖುಷಿಯಾಯಿತು. ಮನೆಗೆ ಹೋದ ಮೇಲೆ ಆವನು ಮಕ್ಕಳ ಜೊತೆಯಲ್ಲಿ ಆ ಕೋತಿಗಳಿಗೂ ಮನುಷ್ಯರ ಭಾಷೆಯನ್ನು ಅರ್ಥ ಮಾಡಿಕೊಳ್ಳುವುದನ್ನು ಅಭ್ಯಾಸ ಮಾಡಿಸಿದ. ಹಾಡು, ಕುಣಿತಗಳನ್ನೂ ಕಲಿಸಿದ. ಆ ಕೋತಿಗಳನ್ನು ತನ್ನ ಗೆಳೆಯನ ಮಕ್ಕಳ ಹೆಸರಿನಿಂದ ಕರೆಯತೊಡಗಿದ. ಕೋತಿಗಳು ಬಹು ಬೇಗ ತಮ್ಮ ಹೆಸರುಗಳಿಗೆ ಚೆನ್ನಾಗಿ ಹೊಂದಿಕೊಂಡುವು. ಆಯಾ ಹೆಸರನ್ನು ಹಿಡಿದು ಕರೆದ ತಕ್ಷಣ ಕುಣಿಯುತ್ತ ಕೂಡಲೇ ಅವನಹತ್ತಿರಕ್ಕೆ ಬಂದು ಬಿಡುತ್ತಿದ್ದುವು.

ಮೂರುತಿಂಗಳ ನಂತರ ತನ್ನ ಸ್ನೇಹಿತನಿಗೊಂದು ಕಾಗದ ಬರೆದು ಕಳುಹಿಸಿದ. ಅದರಲ್ಲಿ, ಬಂದು ಮಕ್ಕಳನ್ನು ಕರೆದು ಕೊಂಡು ಹೋಗಬೇಕೆಂದು ತಿಳಿಸಿ, ಅದಕ್ಕೊಂದು ದಿನವನ್ನು ಗೊತ್ತುಪಡಿಸಿದ್ದ. ತನ್ನ ಸ್ನೇಹಿತ ಬರುವ ದಿನ ಇಬ್ಬರು ಹುಡುಗರನ್ನೂ ಬೆಟ್ಟದಿಂದ ಹಣ್ಣುಗಳನ್ನು ತರಲು ಕಳುಹಿಸಿಬಿಟ್ಟ. ಸ್ನೇಹಿತ ಮನೆಗೆ ಕಾಲಿಡುತ್ತಿದ್ದಂತೆಯೇ ತಲೆ ಚಚ್ಚಿಕೊಂಡು ಅಳುವುದಕ್ಕೆ ಶುರು ಮಾಡಿದ.

"ಅಯ್ಯೋ! ಈಗ ನಾನು ನಿನಗೆ ಹ್ಯಾಗೆ ಮುಖ ತೋರಿಸಲಿ" –ಎಂದು ಅಳುತ್ತ ಸ್ನೇಹಿತನಿಗೆ ಹೇಳಿದ. "ಯಾಕಣ್ಣ ನಿನಗೇನಾಯಿತು? ಇಷ್ಟೊಂದು ಯಾಕೆ ಗೋಳಾಡ್ತೀಯಾ" –ಎಂದು ಬಂದಿದ್ದ ಗೆಳೆಯ ವಿಚಾರಿಸಿದ.

"ಅಯ್ಯೋ ದೇವರೇ! ಮಿತ್ರಾ ನನ್ನ ಕ್ಷಮಿಸಿಬಿಡಪ್ಪಾ. ಯಾವ ಮುಖ ಇಟ್ಟುಕೊಂಡು ನಿನಗೆ ಅದನ್ನೆಲ್ಲ ಹೇಳಲಿ? ನನಗೆ ನಾಲಗೇನೇ ಹೊರಳುತ್ತಿಲ್ಲ".

ಆಗ ಸ್ನೇಹಿತ ಹೇಳಿದ– "ನೋಡಪ್ಪ ನಿನ್ನ ಮನಸ್ಸಿನಲ್ಲಿರೋ ಸಂಕಟಾನ ನನ್ನೆದುರಿಗೆ ಸ್ಪಷ್ಟವಾಗಿ ತೋಡಿಕೊಂಡುಬಿಡು. ಅದರಿಂದ ನಾನು ನಿನ್ನ ವ್ಯಥೆಯನ್ನು ಹೋಗಲಾಡಿಸೋಕೆ ಏನಾದರೂ ಸ್ವಲ್ಪ ಸಹಾಯ ಮಾಡೋಕೆ ಸಾಧ್ಯವಾಗಬಹುದು. ಸ್ನೇಹಿತ ಅಂದರೆ ಇಂಥ ಸಮಯಕ್ಕಲ್ಲದೆ ಇನ್ಯಾವಾಗ?

ಆಗವನು ಹೇಳುವುದಕ್ಕೆ ಶುರುಮಾಡಿದ– "ಆ ಹೊತ್ತು ನಾನು ನಿನ್ನ ಇಬ್ಬರು ಮಕ್ಕಳನ್ನೂ ಸುಖವಾಗಿ ಮನೆಗೆ ಕರೆದುಕೊಂಡು ಬಂದೆ. ಕೆಲವು ದಿನದ ತನಕ ಒಳ್ಳೆ ಮಜವಾಗಿ ಕಾಲ ಕಳೆದರು. ಆದರೆ ಒಂದು ದಿನ ಅದೇನು ಆಕಸ್ಮಿಕವಾಯಿತೋ ಏನೋ? ದೌರ್ಭಾಗ್ಯದಿಂದ ಇಬ್ಬರು ಮಕ್ಕಳೂ ಕೋತಿಗಳಾಗಿ ಬಿಟ್ಟರು. ನಿನ್ನ ಎದುರುಗಡೆ ನೋಡು, ಅವೆರಡೂ ಈಗ ಇದೇ ಥರ ದಿನವೆಲ್ಲಾ ನೆಲದ ಮೇಲೆ ಕುಣಿದು ಕುಪ್ಪಳಿಸುತ್ತಲೋ, ಇಲ್ಲ ಮರದ ಮೇಲೆ ಜಿಗಿದಾಡುತ್ತಲೋ ಇರುತ್ತವೆ. ಮಾನವ ಶಿಶುಗಳ ಹಾಗೆ ಈಗ ಅವು ನನ್ನ ಹತ್ತಿರ ಆಟ ಆಡೋಲ್ಲ." ಹೀಗೆಂದು ಹೇಳುತ್ತ ಆ ಮಕ್ಕಳಿಬ್ಬರ ಹೆಸರಿನಿಂದ ಕೋತಿಗಳನ್ನು ಕರೆದ. ಅವೆರಡೂ ಒಂದೇ ನೆಗೆತಕ್ಕೆ ಅವನ ಹತ್ತಿರ ಓಡಿಬಂದು ಪ್ರೀತಿಯಿಂದ ಕುಳಿತು ಕೊಂಡುವು.

ಬಂದಿದ್ದ ಗೆಳೆಯನ ಮುಖ ಇಳಿದು ಹೋಯಿತು. ಆದರೆ ಅವನಿಗೆ ಏನೋ ಸ್ವಲ್ಪ ಅನುಮಾನ ಬಂತು. ಕೋತಿಗಳನ್ನು ಸರಿಯಾಗಿ ದೃಷ್ಟಿಸಿ ನೋಡಿದ ಮೇಲೆ ನಿಜವಾದ ಗುಟ್ಟು ಏನೆಂದು ಅವನಿಗೂ ಹೊಳೆಯಿತು. ಆಗ ನಾಚಿಕೊಂಡು ಮಿತ್ರನಿಗೆ ಹೇಳಿದ- "ಮಿತ್ರ ನಾನು ನಿನಗೆ ದ್ರೋಹ ಬಗೆದೆ ಅಂತ ಈಗ ತುಂಬ ವ್ಯಸನವಾಗುತ್ತಿದೆ. ಆ ಕಳಶ ವಾಸ್ತವವಾಗಿ ಚಿನ್ನದ್ದಾಗಿತ್ತು. ತವರದ್ದಲ್ಲ, ಅದು ಈಗಲೂ ನಮ್ಮ ಮನೆಯಲ್ಲಿ ಇದೆ. ನನ್ನ ಮಕ್ಕಳನ್ನು ನನಗೆ ವಾಪಸ್ ಕೊಡು. ನಮ್ಮ ಮನೆಗೆ ಬಾ. ಇಬ್ಬರೂ ಆ ಚಿನ್ನದ ಕಳಶವನ್ನು ಸಮವಾಗಿ ಹಂಚಿಕೊಳ್ಳೋಣ". ಈ ಮಾತನ್ನು ಕೇಳಿ ಆ ಮಿತ್ರ ನಗತೊಡಗಿದ. ಇಬ್ಬರು ಹುಡುಗರನ್ನೂ ಬೆಟ್ಟದಿಂದ ಕರೆಸಿದ. ಮರುದಿನ ತನ್ನ ಪಾಲು ತೆಗೆದು ಕೊಳ್ಳಲು ಸ್ನೇಹಿತನ ಜೊತೆ ಅವನ ಮನೆಗೆ ಹೊರಟ.

ಚತುರನಾದ ರೈತ

ಹಿಂದಿನ ಕಾಲದಲ್ಲಿ ಚೈನಾದ ಒಂದೂರಿನಲ್ಲಿ ಮಾಚನೆಂಬ ಒಬ್ಬ ಬಡ ರೈತನಿದ್ದ. ಅವನು ಬಹಳ ಚತುರನೂ ನಿಯತ್ತುಗಾರನೂ ಆಗಿದ್ದನು. ಜಮೀನುದಾರರಿಗೂ ಶ್ರೀಮಂತರಿಗೂ ಯಾವಾಗಲೂ ವಿಪರೀತ ಕಾಟಕೊಡುತ್ತಿದ್ದ. ಆದರೆ ಬಡವರಿಗೆ ಮಾತ್ರ ತನು ಮನ ಧನಗಳಿಂದ ಸಹಾಯ ಮಾಡುತ್ತಿದ್ದ. ಆದರಿಂದ ಬಡವರು ಅವನನ್ನು ಬಹಳ ವಿಶ್ವಾಸದಿಂದ ಕಾಣುತ್ತಿದ್ದರು.

ಇತರೆ ಅನೇಕ ರೈತರಂತೆ ಮಾಚನೂ ಪ್ರತಿವರ್ಷ ಗೇಣಿಯ ರೂಪದಲ್ಲಿ ಫಸಲಿನ ಹೆಚ್ಚು ಭಾಗವನ್ನು ಜಮೀನುದಾರನಿಗೆ ಕೊಡಬೇಕಾಗುತ್ತಿತ್ತು. ಅವನಿಗೆ ಹಿಂದಿನ ಆ ದಿನಗಳು ಚೆನ್ನಾಗಿ ನೆನಪಿದ್ದವು. ಅವರ ಅಪ್ಪ ಅಮ್ಮ ಜಮೀನುದಾರರ ಹೊಲಗಳಲ್ಲಿ ಹೇಗೆ ಮೈ ಮುರಿದು ದುಡಿಯುತ್ತಿದ್ದರೆಂಬುದು ಚೆನ್ನಾಗಿ ನೆನಪಿತ್ತು. ಅವರ ಅಪ್ಪ ಬಡತನ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದ. ಅವರ ಅಮ್ಮನಂತೂ ಹಸಿವಿನಿಂದ ನರಳಿ ನರಳಿ ಪ್ರಾಣಬಿಟ್ಟಿದ್ದಳು.

ಅವನ ಸ್ಥಿತಿಗತಿಗಳು ಈಗಲೂ ಹಾಗೆಯೇ ಇದ್ದವು. ಎಂದಿನಂತೆ ಈ ಸಲವೂ ವರ್ಷದ ಗೇಣಿಯನ್ನೆಲ್ಲಾ ಜಮೀನುದಾರನಿಗೆ ಒಪ್ಪಿಸುವ ದಿನ ಹತ್ತಿರ ಬಂದಿತ್ತು. ಅವನಿಗೊಂದು ಉಪಾಯ ಹೊಳೆಯಿತು ಫಸಲನ್ನೆಲ್ಲಾ ಮಾರಿ ಎರಡು ನರಿಗಳನ್ನೂ ಒಂದೆರಡು ಕೋಳಿಗಳನ್ನೂ ಕೊಂಡು ತಂದ. ಒಂದು ನರಿಯನ್ನು ಕೋಣೆಯಲ್ಲಿ ಕೂಡಿ ಹಾಕಿದ. ಇನ್ನೊಂದನ್ನು ಹಗ್ಗ ಕಟ್ಟಿ ದಿನವೂ ಮನೆಯ ಸುತ್ತ-ಮುತ್ತ ಆಡ್ಡಾಡಿಸುತ್ತಿದ್ದ. ಒಂದು ದಿನ ಜಮೀನುದಾರ ಗೇಣಿ ವಸೂಲಿ ಮಾಡಲು ಮಾಚನ ಮನೆಯ ಬಾಗಿಲಿಗೆ ಬಂದು ಕುಳಿತ. ದೂರದಿಂದಲೇ ಮಾಚನನ್ನು ಕೂಗಿ ಹೇಳಿದ– "ಮಾಚಾ, ನಾನು ಗೇಣಿ ವಸೂಲಿಗೆ ಬಂದಿದ್ದೀನಿ. ಫಸಲೆಲ್ಲಾ ಅಚ್ಚುಕಟ್ಟಾಯ್ತೋ ಇಲ್ಲವೋ ?"

ಮಾಚ ಜಮೀನುದಾರನ ಹತ್ತಿರ ಹೋಗಿ ಹೇಳಿದ –"ಈ ಸಲ ನನಗೆ ಚೆನ್ನಾಗಿ ಆಗಿದೆ. ನೀವೇನೂ ಯೋಚನೆ ಮಾಡಬೇಡಿ. ನಾಳೆ ಇಲ್ಲ ನಾಡಿದ್ದು ನಿಮಗೆ ನಿಮ್ಮ ಗೇಣಿ ಬಾಕಿ ಎಲ್ಲಾ ಕೊಟ್ಟು ಬಿಡ್ತೀನಿ".

ಜಮೀನುದಾರನ ದೃಷ್ಟಿ ಇದ್ದಕ್ಕಿದ್ದ ಹಾಗೆಯೇ ಮಾಚ ಹಗ್ಗ ಹಾಕಿ ಹಿಡಿದು ಕೊಂಡಿದ್ದ ನರಿಯ ಕಡೆಗೆ ಹೋಯಿತು. ಅವನಿಗೆ ತುಂಬ ಸೋಜಗ ವಾಯಿತು.

ಆಗ ಅವನು ಕೇಳಿದ– "ಈ ನರಿಯಿಂದ ನಿನಗೇನು ಉಪಯೋಗ ? ಇದೇನಾದರೂ ಓಡಿ ಹೋಯಿತು ಅಂದ್ರೆ ತುಂಬ ಪಶ್ಚಾತ್ತಾಪ ಪಡುತ್ತೀಯ".

ಮಾಚ ನಗುತ್ತಾ ಹೇಳಿದ –"ಇದು ಓಡಿ ಹೋದರೂ ನನಗೆ ಲಾಭವೇ ಲಾಭ".

ಜಮೀನುದಾರ ಹೇಳಿದ – "ನಿನಗೇನಾದರೂ ಹುಚ್ಚುಗಿಚ್ಚು ಹಿಡಿದಿದೆಯೋ ಹ್ಯಾಗೆ ? ಇದು ಓಡಿಹೋದರೂ ನಿನಗೆ ಲಾಭವಾಗುತ್ತೆ ಅಂದ್ರೆ ನನಗೇನೂ ಅರ್ಥವೇ ಆಗ್ತಿಲ್ಲ ".

ಜಮೀನುದಾರನಿಗೆ ಚಳ್ಳೇಹಣ್ಣು ತಿನ್ನಿಸುವುದು ಯಾವಾಗ ಅನ್ನುವುದನ್ನೇ ಅವನೂ ಕಾಯುತ್ತಿದ್ದ. ಅದರ ತಲೆಯ ಮೇಲೆ ಕೈಯಾಡಿಸಿ ಹೇಳಿದ– " ನನ್ನ ಮುದ್ದು ನರೀ ಓಡು, ಓಡು ! ನೋಡು ಇವತ್ತು ರಾತ್ರಿಗೆ ಕೋಳಿಗಳನ್ನೆಲ್ಲಾ ಹಿಡಿದುಕೊಂಡು ಮನೆಗೆ ಬರಬೇಕು ! " ಹಾಗೆಂದು ಹೇಳಿ ಹಗ್ಗ ಬಿಚ್ಚಿ ನರಿಯನ್ನು ಬಿಟ್ಟ. ನರಿ ಒಂದೇ ಕ್ಷಣದಲ್ಲಿ ಮಾಯವಾಯಿತು.

ಆ ಮೇಲೆ ಹೇಳಿದ – "ನಾನು ನರಿಯನ್ನು ಓಡಿಸಿದ್ದು ಯಾಕೆ ಅಂದರೆ ನಾಳೆ ನಿಮಗೊಂದು ಔತಣಕ್ಕೆ ಹೇಳಬೇಕೂಂತ ಇದ್ದೀನಿ. ನಿಮಗೆ ಒಂದು ಒಳ್ಳೆ ಊಟ ಹಾಕುಸ್ತೀನಿ. ನಮ್ಮ ನರಿ ಈಗ ತಾನೆ ಕೋಳಿ ಹಿಡಿದುಕೊಂಡು ಬರೋಕೆ ಹೋಗಿದೆ. ನಾಳೆ ಮಧ್ಯಾಹ್ನ ನಮ್ಮ ಮನೆಗೆ ನೀವು ಖಂಡಿತ ಬಂದೇ ತೀರಬೇಕು".

ಮರುದಿನ ಮಧ್ಯಾಹ್ನ ಹೊತ್ತಿಗೆ ಸರಿಯಾಗಿ ಜಮೀನುದಾರ ಊಟಕ್ಕೆ ಹಾಜರಾದ. ಬಗೆಬಗೆಯ ಕೋಳಿಯ ಮಾಂಸವನ್ನು ನೋಡುತ್ತಿದ್ದಂತೆಯೇ ಅವನ ಬಾಯಲ್ಲಿ ನೀರೂರಿತು. ಮಾಂಸದ ರುಚಿ ನೋಡುತ್ತಾ ಮಾಚನ ನರಿ

ಯನ್ನು ಬಾಯಿ ತುಂಬ ಹೊಗಳಿದ. ಆ ಮೇಲೆ ಹೇಳಿದ – "ನಿನ್ನ ನರಿ ಇವತ್ತು ಎಲ್ಲಿ ಹೋಯಿತಣ್ಣ? ಅದನ್ನು ಕರೆದುಕೊಂಡು ಬಾ. ಅದಕ್ಕೂ ಇಷ್ಟು ಏನಾದರೂ ಹಾಕು".

ಮಾಚ ತಲೆ ಅಲ್ಲಾಡಿಸಿ ಹೇಳಿದ –"ಈಗ ಬೇಡಿ ಮೊದಲು ನೀವು ಊಟ ಮಾಡಿ". ಅವರಿಬ್ಬರೂ ಊಟಕ್ಕೆ ಕುಳಿತರು. ಚೆನ್ನಾಗಿ ಹೊಟ್ಟೆ ತುಂಬ ಊಟ ಮಾಡಿದ ಮೇಲೆ ಜಮೀನುದಾರನಿಗೆ ಈ ನರಿ ಬಹಳ ಉಪಯೋಗಕ್ಕೆ ಬರುತ್ತದೆ ಅನ್ನಿಸಿತು. ಮಾಚನಿಂದ ಕೊಂಡುಕೊಂಡರೆ ಬಲು ಬೇಗ ಶ್ರೀಮಂತ ನಾಗಬಹುದು ಅನ್ನಿಸಿತು.

"ನೀನು ನಿನ್ನ ಆ ನರಿಯನ್ನು ಸ್ವಲ್ಪ ನನಗೆ ತೋರಿಸು" ಎಂದು ಮಾಚ ನಿಗೆ ಹೇಳಿದ. ಮಾಚ ರೂಮಿನೊಳಗಡೆ ಕಟ್ಟಿಹಾಕಿದ್ದ ಇನ್ನೊಂದು ನರಿಯನ್ನು ಹೊರಕ್ಕೆಳೆದುಕೊಂಡು ಬಂದು ತೋರಿಸಿದ. ಈಗಂತೂ ಜಮೀನುದಾರನಿಗೆ ಅವನ ಮೇಲೆ ಪೂರ್ತಿ ನಂಬಿಕೆ ಬಂತು. "ಎಲಾ ಇವನಾ! ಇದಂತೂ ತುಂಬ ನಿಯ ತ್ತಿನ ನರಿ ಕಣಯ್ಯ!" – ಎಂದು ಹೇಳಿ "ನಾನು ನಿನಗೆ ಈ ನರಿಗೆ ಬದಲಾಗಿ ನೂರು ಬೆಳ್ಳಿ ರೂಪಾಯಿ ಕೊಡೋಕೆ ಸಿದ್ಧವಾಗಿದ್ದೀನಿ. ಇದನ್ನು ನನಗೆ ಮಾರೋಕೆ ಸಾಧ್ಯವೇ?.

ಮಾಚ ತಲೆ ಒಗೆಯುತ್ತ ಹೇಳಿದ– "ಇಲ್ಲ, ಇಲ್ಲ. ಇದಂತೂ ಸಾಧ್ಯ ವಿಲ್ಲ. ಇದರಿಂದಲೇ ನನ್ನ ಜೀವನ. ಇದು ಇರೋದರಿಂದಲೇ ನನಗೆ ಯಾವತ್ತೂ ಹೊಟ್ಟೆಗಿಲ್ಲದೆ ಸಾಯೋಂಥ ಗತಿ ಬರೋಲ್ಲ. ನಾನು ನಿಮಗೆ ಕೊಡಬೇಕಾಗಿರೋ ಫಸಲು ಕೊಟ್ಟು ನಿಮ್ಮ ಗೇಣಿಯನ್ನೆಲ್ಲಾ ತೀರಿಸಿ ಬಿಡ್ತೀನಿ. ಆದರೆ ಈ ಮುದ್ದು ನರಿಯನ್ನುಮಾತ್ರ ಕೊಡೋಕೆ ಆಗೋಲ್ಲ".

ನನಗೆ ನಿನ್ನ ಫಸಲು ಬೇಕಾಗಿಲ್ಲಯ್ಯ ಮಾಚ. ನಿನ್ನ ನರಿ ಅಷ್ಟೇ ಬೇಕಾಗಿರೋದು. ನೂರು ಬೆಳ್ಳಿ ರೂಪಾಯಿಗೆ ಬದಲು ಇನ್ನೂರು ತಗೋ. ಆದರೆ ನಿನ್ನ ನರೀನ ಮಾತ್ರ ನನಗೆ ಕೊಡಲೇಬೇಕು".

"ಆಯಿತು ಸ್ವಾಮಿ. ನೀವು ಬಹಳ ಬಲವಂತ ಮಾಡ್ತಿದ್ದೀರಿ. ನಿಮಗೆ ನನ್ನು ಮಾರಿಬಿಡ್ತೀನಿ. ಆದರೆ, ಮುನ್ನೂರಕ್ಕೆ ಕಡಿಮೆ ಏನು ಮಾಡಿ ದರೂ ಕೊಡೋಲ್ಲ".

ಜಮೀನುದಾರ ದುಡ್ಡು ಕೊಟ್ಟು ನರಿಯನ್ನು ಕೊಂಡುಕೊಂಡ. ಮನೆಗೆ ಹಿಡಿದು ಕೊಂಡು ಬಂದು ಹೆಂಡತಿಯ ಹತ್ತಿರ ಹೇಳಿದ– "ನೋಡು, ಈ ನರಿ ಬಹಳ ಬೆಲೆಬಾಳುವ ಪ್ರಾಣಿ. ಅದರ ಪಾಡಿಗೆ ಅದು ಕೋಳಿಯನ್ನು ಹಿಡಿದುಕೊಂಡು ಬಂದು ಮನೆಗೆ ಹಾಕುತ್ತೆ."

"ನಿಮ್ಮ ಮಾತು ನನಗೆ ನಂಬೋಕೇ ಆಗ್ತಿಲ್ಲ" –ಹೆಂಡತಿ ಹೇಳಿದಳು. ಅವಳ ಅನುಮಾನವನ್ನು ದೂರ ಮಾಡಲು ಕೂಡಲೇ ಮಾಚನ ಅನುಕರಣೆ ಮಾಡುತ್ತ ಅದಕ್ಕೆ ಹೇಳಿದ– "ಮುದ್ದು ನರಿ ಓಡು ಬೇಗ. ಇವತ್ತು ರಾತ್ರಿಗೆ ನೀನು ಒಳ್ಳೆ ದೊಡ್ಡ ದೊಡ್ಡ ಕೋಳಿಗಳನ್ನು ಹಿಡಿದುಕೊಂಡು ಮನೆಗೆ ಬರಬೇಕು." ಹಾಗೆ ಹೇಳಿ ಹಗ್ಗ ಬಿಚ್ಚಿ ನರಿಯನ್ನು ಬಿಟ್ಟು ಬಿಟ್ಟ. ಅದು ಆ ಕೂಡಲೇ ಓಡಿ ಹೋಯಿತು.

ಜಮೀನುದಾರ ನರಿ ವಾಪಸ್ ಬರುವುದನ್ನೇ ಕಾದು ಕಾದು ಸಾಕಾದ. ಆದರೆ ಅದು ಬರಬೇಕು ಎಲ್ಲಿ ? ಮಾಚ ಕೈ ಕೊಟ್ಟ ಎನ್ನುವುದು ಈಗವನಿಗೆ ಚೆನ್ನಾಗಿ ಮನದಟ್ಟಾಯಿತು. ಮಿತಿ ಮೀರಿದ ಕೋಪದಿಂದ ಹುಚ್ಚನಂತಾದ. ಹಲ್ಲು ಹಲ್ಲು ಕಡಿಯುತ್ತಾ ತನ್ನಲ್ಲೇ ಹೇಳಿಕೊಂಡ– "ಲೋ ಮಾಚ ನಿನಗೆ ಇಷ್ಟೊಂದು ಧೈರ್ಯ ಬಂತೋ ! ನೀನು ನನಗೆ ಪೂರಾ ಮೋಸ ಮಾಡಿದ್ದೀಯ. ಈಗ ನಿನ್ನನ್ನು ಜೀವ ಸಹಿತ ಬಿಡೋದಿಲ್ಲ." ಈ ಸಲ ಒಂದಿಬ್ಬರು ತಳವಾರರನ್ನು ಕರೆದುಕೊಂಡು ಮಾಚನ ಮನೆ ಕಡೆ ಹೊರಟ. ರಾತ್ರಿಯೇ ಮಾಚನ ಮನೆ ಹೊಕ್ಕು ಗಟ್ಟಿಯಾಗಿ ಬೈಯುತ್ತ ಕಿರುಚಿದ– "ಲೇ ಬದ್ಮಾಷ್! ನನಗೆ ಅದ್ಹ್ಯಾಗೆ ಮೋಸ ಮಾಡಿದೆ ನೀನು ? ನನ್ನ ಮುನ್ನೂರು ರೂಪಾಯಿ ಈಗಲೇ ಬಿಸಾಕು. ಇಲ್ದಿದ್ರೆ ನಿನ್ನ ಜೀವ ತೆಗೀತೀನಿ."

"ದುಡ್ಡೆಲ್ಲಾ ಖರ್ಚಾಗಿ ಹೋಯ್ತು. ವಾಪಸ್ ಎಲ್ಲಿಂದ ಕೊಡಲಿ?"

"ಏನು ಎಲ್ಲಾ ಖರ್ಚಾಗಿ ಹೋಯ್ತೋ? ಸಾಯಿ ಬಡೀರೋ ಇವನ್ನ" –ಎಂದು ತನ್ನ ಕಡೆಯ ತಳವಾರರಿಗೆ ಹೇಳಿದ. ಆಗ ವಿಪರೀತ ಚಳಿ ಇತ್ತು. ಹಿಮ ಬೀಳುತ್ತಿತ್ತು. ಜಮೀನುದಾರನ ಕಡೆಯ ತಳವಾರರು ಹೇಳಿದರು. "ಸ್ವಾಮಿ ಚಳಿ ವಿಪರೀತವಾಗಿದೆ. ಇವನ್ನ ಹೊಡೆದು ಹಾಕೋದು ಬಲು ಸುಲಭ· ಆದರೆ

ಮಣ್ಣು ಮಾಡೋದು ಬಲು ಕಷ್ಟ. ನೀವು ಒಪ್ಪೋದಾದರೆ ನಾಳೆ ನಾವು ಇವನ್ನ ಮುಗಿಸ್ತೀವಿ." ಆಗ ಅವನು ಹೇಳಿದ– "ಆಯ್ತು ನಾಳೇನೇ ಆಗಲಿ. ಆದರೆ ಈ ಬದ್ಮಾಷನನ್ನ ಚೆತ್ರಲೆ ಮಾಡಿ ಎರಡು ಕೈಗಳನ್ನೂ ಒಂದು ಭಾರಿ ಬಂಡೆಗೆ ಕಟ್ಟಿ ಹಾಕಿ. ರಾತ್ರಿ ಈ ಚಳಿಗೆ ನೆಗೆದು ಬೀಳಲಿ".

ತಳವಾರರು ಆ ಕೂಡಲೇ ಜಮೀನುದಾರನ ಅಪ್ಪಣೆಯನ್ನು ಪಾಲಿಸಿದರು. ಅಷ್ಟೊಂದು ಚಳಿಯಲ್ಲಿ ಮಾಚನ ಬಟ್ಟೆಗಳನ್ನು ಕಳಚಿದರು. ಅವನ ಮೈಮೇಲೆ ಈಗ ಬರೀ ಒಂದು ಬನೀನು ಮತ್ತು ಚಡ್ಡಿ ಇವೆರಡು ಬಿಟ್ಟರೆ ಇನ್ನೇನೂ ಇರಲಿಲ್ಲ. ಎರಡು ಕೈಗಳನ್ನೂ ಒಂದು ದೊಡ್ಡ ಬಂಡೆಗೆ ಕಟ್ಟಿಹಾಕಿದ್ದರು.

ಚಳಿಯಿಂದಾಗಿ ಮಾಚನಿಗೆ ಪ್ರಾಣಹೋದಂತೆ ಆಗುತ್ತಿತ್ತು. ಆದರೆ ಅವನ ಬುದ್ಧಿ ಬಹಳ ಚುರುಕಾಗಿ ಓಡುತ್ತಿತ್ತು. ಈ ಕೊರೆಯುವ ಚಳಿಯಿಂದ ತಪ್ಪಿಸಿಕೊಳ್ಳುವ ಉಪಾಯವನ್ನು ಹುಡುಕಿದ. ಎಲ್ಲರೂ ಮಲಗಿದ ಮೇಲೆ ಅವನು ಆ ಭಾರೀ ಕಲ್ಲನ್ನು ಕೆಳಕ್ಕೆ ಮೇಲಕ್ಕೆ ಎತ್ತಲು ಶುರು ಮಾಡಿದ. ಕಲ್ಲನ್ನು ಒಂದೇ ಸಮನೆ ಎತ್ತುತ್ತಾ ಇದ್ದುದರಿಂದ ಅವನ ಚಳಿ ಓಡಿ ಹೋದದ್ದು ಅಷ್ಟೇ ಅಲ್ಲ; ಸೆಕೆಯಿಂದ ಬೆವರೂ ಬರತೊಡಗಿತು. ಬೆಳಗಾಗುತ್ತಿದ್ದ ಹಾಗೆಯೇ ಜಮೀನು ದಾರ ತಳವಾರನನ್ನು ಕರೆದು ಹೇಳಿದ– "ಹೋಗಿಬಿಟ್ಟು ಸ್ವಲ್ಪ ಆ ಮಾಚನ್ನ ನೋಡಿಕೊಂಡು ಬಾ; ಇನ್ನೂ ಬದುಕಿದ್ದಾನೇನೋ ?"

ತಳವಾರ ಮಾಚನ ಮೈ ತುಂಬಾ ಬೆವರು ನೀರು ಇಳಿಯುತ್ತಿದ್ದುದನ್ನು ನೋಡಿ ಚಕಿತನಾದ. ಜಮೀನುದಾರನ ಹತ್ತಿರ ಹೋಗಿ ಹೇಳಿದ– "ಸ್ವಾಮಿ ನೀವು ನಿನ್ನೆ ಹೇಳಿದಿರಿ, ಅವನು ಚಳಿಯಿಂದ ಸತ್ತು ಹೋಗ್ತಾನೆ ಅಂತ. ಆದರೆ ಅವನಿಗೆ ಬೆವರು ನೀರು ಇಳೀತಿದೆ. ಈ ಚಳೀಲಿ ಅವನು ನನಗೆ ಗಾಳಿ ಬೀಸೂಂತ ಹೇಳಿದ. ನಿಮಗೆ ನಂಬಿಕೆ ಆಗದಿದ್ದರೆ ನೀವೇ ಬೇಕಾದರೆ ಹೋಗಿ ನೋಡಿ." ಜಮೀನುದಾರ ವಿಸ್ಮಿತನಾಗಿ ಮಾಚನನ್ನು ನೋಡಲು ಓಡಿದ. ನಿಜವಾಗಿಯೂ ಅವನಿಗೆ ಬೆವರು ಇಳಿಯುತ್ತಿತ್ತು. ಇದರಲ್ಲೇನೋ ಗುಟ್ಟಿದೆ ಅಂದುಕೊಂಡ. ಈಗ ಅದನ್ನು ತಿಳಿದುಕೊಂಡ ಮೇಲೆಯೇ ಅವನನ್ನು ಹೊಡೆದುಹಾಕೋಣ ಎಂದುಕೊಂಡ.

ಜಮೀನುದಾರ ಮುಖದ ಮೇಲೆ ನಗೆ ತಂದುಕೊಂಡು ಹೇಳಿದ- "ಏನು ನಿನಗೆ ಜ್ವರ ಬಂದಿದೆಯಾ ? ಈ ಚಳಿಗಾಲದಲ್ಲೂ ಮೈ ಮೇಲೆ ಬಟ್ಟೆ ಇಲ್ಲದಿದ್ದರೂ ಅದು ಹೇಗೆ ಬೆವರು ಬಂತು? ಇದಂತೂ ನಿಜಕ್ಕೂ ಆಶ್ಚರ್ಯ. ಇದರ ಗುಟ್ಟೇನೂಂತ ನನಗೆ ಹೇಳ್ತೀಯಾ?"

ಮಾಚ ಹೇಳಿದ– "ನೀವು ನನ್ನಂಥ ನಿಯತ್ತಿನ ಮನುಷ್ಯನ್ನ ಸುಮ್ಮ ಸುಮ್ಮನೆ ಸಿಕ್ಕಿ ಹಾಕಿಸಿದಿರಿ. ನರಿ ನಿಜವಾಗಿಯೂ ಬಹಳ ಬೆಲೆ ಬಾಳೋ ಪ್ರಾಣಿಯಾಗಿತ್ತು. ನೀವೆಲ್ಲೋ ಖಂಡಿತ ತಪ್ಪಿರಬೇಕು. ಅದರಿಂದಲೇ ಅದಕ್ಕೆ ಸಿಟ್ಟು ಬಂದಿದೆ. ನೀವು ಅದರ ಸಮಾಚಾರ ನಿಮ್ಮ ಹೆಂಡ್ತಿ ಕೈಲಿ ಹೇಳಿಬಿಟ್ಟಿದ್ರಾ? ಮತ್ತಾಕೆ ನಿಮ್ಮ ಮಾತನ್ನ ನಂಬಲಿಲ್ಲಾ ತಾನೆ? ಬಹುಶಃ ನಿಮ್ಮಿಬ್ಬರ ಮಾತು ಕೇಳಿಸಿಕೊಂಡೇ ಅದು ತಿರುಗಿ ವಾಪಸ್ ಬರಲಿಲ್ಲ."

"ಜಮೀನುದಾರ ಅವನ ಮಾತಿಗೆ ಹೂಗುಟ್ಟುತ್ತಾ ಹೇಳಿದ-"ಬಿಲ್‌ಕುಲ್ ನೀನು ಹೇಳಿದ ಹಾಗೇ ಆಯಿತು. ಆ ನರಿ ನಿಜವಾಗಿಯೂ ಬೆಲೆಬಾಳೊಂಥೋದು ಅಂತ ಈಗ ನನಗೆ ಚೆನ್ನಾಗಿ ಗೊತ್ತಾಯಿತು. ಈ ಚಳಿಗಾಲದಲ್ಲೂ ನಿನ್ನ ಮೈಯಿಂದ ಬೆವರು ಬರುತ್ತಿದೆಯಲ್ಲಾ !. ನಿನ್ನ ಹತ್ತಿರ ಅದಿನ್ನೇನಿದೆ ಹೇಳು.

ಭೇಷ್ ! ನೀವೂ ಸರಿಯಾಗೇ ಹೇಳಿದಿರಿ. ಆ ಅಪೂರ್ವ ವಸ್ತುವನ್ನು ನೀವಿನ್ನೂ ನೋಡಲಿಲ್ವೆ? ಅದು ಇನ್ಯಾವುದೂ ಅಲ್ಲ; ಈ ಬನೀನು. ಇದನ್ನು ನಮ್ಮಪ್ಪ ನನಗೆ ಕೊಟ್ಟಿದ್ದ. ಈ ಅಂಗಿ ಚಳಿಗಾಲ, ಬೇಸಿಗೆ ಕಾಲ-ಎರಡರಲ್ಲೂ ಕೆಲಸಕ್ಕೆ ಬರುತ್ತೆ. ಚಳಿಗಾಲದಲ್ಲಿ ಇದನ್ನು ತೊಟ್ಟುಕೊಂಡರೆ ಚಳಿಯಾ ಗೋಲ್ಲ, ಬೇಸಿಗೆಯಲ್ಲಿ ತೊಟ್ಟುಕೊಂಡರೆ ಮೈಯೆಲ್ಲಾ ತಂಪಾಗಿರುತ್ತೆ". ಜಮೀನು ದಾರನಿಗೆ ಮಾಚನ ಮಾತು ಹದಿನಾರಾಣೆ ನಿಜವಿರಬೇಕು ಎನಿಸಿತು.

"ನೀನು ನನಗೆ ಈ ಬನೀನು ಕೊಡುತ್ತೀಯಾ? ನಾನು ಇದಕ್ಕೆ ನೂರು ಬೆಳ್ಳಿ ರೂಪಾಯಿ ಕೊಡೋಕೆ ಸಿದ್ಧ". ಮಾಚ ಹೇಳಿದ- "ಇಲ್ಲ ಸ್ವಾಮಿ ಕ್ಷಮಿಸಿ. ಈ ಸಲ ನಿಮ್ಮ ಹತ್ತಿರ ಇನ್ಯಾವ ವ್ಯಾಪಾರಾನೂ ಮಾಡೋಕೆ ನನಗಿಷ್ಟವಿಲ್ಲ. ಇದು ನಮ್ಮಪ್ಪ ನನಗೆ ಬಳುವಳಿಯಾಗಿ ಕೊಟ್ಟಿದ್ದು. ನಮ್ಮಪ್ಪನ ಜ್ಞಾಪಕಾರ್ಥ ವಾಗಿರೋ ಇದನ್ನು ನಾನು ನಿಮಗೆ ಕೊಡೋಕೆ ಆಗೋಲ್ಲ."

ಜಮೀನುದಾರ ಹೇಳಿದ- "ಮಾಚ ನನಗೆ ಇದು ಬೇಕೇಬೇಕು. ನೂರಕ್ಕೆ ಬದಲು ಇನ್ನೂರು ತಗೋ. ಆದರೆ ಇದನ್ನು ಮಾತ್ರ ನನಗೆ ಕೊಡಲೇಬೇಕು."

ಮಾಚ ಇನ್ನೇನು ಬೇರೆ ವಿಧಿಯಿಲ್ಲವೇನೋ ಎಂಬಂತೆ- "ಹಾಗಾದರೆ ನಿಮಗಿದರ ಮೇಲೆ ಅಷ್ಟೊಂದು ಖಾಯಶ್ ಇದ್ದರೆ ಇದನ್ನು ಕೊಟ್ಟೇ ಬಿಡ್ತೀನಿ; ತಗೊಳ್ಳಿ. ಆದರೆ ನಾನ್ನೂರು ರೂಪಾಯಿಗೆ ಒಂದು ಕಾಸು ಕಮ್ಮಿ ಮುಟ್ಟೋದಿಲ್ಲ. ಅಲ್ಲದೆ ಇದನ್ನು ಬಿಚ್ಚಿದ ಮೇಲೆ ನನಗೆ ಚಳಿಯಾಗುತ್ತೆ. ಅದಕ್ಕೆ ಏನಾದರೂ ಏರ್ಪಾಟು ನೀವು ಮಾಡಬೇಕು."

ಜಮೀನುದಾರ ಸಂತೋಷದಿಂದ ತನ್ನ ಬಟ್ಟೆಗಳನ್ನೆಲ್ಲಾ ಕಳಚಿ ಅವನಿಗೆ ಕೊಟ್ಟುಬಿಟ್ಟ. ನಾನ್ನೂರು ಬೆಳ್ಳಿರೂಪಾಯಿ ಕೊಟ್ಟು ಮಾಚನ ಬನೀನನ್ನು ಕೊಂಡು ಕೊಂಡ. ಬೆವರಿನಿಂದ ತೊಯ್ದು ಕೊಳೆಯಾದ ಬನೀನನ್ನು ಮಾಚ ಜಮೀನುದಾರನಿಗೆ ಒಪ್ಪಿಸಿದ. ಅವನ ಒಳ್ಳೆಯ ಹತ್ತಿಯ ಬಟ್ಟೆಗಳನ್ನು ತಾನು ಹಾಕಿಕೊಂಡ. ನಾನ್ನೂರುರೂಪಾಯನ್ನು ಸೊಂಟಕ್ಕೆ ಸೇರಿಸಿ ಖುಷಿಯಾಗಿ ಮನೆ ಕಡೆ ಹೊರಟ. ಮನೆಗೆ ಬಂದ ಮೇಲೆ ಯಾವಾಗಿನ ಹಾಗೆ ಆ ದುಡ್ಡನ್ನು ತನ್ನ ಬಡ ಬಂಧುಗಳಿಗೆ ಹಂಚಿದ.

ಜಮೀನುದಾರ ಬನೀನು ತೆಗೆದುಕೊಂಡು ಮನೆಗೆ ಬಂದ. ಬನೀನು ವಿಪರೀತ ಕೊಳೆಯಾಗಿತ್ತು ಹಾಗೂ ದುರ್ವಾಸನೆ ಹೊಡೆಯುತ್ತಿತ್ತು. ಅದರಿಂದ ತನ್ನ ತಳವಾರನಿಗೆ ಹೇಳಿ ಬಿಸಿನೀರಿನಲ್ಲಿ ಕುದಿಸಿ ಚೆನ್ನಾಗಿ ಸೋಪು ಹಾಕಿ ಒಗೆಸಿದ. ಒಣಗಿದ ಮೇಲೆ ತನ್ನೆಲ್ಲಾ ಬಟ್ಟೆಗಳನ್ನು ಕಳಚಿ ಹಾಕಿ, ಬನೀನೊಂದನ್ನು ತೊಟ್ಟುಕೊಂಡು ಮಾವನ ಮನೆಯವರನ್ನು ನೋಡಿಕೊಂಡು ಬರಲು ಹೋದ.

ಇಷ್ಟೊಂದು ಭಾರೀ ಚಳಿಯಲ್ಲಿ ಬರೀ ಬನೀನೊಂದನ್ನೇ ತೊಟ್ಟು ಕೊಂಡು ರಸ್ತೆಯಲ್ಲಿ ಹೋಗುತ್ತಿರುವ ಜಮೀನುದಾರನನ್ನು ನೋಡಿದವರೆಲ್ಲಾ ಬಿದ್ದು ಬಿದ್ದು ನಗುತ್ತಿದ್ದರು. ಜಮೀನುದಾರನಿಗೆ ಚಳಿಯಿಂದ ನಡುಕ ಹತ್ತಿತು. ಹಲ್ಲುಗಳು ಕಟಗುಟ್ಟ ತೊಡಗಿದವು. ಕೈ ಕಾಲುಗಳನ್ನು ಮುದುರಿಕೊಂಡು ಆಮೆಯ ಹಾಗಾದ. ಚಳಿಯಿಂದ ಮುಂದಕ್ಕೆ ಒಂದು ಹೆಜ್ಜೆ ಇಡಲೂ ಆಗಲಿಲ್ಲ. ಅಲ್ಲೇ ಸೆಡೆತುಕೊಂಡು ಬಿದ್ದು ಬಿಟ್ಟ.

ಪುಣ್ಯಕ್ಕೆ ಅವನ ಹೆಂಡತಿ ಬಹಳ ಬುದ್ಧಿವಂತೆ. ಅವಳು ಆಳುಗಳ ಸಹಾಯದಿಂದ ಅವನನ್ನು ಮನೆಗೆ ಕರೆದುಕೊಂಡು ಬಂದಳು. ಅದರಿಂದ ಅವನ ಪ್ರಾಣ ಉಳಿಯಿತು. ಮಾಚ ತನಗೆ ಮತ್ತೆ ಟೋಪಿಹಾಕಿದ ಅನ್ನುವುದು ಗೊತ್ತಾದಾಗ ಕನಲಿ ಕೆಂಡವಾದ. ಈ ಸಲ ಅವನ ಜೀವ ತೆಗೆದೇ ತೀರಬೇಕು ಎಂದು ನಿರ್ಧರಿಸಿದ.

ಜಮೀನುದಾರ ಹಾಗೂ ಅವನ ಕಡೆಯ ತಳವಾರರು ಮರುದಿನವೇ ಮಧ್ಯಾಹ್ನದ ಹೊತ್ತಿಗೆ ಹೋಗಿ ಅವನನ್ನು ಹಿಡಿದರು. ಅವರು ಅವನನ್ನು ಒಂದು ದೊಡ್ಡ ಗೋಣೀಚೀಲದಲ್ಲಿ ಕಟ್ಟಿಹಾಕಿ ಸಮುದ್ರದ ದಡದಲ್ಲಿದ್ದ ಮರಕ್ಕೆ ನೇತು ಹಾಕಿದರು. ಆಮೇಲೆ ಜಮೀನುದಾರ ಅವರಿಗೆ ಮರ ಕಡಿಯಲು ಅಪ್ಪಣೆ ಮಾಡಿದ. ಅದರರ್ಥ ಮರ ಉರುಳಿ ಬಿದ್ದಾಗ ಮಾಚ ಸಮುದ್ರದಲ್ಲಿ ಮುಳುಗಿ ಸಾಯಲಿ ಎಂದು. ಮರ ಕಡಿಯುತ್ತಾ ಕಡಿಯುತ್ತ ತಳವಾರರಿಗೆ ವಿಪರೀತ ಹಸಿವಾಯಿತು. "ಸ್ವಾಮಿ ಹಸಿವಾಗ್ತಿದೆ. ನೀವೊಪ್ಪಿದರೆ ಮೊದಲು ಊಟ ಮುಗಿಸಿ ಬಂದು ಆಮೇಲೆ ಬಾಕಿ ಕೆಲಸ ಮುಗಿಸ್ತೀವಿ" – ಎಂದು ಜಮೀನುದಾರನ ಅನುಮತಿಯನ್ನು ಕೇಳಿದರು.

ಅವನು ಹೇಳಿದ– "ಒಳ್ಳೇದು. ಊಟ ಆದ ಮೇಲೆ ಈ ಮರ ಕಡೀಲೇ ಬೇಕು. ಈ ಹೊತ್ತು ಮಾಚ ನಮ್ಮ ಕೈಯಿಂದ ತಪ್ಪಿಸಿಕೊಳ್ಳಕೂಡದು".

ಅವರೆಲ್ಲ ಊಟಮಾಡಲುಮನೆಗೆ ಹೊರಟುಹೋದರು.

ಅವರೆಲ್ಲ ಹೋದ ಸ್ವಲ್ಪ ಹೊತ್ತಿನಲ್ಲೇ ಜಮೀನುದಾರನ ಮಾವ ಆ ಕಡೆ ಬಂದ. ಅವನು ಅಳಿಯನನ್ನು ನೋಡಲು ಅವನ ಮನೆಗೆ ಹೋಗುತ್ತಿದ್ದ. ಸಮುದ್ರದ ದಡಕ್ಕೆ ಬಂದನೋ ಇಲ್ಲವೋ ಕೂಡಲೇ ಅವನ ಕಣ್ಣು ಮರದ ಮೇಲೆ ನೇತುಹಾಕಿದ್ದ ಚೀಲದ ಕಡೆ ಹೋಯಿತು.

" ಅರೆ ! ಇದೇನು ಈ ಮರದ ಮೇಲೆ ನೇತು ಹಾಕಿರೋದು !"ಎಂದು ಜೋರಾಗಿ ಕೂಗಿದ.

ಮಾಚನಿಗೆ ಜಮೀನುದಾರನ ಮಾವನ ಧ್ವನಿಯ ಗುರುತು ಸಿಕ್ಕಿತು. ಅವರ ಮಾವ ಗೂನ ಎನ್ನುವುದು ಅವನಿಗೆ ಮೊದಲಿಂದ ಗೊತ್ತಿತ್ತು.

ಮಾಚ ಚೀಲದೊಳಗಿನಿಂದ ಹೇಳಿದ– "ನಾನು ಕಣಪ್ಪಾ. ಮೊದಲು ನಾನು ಗೂನನಾಗಿದ್ದೆ. ಈ ಮರದ ಮೇಲಿಂದ ನೇತು ಬಿದ್ದದ್ದರಿಂದ ನನ್ನ ಬೆನ್ನು ಈಗ ಪೂರ್ತಿ ನೇರವಾಗಿ ಬಿಟ್ಟಿದೆ. ಈಗ ನಾನು ಗೂನನಲ್ಲ. ಮನೆಯವರನ್ನು ಕಾಯುತ್ತಾ ಇದ್ದೀನಿ. ಅವರು ನನ್ನನ್ನು ಈ ಮರದಿಂದ ಇಳಿಸಿಕೊಂಡು ಹೋಗಲಿ; ಈ ಅಮೂಲ್ಯ ಚೀಲವನ್ನು ಬೇಗ ವಾಪಸ್ ಕೊಟ್ಟು ಬಿಡಲಿ ಎಂದು. ನಾನೀ ಚೀಲಾನ ಗಂಟೆಗೆ ನೂರುರೂಪಾಯಿ ಕೊಟ್ಟು ಬಾಡಿಗೆಗೆ ತಗೊಂಡಿದ್ದೀನಿ". ಜಮೀನುದಾರನ ಮಾವ ಸಂತೋಷದಿಂದ ಹೇಳಿದ– "ಓ ಹೀಗೋ ಸಮಾಚಾರ! ನೋಡಪ್ಪಾ ನಾನೂ ಗೂನ. ನನಗೆ ಈ ಚೀಲಾನ ಬಾಡಿಗೆಗೆ ಕೊಡೋಕೆ ಆಗುತ್ತೇನಪ್ಪ? ನಾನೀಗಲೇ ನಿನಗೆ ನೂರುರೂಪಾಯಿ ಕೊಡೋಕೆ ಸಿದ್ಧ."

" ಓಹೋ ! ಖಂಡಿತ. ಆದರೆ ನೀವು ನೂರಕ್ಕೆ ಬದಲು ನೂರೈವತ್ತು ಕೊಡಬೇಕಾಗುತ್ತೆ". ಅದೇ ಸಮಯಕ್ಕೆ ಸರಿಯಾಗಿ ಮಾಚನ ಸ್ನೇಹಿತರಿಬ್ಬರು ಆ ಕಡೆ ಬಂದರು. ಮಾಚನ ಧ್ವನಿ ಕೇಳಿ ಅವರು ಅವನನ್ನು ಮರದಿಂದ ಕೆಳಕ್ಕೆ ಇಳಿಸಿ ಚೀಲ ಬಿಚ್ಚಿ ಬಿಡುಗಡೆ ಮಾಡಿದರು.

ಮಾಚ ಮುಗುಳ್ನಗುತ್ತ ಹೇಳಿದ- "ನೋಡಿ ಈಗ ನನ್ನ ಬೆನ್ನು ಪೂರ್ತಿ ನೇರವಾಗಿ ಬಿಟ್ಟಿದೆ". ಜಮೀನುದಾರನ ಮಾವ ಯಾವ ಅನುಮಾನವೂ ಇಲ್ಲದೆ ಮಾಚನಿಗೆ ನೂರೈವತ್ತುರೂಪಾಯಿ ಎಣಿಸಿದ. ಮಾಚ ಅವನನ್ನು ಚೀಲದಲ್ಲಿ ಹಾಕಿ ಕಟ್ಟಿದ. ಮರದ ಮೇಲೆ ನೇತು ಹಾಕಿದ. ಅವನನ್ನಲ್ಲೇ ಬಿಟ್ಟು ಮಾಚ ತನ್ನ ಮನೆಗೆ ಹೋದ.

ಊಟ ಮುಗಿಸಿ ಜಮೀನುದಾರನ ತಳವಾರರು ಮತ್ತೆ ಮರ ಕಡಿಯಲು ಪ್ರಾರಂಭಿಸಿದರು. "ಮರವನ್ನು ಬೇಗ ಕಡಿದುಹಾಕಿ. ಈ ಸಲ ಅವನು ಯಾವ ರೀತೀಲೂ ಉಳಕೋ ಕೂಡದು" –ಜಮೀನುದಾರ ಅವರಿಗೆ ಉಸಿರು ತೆಗೆದು ಕೊಳ್ಳುವುದಕ್ಕೂ ಅವಕಾಶ ಕೊಡುತ್ತಿರಲಿಲ್ಲ.

ಜಮೀನುದಾರನ ಮಾವನಿಗೆ ತನ್ನ ಅಳಿಯನ ಧ್ವನಿಯ ಗುರುತು ಸಿಕ್ಕಿತು. ಅವನು ವಿಪರೀತ ಹೆದರಿಬಿಟ್ಟ. " ನಾನು ನಿಮ್ಮಾವ, ನನ್ನ ಬಿಟ್ಟು ಬಿಡು"–ಎಂದು ಜೋರಾಗಿ ಚೀರಿದ.

ಜಮೀನುದಾರ ರೇಗಿಕೊಂಡು ಹೇಳಿದ– "ನೀನಿನ್ನೂ ನಿನ್ನ ಬುದ್ಧಿ ಬಿಡ್ಲಿಲ್ಲ ತಾನೇ? ನನ್ನ ಮಾವ ಅಂತ ಜೊಗುಳ್ತಾನೆ. ಇನ್ನೊಂದ್ರವಷ್ಟು ಹೊತ್ನಲ್ಲೇ ಗೊತ್ತಾಗುತ್ತೆ ಯಾರು ಯಾರಿಗೆ ಮಾವ ಅನ್ನೋದು. ಸಾವು ನಿನ್ನ ತಲೆ ಮೇಲೆ ತೂಗಾಡ್ತಿದೆ." ಆಗಲೇ ಚಟಚಟಾ ಎನ್ನುವ ಸದ್ದಾಯಿತು. ಮರ ಮುರಿದು ಸಮುದ್ರದಲ್ಲಿ ಬಿತ್ತು. ಜಮೀನುದಾರನ ಮಾವ ನೀರು ಪಾಲಾದ.

ಮನೆಗೆ ಬಂದು ಮಾಚ ನೂರೈವತ್ತು ರೂಪಾಯಿಗೆ ಕೆಲವು ಬಾತು ಕೋಳಿ ಕೊಂಡುಕೊಂಡು ಬಂದ. ಬೇಕಂತಲೇ ಅವನ್ನು ಮೇಯಿಸಲು ಜಮೀನು ದಾರನ ಮನೆ ಮುಂದಕ್ಕೆ ಹೊಡೆದುಕೊಂಡು ಬಂದ. ಅವನ ಕೈಯಲ್ಲಿ ಒಂದು ಉದ್ದವಾದ ಬಿದಿರಿನ ಗಳ ಇತ್ತು. ಅದರ ತುದಿಗೆ ಒಂದು ಚಿಕ್ಕ ಕೆಂಪು ಬಟ್ಟೆಯ ತುಂಡನ್ನು ಕಟ್ಟಿತ್ತು. ಮಾಚ ಈಗ ಹಲವಾರು ವರ್ಷದಿಂದ ಬಾತುಕೋಳಿ ಕಾಯುವ ಕೆಲಸವನ್ನೇ ಮಾಡುತ್ತಾ ಇದ್ದಾನೇನೋ ಎನ್ನುವಂತೆ ಕಾಣುತ್ತಿದ್ದ. ಅವನನ್ನು ಕಾಣುತ್ತಲೇ ಜಮೀನುದಾರನ ಮುಖದ ಬಣ್ಣವೇ ಇಳಿದು ಹೋಯಿತು.

ಜಮೀನುದಾರ ಗಾಬರಿಯಾಗಿ ಅವನನ್ನು ಕೇಳಿದ- "ಎಲಾ ಇವನಾ! ಇಲ್ಲೇನು ಮಾಡ್ತಿದ್ದೀಯೋ? ನಾನಂತೂ ನಿನ್ನನ್ನ ಸಮುದ್ರದಲ್ಲಿ ಮುಳುಗಿಸಿ ದ್ದೆನಲ್ಲಾ! ನೀನಿದುವರೆತನಕ ಅದು ಹ್ಯಾಗೆ ಬದುಕಿದ್ದೀ? "

ಮಾಚ ಮುಗುಳ್ನಗುತ್ತಾ ಹೇಳಿದ– "ನಿಯತ್ತುಗಾರರು ಅಷ್ಟು ಸುಲಭ ವಾಗಿ ಸಾಯೋಲ್ಲ ಅನ್ನೋದು ನಿಮಗೆ ಗೊತ್ತಿಲ್ಲ. ನೀವು ಆ ಹೊತ್ತು ನನ್ನನ್ನು ಸಮುದ್ರದಲ್ಲಿ ಮುಳುಗಿಸಿದ ದಿನ ಅಲ್ಲಿ ಸಮುದ್ರರಾಜನಿಗೆ ನಾನು ಯಾರೂಂತ ಗೊತ್ತಾಯಿತು. ಅವನು ತನ್ನ ಆಸ್ಥಾನಿಕನಾದ ಏಡಿಕಾಯನ್ನು ನನ್ನನ್ನು ಎದುರುಗೊಳ್ಳುವುದಕ್ಕೋಸ್ಕರ ಬಾಗಿಲಿಗೇ ಕಳುಹಿಸಿದ್ದ. ಅವನ ಜೊತೆಯಲ್ಲಿ ನಾನು ಒಳಕ್ಕೆ ಹೋದೆ. ಅಲ್ಲಿ ನಾನೊಂದು ಅದ್ಭುತ ಜಗತ್ತನ್ನು ಕಂಡೆ. ಎಲ್ಲಾ ವಸ್ತುಗಳೂ ಚಿನ್ನದ ವಸ್ತುಗಳಂತೆ ಕಂಡುಬರುತ್ತಿದ್ದವು. ನಾನಲ್ಲಿ ಚಿನ್ನದ ಎಮ್ಮೆ, ಕುದುರೆ ಮತ್ತು ಕೋಳಿಗಳನ್ನು ನೋಡಿದೆ. ವಜ್ರ, ವೈಢೂರ್ಯಗಳಿಂದ ಅದೆಲ್ಲಾ ತುಂಬಿ ಹೋಗಿತ್ತು. ಬಿಸಿಲು ಮತ್ತು ಚಳಿಯಿಂದ ರಕ್ಷಿಸಿಕೊಳ್ಳಲು ಬೇಕಾದ ಎಲ್ಲಾ ಬಗೆಯ ಬಟ್ಟೆಗಳೂ ಅಲ್ಲಿದ್ದುವು. ಗಿಡಮೂಲಿಕೆಗಳಂತೂ ಹೇರಳ ವಾಗಿದ್ದುವು. ನಾನಾ ಬಗೆಯ ರುಚಿ ರುಚಿಯಾದ ತಿಂಡಿ ತಿನಸುಗಳನ್ನು ನನ್ನ

ಮುಂದಿಟ್ಟರು. ನಾನು ಅವನ್ನೆಲ್ಲಾ ಪಟ್ಟಾಗಿ ಹೊಡೆದೆ. ಆ ಮೇಲೆ ಸಮುದ್ರ ರಾಜ ಅತ್ಯಂತ ಸುಂದರಿಯರಾದ ಅಪ್ಸರೆಯರನ್ನು ಕರೆಸಿ ನನ್ನೊಂದಿಗೆ ತೋಟದಲ್ಲಿ ತಿರುಗಾಡಲು ಕಳುಹಿಸಿದ. ನೀವು ಆ ಜಾಗ ನೋಡಲಿಲ್ಲವಲ್ಲಾಂತ ನನಗೆ ಬಹಳ ವ್ಯಥೆಯಾಗ್ತಿದೆ. ನಿಜವಾಗಿಯೂ ಅದೊಂದು ಸ್ವರ್ಗ.

ಎರಡು ದಿನದ ತನಕ ನಾನಲ್ಲಿ ಮಜವಾಗಿದ್ದೆ. ಅಂಥ ವೈಭವದ ಊರಿನಲ್ಲಿ ನನ್ನಂಥ ಬಡವರಿಗೇನು ಕೆಲಸ ? ನಾನು ನಮ್ಮಮನೆಗೆ ಹೋಗೋಕೆ ಸಮುದ್ರರಾಜನ ಅಪ್ಪಣೆ ಕೇಳಿದೆ. ಅವನು ಹೇಳಿದ- 'ನನ್ನ ಹತ್ತಿರ ಇಲ್ಲಿ ಬಹಳ ಜನ ಅಪ್ಸರೆಯರಿದ್ದಾರೆ. ನೀನು ಅವರಲ್ಲಿ ಯಾರನ್ನಾದರೂ ಒಬ್ಬಳನ್ನು ಆರಿಸಿಕೊಂಡು ಕರೆದುಕೊಂಡು ಹೋಗು'. ವಾಸ್ತವವಾಗಿ ನಾನು ಅಲ್ಲಿ ಅತ್ಯಂತ ಸುಂದರಿಯಾದವಳೊಬ್ಬಳನ್ನು ಮೊದಲೇ ಪ್ರೇಮಿಸಿದ್ದೆ. ಅವಳನ್ನು ನನ್ನ ಜೊತೆ ಕರೆದುಕೊಂಡು ಬರಬೇಕೂಂತ ಇದ್ದೆ. ಆದರೆ ಅವಳಿಗೆ ಈ ಲೋಕಕ್ಕೆ ಬರೋದು ಇಷ್ಟವಿರಲ್ಲಿಲ್ಲ. ಅದರಿಂದ ಅವಳು ನನ್ನ ಜೊತೆ ಬರ್ಲಿಲ್ಲ. ಈ ಬೆಲೆಬಾಳುವ ವಸ್ತುಗಳಲ್ಲಿ ನಿನಗೆ ಯಾವುದು ಮನಸ್ಸಿಗೆ ಬರುತ್ತೋ ಅದನ್ನು ನೀನು ತಗೊಂಡು ಹೋಗಬೇಕೂಂತ ಸಮುದ್ರರಾಜ ನನ್ನನ್ನು ಕೇಳಿಕೊಂಡ. ನಾನು ಇಲ್ಲಿಯ ಯಾವ ಬೆಲೆ ಬಾಳುವ ವಸ್ತುವನ್ನೂ ನನ್ನ ಜೊತೆ ತಗೊಂಡು ಹೋಗೋಕೆ ಇಷ್ಟ ಪಡೋಲ್ಲ ಅಂತ ಹೇಳಿದೆ. ರಾಜ ತಕ್ಷಣ ಕೇಳಿದ- 'ಯಾಕೆ ಇಷ್ಟ ಪಡೋಲ್ಲ?' ಆಗ ನಾನು ಹೇಳಿದೆ- 'ಮಹಾಸ್ವಾಮಿ, ಮೊದಲು ನನ್ನ ಹತ್ತಿರ ಎರಡು ಬೆಲೆ ಬಾಳುವ ವಸ್ತುಗಳಿದ್ದುವು. ಅದರ ಮೇಲೆ ಜಮೀನುದಾರನ ಕಣ್ಣು ಬಿತ್ತು. ಅವನು ನನ್ನನ್ನು ಕೊಲ್ಲುತ್ತೇನಿ ಅಂತ ಹೆದರಿಸಿದ. ಅವಕ್ಕೋಸ್ಕರ ಅವೆರಡನ್ನೂ ಅವನಿಗೆ ಮಾರಿಬಿಡಬೇಕಾಯ್ತು. ಆ ಮೇಲೂ ಅವನು ನನ್ನ ಜೀವ ತೆಗೆಯೋಕೆ ನಿಂತ'.

ಸಮುದ್ರರಾಜ ಅದಕ್ಕೆ ಹೇಳಿದ- 'ನೀನು ಇಲ್ಲಿಂದ ಏನಲ್ಲ ಏನು ತಗೊಂಡು ಹೋಗೇ ತೀರಬೇಕು. ಏನೂ ತಗೊಳ್ಳದೆ ಹೋಗೋಕೆ ನಾನು ಬಿಡೋದಿಲ್ಲ'. ಅವನು ಬಲವಂತ ಮಾಡಿದ್ದರಿಂದ ನಾನು ಅಲ್ಲಿಂದ ಒಂದೆರಡು ಬಾತುಕೋಳಿ ತಂದಿದ್ದೀನಿ. ಅಲ್ಲಿಂದ ಹೊರಟು ಬರೋವಾಗ ಸಮುದ್ರರಾಜ ನನ್ನ ಕೈ ಹಿಡಿದು ಕೊಂಡು ಆಗಾಗ್ಗೆ ಬರ್ತಾ ಇರು ಅಂತ ಹೇಳಿದ. ನನ್ನನ್ನು ಈಗ ತನ್ನ ಸ್ನೇಹಿತ

ಅಂತಲೇ ತಿಳಿದುಕೊಂಡಿದ್ದಾನೆ. ಅಲ್ಲಿಂದ ಹೊರಡೋವಾಗ, ನಾನು ಯಾವಾಗ ಅಲ್ಲಿಗೆ ಹೋಗಬೇಕಾದರೂ ಮೊದಲು ಅರಮನೆಯ ಬಾಗಿಲು ತಟ್ಟಬೇಕೆಂತಲೂ, ಜೋರಾಗಿ– "ನಾನು ಮಾಚ; ತುಂಬ ಸಾಚಾ ಮನುಷ್ಯ" ಅಂತ ಕೂಗ ಬೇಕೆಂತಲೂ ಹೇಳಿದ.

ಇದನ್ನು ಕೇಳುತ್ತಲೇ ಜಮೀನುದಾರ ಆಶ್ಚರ್ಯ ಚಕಿತನಾದ. ಮನಸ್ಸಿನಲ್ಲೇ ಅಂದುಕೊಂಡ– "ಇವನಂತೂ ಕಡುಮೂರ್ಖ. ನನಗೇನಾದರೂ ಅಲ್ಲಿಗೆ ಹೋಗೋಕೆ ಅವಕಾಶ ಸಿಕ್ಕಿದರೆ ಅಲ್ಲಿರೋ ಸುಂದರಿಯರನ್ನೆಲ್ಲಾ ನನ್ನ ವರನ್ನಾಗಿ ಮಾಡಿಕೊಂಡು ಬಿಡ್ತಿದ್ದೆ. ಆ ರಾಜನ್ನಕೊಂದು ಅವನ ಸಂಪತ್ತನ್ನೆಲ್ಲಾ ಅಟವೇರಿಸಿ ಬಿಡ್ತಿದ್ದೆ". ತನ್ನ ಮನಸ್ಸಿನಲ್ಲಿ ಬಂದ ಯೋಚನೆಯನ್ನು ಮಾಚ ನಿಗೆ ಹೇಳಿಯೇ ಬಿಟ್ಟ–"ಏನಯ್ಯ ಮಾಚ, ನನ್ನನ್ನು ಸಮುದ್ರರಾಜನ ಅರಮನೆಗೆ ಕರೆದುಕೊಂಡು ಹೋಗೋಕೆ ಆಗುತ್ತಾ? ನನ್ನನ್ನೇನಾದರೂ ಅಲ್ಲಿಗೆ ಕರೆದು ಕೊಂಡು ಹೋದರೆ ನನ್ನೆಲ್ಲಾ ಆಸ್ತೀನೂ ನಿನಗೆ ಕೊಟ್ಟುಬಿಡ್ತೀನಿ".

ಮಾಚ ಸ್ವಲ್ಪ ಬಿಗುವಿನಿಂದಲೇ ಹೇಳಿದ– "ನನಗೆ ನಿಮ್ಮ ಆಸ್ತಿ ಪಾಸ್ತಿ ಏನೂ ಬೇಡ. ನನಗೇನಾದರೂ ದುಡ್ಡಿನ ಮೇಲೆ ಆಸೆ ಇದ್ದರೆ ಸಮುದ್ರರಾಜ ನಿಂದಲೇ ತಗೊಳ್ತಿದ್ದೆ. ಅದರ ಮುಂದೆ ನಿಮ್ಮಾಸ್ತಿ ಏನೂ ಅಲ್ಲ."

ಜಮೀನುದಾರ ದೀನನಾಗಿ ಹೇಳಿದ– 'ನನ್ನ ಕ್ಷಮಿಸಿಬಿಡಪ್ಪಾ ಮಾಚ. ನನ್ನ ಹಿಂದಿನ ತಪ್ಪುಗಳನ್ನೆಲ್ಲಾ ಮರೆತು ಬಿಡು. ನನ್ನನ್ನೊಂದು ವೇಳೆ ಸಮುದ್ರ ರಾಜನ ಹತ್ತಿರಕ್ಕೆ ಕರೆದುಕೊಂಡು ಹೋದರೆ ಜೀವಮಾನಪರ್ಯಂತ ನಿನ್ನನ್ನ ಗೌರವಿ ಸ್ತೀನಿ.' ಹೀಗೆಂದು ಜಮೀನುದಾರ ಮಾಚನ ಮುಂದೆ ಮಂಡಿಯೂರಿದ.

"ಜಮೀನುದಾರ್ರೆ ನೀವೂ ಒಂದು ಥರಾ ವಿಚಿತ್ರ ಮನುಷ್ಯರು. ಒಳ್ಳೇದು. ನಿಮ್ಮನ್ನಲ್ಲಿಗೆ ಕರೆದುಕೊಂಡು ಹೋಗ್ತೀನಿ. ಆದರೆ ನೀವು ನಾನು ಏನು ಹೇಳ್ತೀನೋ ಅದಕ್ಕೆಲ್ಲಾ ಒಪ್ಪಬೇಕು. ಮೊತ್ತ ಮೊದಲು ನೀವು ನಾವಿಬ್ಬರೂ ಸಮುದ್ರರಾಜನ ಹತ್ತಿರ ಹೋಗ್ತಿದ್ದೀವೀಂತ ಯಾರಿಗೂ ಹೇಳಕೂಡದು. ಯಾರಿಗಾದರೂ ಗೊತ್ತಾಯಿತೂಂದ್ರೆ ಸಮುದ್ರರಾಜ ಬಾಗಿಲು ತೆಗೆಯೋಲ್ಲ. ಎರಡನೇದು ನೀವು ನಿಮಗೆ ಕೂತುಕೊಳ್ಳೋಕೆ ಒಂದು ಮಣ್ಣಿನ ಪಾತ್ರೆಯನ್ನೂ

ನನಗೊಂದು ಮರದ ತೊಟ್ಟಿಲನ್ನೂ ಈ ತಕ್ಷಣ ಮಾಡಿಸಬೇಕು. ಆ ಪಾತ್ರೆಯನ್ನು ಹೊಡಿಯೋಕೆ ನನಗೊಂದು ಕಬ್ಬಿಣದ ಸಲಾಕೇನೂ ಬೇಕು.

ಎಲ್ಲಾ ಸಿದ್ಧತೆಯನ್ನೂ ಮಾಡಿಕೊಂಡು ಮಾಚನೂ ಜಮೀದಾರನೂ ಸಮುದ್ರದ ಕಡೆ ಹೊರಟರು. ಸಮುದ್ರಮಧ್ಯಕ್ಕೆ ಹೋಗುತ್ತಿದ್ದ ಹಾಗೆಯೇ ಜಮೀನುದಾರ ಹೇಳಿದ –"ಮಾಚ ಯಾಕಿನ್ನೂ ಬಾಗಿಲು ತೆಗೆಯಲೇ ಇಲ್ಲ? ಬಾಗಿಲು ತೆಗೆಯೋಕೆ ಬೇಗ ಏನಾದರೂ ಉಪಾಯ ಮಾಡು".

ಮಾಚ ತನ್ನ ಮರದ ತೊಟ್ಟಿಲನ್ನು ಹಗುರವಾಗಿ ಕುಟ್ಟತೊಡಗಿದ. ಆದರೆ ಜಮೀನುದಾರನಿಗೆ ತಾಳ್ಮೆ ಎಲ್ಲಿ? ಅವನು ಅತ್ಯಂತ ಸುಂದರಿಯರಾದ ಅಪ್ಸರೆಯರನ್ನೆಲ್ಲಾ ತನ್ನ ಹೆಂಡಿರನ್ನಾಗೆ ಮಾಡಿಕೊಳ್ಳುವ ಯೋಚನೆಯಲ್ಲಿದ್ದ. ಅಷ್ಟೇ ಅಲ್ಲ; ಸಮುದ್ರರಾಜನನ್ನು ಕೊಂದು ಅವನ ಸಿರಿಸಂಪತ್ತೆಲ್ಲವನ್ನೂ ದಕ್ಕಿಸಿಕೊಳ್ಳುವ ಕನಸು ಕಾಣುತ್ತಿದ್ದ. ಜಮೀನುದಾರ ಬಲವಂತ ಮಾಡಿ ಹೇಳಿದ- "ಮಾಚ ನೀನು ನನ್ನ ಮಣ್ಣಿನ ಪಾತ್ರೆಯನ್ನು ಜೋರಾಗಿ ಬಾರಿಸು. ಮರದ್ದಕ್ಕಿಂತ ಮಣ್ಣಿನದು ಜಾಸ್ತಿ ಶಬ್ದ ಬರುತ್ತೆ".

ಮಾಚ ಅವನ ಮಣ್ಣಿನ ಪಾತ್ರೆಯನ್ನು ಬಾರಿಸತೊಡಗಿದ. ಆದರೆ ಸಮುದ್ರರಾಜ ಇನ್ನೂ ಬಾಗಿಲು ತೆಗೆಯಲೇ ಇಲ್ಲ. ಜಮೀನುದಾರನಿಗೆ ಒಂದೊಂದು ನಿಮಿಷ ಕಳೆಯುವುದೂ ಕಷ್ಟವಾಯಿತು. ಮಾಚನಿಗೆ ಮತ್ತೆ ಹೇಳಿದ –"ನೀನು ಗಟ್ಟಿಯಾಗಿ ಕೂಗಿ ಹೇಳು; ನಾನು ಮಾಚ, ತುಂಬ ಸಾಚಾ ಮನುಷ್ಯ ಅಂತ. ಹಾಗೇ ನನ್ನ ಮಣ್ಣಿನ ಪಾತ್ರೆಯನ್ನು ಜೋರಾಗಿ ಕುಟ್ಟು".

ಮಾಚ ಅವನ ಮಾತಿಗೆ ಹೂಗುಟ್ಟುತ್ತ ಕಬ್ಬಿಣದ ಸಲಾಕೆಯಿಂದ ಮಣ್ಣಿನ ಪಾತ್ರೆಯನ್ನು ಜೋರಾಗಿ ಬಾರಿಸಿದ. ಮಣ್ಣಿನ ಪಾತ್ರೆ ನುಚ್ಚುನೂರಾಯಿತು ಜಮೀನುದಾರ ಸಮುದ್ರದ ಪಾಲಾದ.

ಬೆಟ್ಟದ ಹುಡುಗ

ಒಂದಾನೊಂದು ಕಾಲದ ಮಾತು. ಒಬ್ಬ ವೃದ್ಧದಂಪತಿಗಳಿಗೆ ಒಬ್ಬನೇ ಮಗ. ಅವರ ಏಕಮಾತ್ರ ಆಸ್ತಿ ಎಂದರೆ ಈ ಮಗನೊಬ್ಬನೇ.

ಅವನು ಬಹಳ ಚೂಟಿಯಾದ ಹುಡುಗ. ಅವನ ಹತ್ತಿರ ಒಂದು ಕಟ್ಟುಮಸ್ತಾದ ಕಪ್ಪುಕುದುರೆ ಹಾಗೂ ಒಂದು ಕಬ್ಬಿಣದ ಬಿಲ್ಲು ಬಾಣ ಇದ್ದುವು. ನಿತ್ಯವೂ ಅವನು ಬೇಟೆಯಾಡಲು ಬೆಟ್ಟದ ಮೇಲಕ್ಕೆ ಹೋಗುತ್ತಾ ಇದ್ದ ಮತ್ತು ತಂದೆ ತಾಯಿಗಳಿಗೆ ಅನ್ನ ಸಂಪಾದಿಸಿ ಹಾಕುತ್ತಿದ್ದ. ಅದೇ ಕಾರಣದಿಂದ ಅವನನ್ನು ಬೆಟ್ಟದ ಹುಡುಗನೆಂದೇ ಕರೆಯುತ್ತಿದ್ದರು.

ಆ ರಾಜ್ಯದ ರಾಣಿ ಬಹಳ ಕ್ರೂರಿ ಮತ್ತು ಪಿಶಾಚಿಯಂಥವಳು. ಒಂದು ದಿನ ಅವಳು ರಾಜನಿಗೆ ಹೇಳಿದಳು –" ಈಶಾನ್ಯದಿಕ್ಕಿನಲ್ಲಿ ಒಂದು ದೊಡ್ಡ ಸರೋವರವಿದೆ. ಅದರಲ್ಲಿ ಐವತ್ತು ಅಡಿ ಉದ್ದವಿರುವ ಒಂದು ಜಲಚರವಿದೆ. ಅದು ದಿನವೂ ಮಧ್ಯಾಹ್ನದ ಹೊತ್ತು ನೀರಿನಿಂದ ಹೊರಕ್ಕೆ ಬಂದು ಬಿಸಿಲು ಕಾಯಿಸುತ್ತೆ. ಯಾರನ್ನಾದರೂ ಕಳಿಸಿ ನೀವು ಯಾಕೆ ಅದನ್ನು ಹೊಡೆಸಿ ಹಾಕಬಾರದು ? ಅದರ ಚರ್ಮದಿಂದ ಎಂಥ ಒಳ್ಳೆಯ ಪೋಷಾಕು ಮಾಡಬಹುದು ಗೊತ್ತೆ? ಅದನ್ನು ಹಾಕಿ ಕೊಂಡರೆ ಚಳಿಗಾಲದಲ್ಲಿ ಬೆಚ್ಚಗಿರುತ್ತದೆ. ಬೇಸಿಗೆಯಲ್ಲಿ ತಂಪಾಗಿರುತ್ತೆ. ನಿಜವಾಗಿಯೂ ಆ ಪೋಷಾಕು ನಮಗೊಂದು ಬೆಲೆ ಬಾಳುವ ನಿಧಿಯಾಗುತ್ತೆ."

ರಾಜ ಯಾವತ್ತೂ ರಾಣಿ ಹೇಳಿದ ಹಾಗೆ ಕೇಳುತ್ತಿದ್ದ. ರಾಣಿಯ ಸಲಹೆಯನ್ನು ಒಪ್ಪಿದ. ಜಲಚರವನ್ನು ಹೊಡೆದು ಹಾಕಲು ಹತ್ತು ಜನ ಅಧಿಕಾರಿಗಳನ್ನೂ ನೂರು ಜನ ಸೈನಿಕರನ್ನೂ ಕಳುಹಿಸಿದ. ಎರಡುವಾರದ ಒಳಗಾಗಿ ಆ ರಾಕ್ಷಸ ಜಂತುವನ್ನು ಹೊಡೆದು ತರಲು ಆಗದಿದ್ದರೆ ಮರಣದಂಡನೆ ವಿಧಿಸುವುದಾಗಿಯೂ ತಿಳಿಸಿದ.

ರಾಜನ ಆಜ್ಞೆಯಂತೆ ಮರುದಿನ ಹೊತ್ತಿಗೆ ಮುಂಚೆಯೇ ಹತ್ತು ಜನ ಅಧಿಕಾರಿಗಳೂ ನೂರುಜನ ಸೈನಿಕರೂ ಸರೋವರದಕಡೆ ಹೊರಟರು. ಸರೋವರದ ಹತ್ತಿರಕ್ಕೆ ಹೋಗಿ ಅಲ್ಲಿ ಒಂದು ಪೊದೆಯಲ್ಲಿ ಅವಿತುಕೊಂಡರು. ಮಧ್ಯಾಹ್ನದ ಹೊತ್ತಿಗೆ ಸರಿಯಾಗಿ ಆ ಪ್ರಾಣಿ ನೀರಿನಿಂದ ಹೊರಕ್ಕೆ ಬಂದಿತು. ತಮ್ಮ ಯೋಜನೆಯ ಪ್ರಕಾರ ಅವರೆಲ್ಲರೂ ಅದರ ಮೇಲೆ ಒಂದೇ ಸಲಕ್ಕೆ ಬಾಣಗಳನ್ನು ಬಿಟ್ಟರು. ಆದರೆ ಅವರೆಲ್ಲರ ಹೊಡೆತವು ವ್ಯರ್ಥವಾಯಿತು. ಯಾರೊಬ್ಬರ ಬಾಣವೂ ಅದರ ಶರೀರ ವನ್ನು ಭೇದಿಸಲಾಗಲಿಲ್ಲ.

ನಿತ್ಯವೂ ಹೀಗೇ ಆಗುತ್ತಿತ್ತು. ಅವರು ಬಾಣ ಬಿಡುತ್ತಿದ್ದರು. ಆದರೆ ಪರಿಣಾಮ ಮಾತ್ರ ಕಿಂಚಿತ್ತೂ ಇಲ್ಲ. ರಾಜನು ಗೊತ್ತುಪಡಿಸಿದ್ದ ಎರಡು ವಾರಗಳ ಗಡುವು ಮುಗಿಯುತ್ತ ಬಂತು. ಅವರಿಗೆ ತುಂಬ ಚಿಂತೆಗಿಟ್ಟು ಕೊಂಡಿತು. ಅದೇ ಸಮಯಕ್ಕೆ ವೃದ್ಧ ದಂಪತಿಗಳ ಮಗ "ಬೆಟ್ಟದ ಹುಡುಗ" ಕಾಡಿನಲ್ಲಿ ಅಲೆದಾಡುತ್ತ ಆ ಕಡೆ ಬಂದ. ಅವನನ್ನು ನೋಡಿ ಅವರಿಗೆ ಸ್ವಲ್ಪ ಆಶೆ ಅಂಕುರಿಸಿತು. ಅವರು ಓಡೋಡುತ್ತ ಅವನ ಹತ್ತಿರ ಹೋದರು. ತಮ್ಮ ಕೆಲಸದಲ್ಲಿ ಸಹಾಯ ಮಾಡಬೇಕೆಂದು ಕೇಳಿಕೊಂಡರು. ಅವರ ಮಾತಿಗೆ ಒಪ್ಪಿದ. ಆ ದಿನ ಜಲಚರ ಈಚೆಗೆ ಬಂದಾಗ ಬೆಟ್ಟದ ಹುಡುಗ ತನ್ನೆಲ್ಲ ಶಕ್ತಿಯಿಂದ ಬಿಲ್ಲಿಗೆ ಬಾಣ ಹೂಡಿ ಹೊಡೆದ. ಬಾಣ ಸರಿಯಾಗಿ ಅದರ ಎದೆಗೆ ತಾಕಿತು. ಆ ಕೂಡಲೇ ಅದರ ಕತೆ ಮುಗಿಯಿತು. ಅಧಿಕಾರಿಗಳ ಮತ್ತು ಸೈನಿಕರ ಕಳೆಗುಂದಿದ ಮುಖಗಳು ಅರಳಿದುವು. ಅವರು ಬೆಟ್ಟದಹುಡುಗನಿಗೆ ತಮ್ಮ ಕೃತಜ್ಞತೆಗಳನ್ನರ್ಪಿಸಿದರು. ಆದರೆ ಬೆಟ್ಟದ ಹುಡುಗ ಹೇಳಿದ– " ನನಗೆ ನೀವು ಕೃತಜ್ಞತೆಗಳನ್ನರ್ಪಿಸ ಬೇಕಾದ್ದಿಲ್ಲ. ನಾನು ನಿಮ್ಮನ್ನು ಕೇಳಿ ಕೊಳ್ಳುವುದಿಷ್ಟೆ; ರಾಜನ ಹತ್ತಿರ ಹೋಗಿ ಇದನ್ನು ಹೊಡೆದವನು ನಾನು ಎಂದು ಹೇಳಬೇಡಿ." ಅಷ್ಟು ಹೇಳಿ ಕೂಡಲೇ ಕುದುರೆಯೇರಿ ಮನೆಗೆ ಬಂದು ಬಿಟ್ಟ.

ಅಧಿಕಾರಿಗಳು ಮತ್ತು ಸೈನಿಕರು ಜಲಚರವನ್ನು ತಂದು ರಾಜನಿಗೆ ಕೊಟ್ಟರು. ರಾಜನಿಗೆ ಬಹಳ ಸಂತೋಷವಾಯಿತು. " ಬೇಗ ಇದರ ಚರ್ಮವನ್ನು ಸುಲಿದು ಪೋಷಾಕು ಮಾಡಿ ಕೊಡಿ " – ಎಂದು ಅವರಿಗೆ ಅಪ್ಪಣೆ ಮಾಡಿದ

ಅವರು ಅದರ ಚರ್ಮ ತೆಗೆಯಲು ಪ್ರಯತ್ನಿಸಿ ನೋಡಿದರು. ಅತ್ಯಂತ ಹರಿತವಾದ ಕತ್ತಿಗಳನ್ನು ಉಪಯೋಗಿಸಿದರು. ಆದರೂ ಅದನ್ನು ಸುಲಿಯಲು ಅವರ ಕೈಯಲ್ಲಾಗಲಿಲ್ಲ. ಇದನ್ನು ನೋಡಿದ ರಾಜನಿಗೆ ಮೈಯೆಲ್ಲಾ ಬೆಂಕಿಯಾಯಿತು. ಅವನು ಅವರನ್ನು ಗದರಿಕೊಂಡು ಕೇಳಿದ– "ನೀವು ಇದನ್ನು ಹೊಡೆದವರು ಅಂತ ಅದು ಹ್ಯಾಗೆ ಹೇಳ್ತೀರಿ ? ಇದರ ಚರ್ಮ ಸುಲಿಯುವುದಕ್ಕೆ ಆಗದೆ ಇದ್ದವರು ಹೊಡೆಯೋದು ಹೇಗೆ ಸಾಧ್ಯ? ನೀವು ಸುಳ್ಳು ಹೇಳ್ತಿದ್ದೀರಿ. ಇದನ್ನು ಹೊಡೆಯೋದರಲ್ಲಿ ಖಂಡಿತ ಇನ್ಯಾವುದೋ ವ್ಯಕ್ತಿಯ ಕೈವಾಡ ಇರಬೇಕು. ನಿಜ ಹೇಳಿ, ಇಲ್ಲದೆ ಇದ್ದರೆ ನಿಮಗೆ ಭಾರೀ ಶಿಕ್ಷೆ ಕೊಡ್ತೀನಿ.

ಅಧಿಕಾರಿಗಳು ಮತ್ತು ಸೈನಿಕರು ಹೆದರಿಕೆಯಿಂದ ನಡುಗ ತೊಡಗಿದರು. ಅವರು ರಾಜನಿಗೆ ಬೆಟ್ಟದ ಹುಡುಗನ ಹೆಸರನ್ನು ಹೇಳಿ ಬಿಟ್ಟರು. ಕೂಡಲೇ ರಾಜ ಬೆಟ್ಟದ ಹುಡುಗನನ್ನು ಕರೆಸಿ ಆಜ್ಞಾಪಿಸಿದ– "ಇದರ ಚರ್ಮ ತೆಗೆದು ಅದರ ಪೋಷಾಕು ಮಾಡಿಸಿ ಬೇಗ ನನ್ನ ಹತ್ತಿರ ಕಳಿಸು."

ಬೆಟ್ಟದ ಹುಡುಗ ತನ್ನ ಹರಿತವಾದ ಕತ್ತಿಯಿಂದ ಜಲಚರದ ಚರ್ಮವನ್ನು ಸುಲಿದ. ಅದರಿಂದ ಉಡುಪನ್ನು ತಯಾರಿಸಿ ರಾಜನಿಗೆ ಒಪ್ಪಿಸಿದ.

ರಾಜ ಅದನ್ನು ತೊಟ್ಟುಕೊಂಡು ರಾಣಿಗೆ ತೋರಿಸಲು ಹೋದ. ರಾಣಿ ಅದನ್ನು ಚೆನ್ನಾಗಿ ದೃಷ್ಟಿಸಿ ನೋಡಿ ವ್ಯಂಗ್ಯವಾಗಿ ಹೇಳಿದಳು – "ಹೊಂ ಬಟ್ಟೆಯೇನೋ ಚೆನ್ನಾಗಿದೆ. ಆದರೆ ಇದರ ಜೊತೆಯ ಟೋಪಿ ಇಲ್ದೆ ಇರೋದ್ರಿಂದ ಇದು ನಿಮಗೆ ಚೆನ್ನಾಗಿ ಕಾಣೋಲ್ಲ. ನೀವು ಒಂದು ವೇಳೆ ದೈತ್ಯರಾಜನ ಮಾಯಾ ಟೋಪಿಯನ್ನು ಸಂಪಾದಿಸಿಕೊಂಡು ಹಾಕಿ ಕೊಂಡು ಬಿಟ್ರೆ ಈ ಜಗತ್ತಿನಲ್ಲೇ ನಿಮ್ಮ ಸಮಾನ ಯಾರೂ ಇಲ್ಲ".

ರಾಜ ಏದುಸಿರು ಬಿಡುತ್ತ ಹೇಳಿದ – "ಏನು! ಮಾಯಾ ಟೋಪೀನೆ! ಅದೂ ದೈತ್ಯರಾಜನ ತಲೇ ಮೇಲಿರೋದು! ಅದ್ಯಾವೋನಪ್ಪಾ ಅಂಥಾವೀರ; ದೈತ್ಯರಾಜನ ಜೊತೇಲಿ ಹೋರಾಡುವಂಥ ಎದೆಗಾರಿಕೆ ಇರೋನು"? ನಿಜವಾದ ಸಂಗತಿ ಏನೆಂದರೆ ಬೆಟ್ಟದ ಹುಡುಗನ ಪರಾಕ್ರಮ ದುಷ್ಟರಾಣಿಗೆ ಮುಳ್ಳಾಗಿತ್ತು. ಇಂಥ ಶೂರನೂ ವೀರನೂ ಆದ ವ್ಯಕ್ತಿ ರಾಜ್ಯಕ್ಕೆ ಎಂದಿದ್ದರೂ ಅಪಾಯಕಾರಿ

ಯಾಗಬಹುದು ಎಂಬ ವಿಚಾರ ಅವಳ ಮನಸ್ಸಿಗೆ ಬಂದಿತು. ಅದಕ್ಕೋಸ್ಕರ ದೈತ್ಯರಾಜನ ಟೋಪಿಯನ್ನು ತರಲು ಅವನನ್ನು ಕಳುಹಿಸಬೇಕೆಂದು ಬಯಸಿದಳು. ಕಾರಣ ಅವನು ಮತ್ತೆ ಬದುಕಿ ಬರದೆ ಇರಲಿ ಎನ್ನುವುದೇ ಉದ್ದೇಶ.

ರಾಣಿ ಹೇಳಿದಳು– "ದೈತ್ಯ ರಾಜನ ಟೋಪಿ ತರೋದು ತುಂಬಾ ಕಷ್ಟದ ಕೆಲಸ ಅನ್ನೋದನ್ನು ಒಪ್ತೀನಿ. ಬೆಟ್ಟದ ಹುಡುಗನನ್ನು ಬಿಟ್ಟರೆ ಬೇರೆ ಯಾರಿಂದಲೂ ಈ ಕೆಲಸ ಸಾಧ್ಯವಿಲ್ಲ. ಆದ್ದರಿಂದ ಅವನಿಗೇ ಈ ಕೆಲಸ ನೇಮಿಸಿ."

ರಾಜ ಬೆಟ್ಟದ ಹುಡುಗನನ್ನು ಕರೆದು ಹೇಳಿದ- "ನೀನು ದೈತ್ಯರಾಜನ ಹತ್ತಿರ ಹೋಗಿ ಅವನ ಟೋಪಿ ತೆಗೆದುಕೊಂಡು ಬಂದು ನನಗೆ ಕೊಡು. ಇದನ್ನು ನೀನು ಮಾಡಲಿಲ್ಲಾಂದ್ರೆ ನಿನ್ನ ತಲೆ ಕತ್ತರಿಸಿ ಹಾಕ್ತೀನಿ."

ಬೆಟ್ಟದ ಹುಡುಗ ತನ್ನ ಕಪ್ಪು ಕುದುರೆಯನ್ನೇರಿ ದೈತ್ಯರಾಜನ ಟೋಪಿಯ ಅನ್ವೇಷಣೆಗೆ ಹೊರಟ. ತನ್ನ ವೇಗದ ಕುದುರೆಯ ಸಹಾಯದಿಂದ ದೊಡ್ಡ ದೊಡ್ಡ ಪರ್ವತ ಶಿಖರಗಳು, ಭಾರಿ ಭಾರಿ ಬಂಡೆಗಳು ಹಾಗೂ ಉಕ್ಕಿ ಹರಿಯುವ ನದಿಗಳನ್ನು ದಾಟಿದ. ಸಾಕಷ್ಟು ದಾರಿ ಸಾಗಿದ ಮೇಲೆ ಅವನೊಂದು ಡೇರೆಯ ಬಳಿಗೆ ಹೋದ. ಕುದುರೆಯಿಂದಿಳಿದು ಡೇರೆಯೊಳಕ್ಕೆ ಹೋದ. ಅಲ್ಲಿ ಮೂರು ಜನ ಯುವತಿಯರು ಇದ್ದರು. ಮೂರು ಜನವೂ ಒಂದು ವಿಲಕ್ಷಣ ರೀತಿಯಲ್ಲಿರುವುದನ್ನು ಕಂಡ. ಒಬ್ಬಳು ಅಳುತ್ತಾ ಇದ್ದಳು. ಇನ್ನೊಬ್ಬಳು ಹಾಡುತ್ತಿದ್ದಳು. ಮತ್ತೊಬ್ಬಳು ನಗುತ್ತಿದ್ದಳು. ಬೆಟ್ಟದ ಹುಡುಗನಿಗೆ ಏನೊಂದೂ ಚೂರೂ ಗೊತ್ತಾಗಲಿಲ್ಲ. ಈ ರೀತಿಗೆ ಏನು ಕಾರಣ ಎಂದು ವಿಚಾರಿಸಿದ.

ಅವರು ಹೇಳಿದರು– "ನಾವು ಮೂವರೂ ಪಕ್ಷಿಗಳ ರಾಣಿಯಾದ ಅಮರಪಕ್ಷಿಯ ಮಕ್ಕಳು. ಈಶಾನ್ಯದಿಕ್ಕಿನಲ್ಲೊಂದು ಅಜಗರ ಇದೆ. ಕೆಲವು ದಿನಗಳ ಕೆಳಗೆ ಅದು ನಮ್ಮ ಹತ್ತು ಜನ ಅಕ್ಕಂದಿರನ್ನು ನುಂಗಿ ಹಾಕಿತು. ನಾವು ಒಟ್ಟು ಹದಿಮೂರು ಜನ ಇದ್ದೆವು. ನಮ್ಮ ತಾಯಿ ಅದರ ಜೊತೆಯಲ್ಲಿ ಭಯಂಕರವಾಗಿ ಹೋರಾಡಿದಳು. ಆದರೆ ಕೊನೆಗೆ ಅವಳೂ ಸೋತುಹೋದಳು. ಈ ದಿನ ನಮ್ಮ ಸರದಿ. ಅಜಗರ ನಮ್ಮ ಮೂರು ಜನರನ್ನೂ ಒಬ್ಬೊಬ್ಬರನ್ನಾಗಿ ತಿನ್ನಲಿದೆ. ಇಂದು ಯಾರ ಸರದಿಯೋ ಅವಳು ಅಳುತ್ತಿದ್ದಾಳೆ. ನಾಳೆಯ

ಸರದಿ ಯಾರದ್ದೋ ಅವಳು ಹಾಡುತ್ತಿದ್ದಾಳೆ. ನಾಡಿದ್ದು ಯಾರದ್ದೋ ಅವಳು ನಗುತ್ತಿದ್ದಾಳೆ".

" ಹೆದರಬೇಡಿ ನಾನು ಆ ದುಷ್ಟ ಅಜಗರವನ್ನು ಸಾಯಿಸುತ್ತೀನಿ", ಎಂದು ಅವರಿಗೆ ಸಮಾಧಾನ ಹೇಳಿ ಡೇರೆಯಿಂದ ಈಚೆಗೆ ಬಂದ. ತನ್ನ ಕುದುರೆ ಯನ್ನೇರಿ ಈಶಾನ್ಯದ ಕಡೆಗೆ ಧಾವಿಸಿದ. ಹೆಬ್ಬಾವು ತಿರುಗಾಡುತ್ತಿದ್ದ ಜಾಗವನ್ನು ತಲುಪಿದಾಗ ಇದ್ದಕ್ಕಿದ್ದಂತೆ ಆಕಾಶದಲ್ಲಿ ಕತ್ತಲೆ ಕವಿಯಿತು. ಬಿರುಗಾಳಿಯ ಹೊಡೆತದಿಂದ ಆಕಾಶವೆಲ್ಲ ಕಲ್ಲುಮಣ್ಣುಗಳಿಂದ ತುಂಬಿ ಹೋಯಿತು. ಅದೇ ಸಮಯಕ್ಕೆ ಬಾಯಿ ಅಗಲಿಸಿಕೊಂಡು ನಾಲಿಗೆ ತೆರೆದುಕೊಂಡು ಇದ್ದ ಒಂದು ಹೆಬ್ಬಾವು ಕಣ್ಣಿಗೆ ಬಿತ್ತು. ಹೆಬ್ಬಾವು ಕೂಡಲೇ ಬೆಟ್ಟದ ಹುಡುಗನನ್ನು ನುಂಗುವುದಕ್ಕೆ ಧಾವಿಸಿತು. ಬೆಟ್ಟದ ಹುಡುಗ ಒಮ್ಮೆಲೇ ತನ್ನ ಬಿಲ್ಲನ್ನೆಳೆದು ಅದರ ಬಾಯಿಗೆ ಬಾಣವನ್ನು ಬಿಟ್ಟ. ಬಾಣನೇರವಾಗಿ ಅದರ ಬಾಯಿಗೆ ತಾಕಿತು. ಕೆಲವೇ ಕ್ಷಣಗಳಲ್ಲಿ ಹೆಬ್ಬಾವು ಪ್ರಾಣ ಬಿಟ್ಟಿತು.

ಮೂರೂ ಜನ ಯುವತಿಯರು ಮತ್ತು ಬೆಟ್ಟದ ಹುಡುಗ ಹೆಬ್ಬಾವಿನ ಸುತ್ತನಿಂತಿದ್ದರು. ಬಹಳ ಉತ್ಸುಕತೆಯಿಂದ ನೋಡುತ್ತಿದ್ದರು. ಸ್ವಲ್ಪ ಹೊತ್ತಿನ ನಂತರ ಇದ್ದಕ್ಕಿದ್ದಂತೆ ಆಕಾಶದಿಂದ ಒಂದು ಬಿಳಿಯ ಆಕಾರ ಭೂಮಿಯ ಮೇಲೆ ಇಳಿಯುತ್ತಿರುವಂತೆ ಕಂಡಿತು. ಭೂಮಿಯನ್ನು ಮುಟ್ಟುತ್ತಿದ್ದ ಹಾಗೆಯೇ ಅದು ಅಮರ ಪಕ್ಷಿಯ ಆಕಾರವನ್ನು ತಾಳಿತು. ಅದು ಬೇರೆ ಇನ್ನಾವುದೂ ಆಗಿರದೆ ಆ ಮೂವರು ಯುವತಿಯರ ತಾಯಿ.

ತನ್ನ ಮಕ್ಕಳನ್ನು ಕೇಳಿತು – " ಯಾರು ಈ ಮನುಷ್ಯ"?

"ಇವನು ನಮಗೆ ಬಹಳ ಉಪಕಾರ ಮಾಡಿದ್ದಾನೆ. ಹೆಬ್ಬಾವನ್ನು ಕೊಂದು ನಮ್ಮನ್ನು ಉಳಿಸಿದವನು ಈತನೇ."

ತನ್ನ ಮಕ್ಕಳ ಮಾತನ್ನು ಕೇಳಿ ಪಕ್ಷಿಗಳ ರಾಣಿಗೆ ಅತ್ಯಂತ ಹರ್ಷ ವಾಯಿತು. ಅದು ಬೆಟ್ಟದ ಹುಡುಗನ ಕಡೆ ತಿರುಗಿ ಹೇಳಿತು– "ಮಗು ನೀನು ಎಲ್ಲಿಂದ ಬಂದೆಯಪ್ಪಾ ? ಎಲ್ಲಿಗೆ ಹೋಗಬೇಕೂಂತ ಇದ್ದೀಯ ? ಇಲ್ಲಿ ಯಾತ ಕ್ಕೋಸ್ಕರ ಬಂದಿದ್ದೆ ? ನಿನ್ನ ಉಪಕಾರವನ್ನು ನಾನು ಎಂದೂ ಮರೆಯೋಲ್ಲ.

ಯಾವಾಗ ಏನೇ ಕಷ್ಟ ಬಂದರೂ ನನಗೆ ತಿಳಿಸಬೇಕು. ನಿನ್ನ ಸಹಾಯಕ್ಕೆ ಓಡೋಡಿ ಬರ್ತೀನಿ. ನೀನು ನನ್ನ ಮೂರು ಜನ ಹೆಣ್ಣು ಮಕ್ಕಳನ್ನೂ ಸಾವಿನ ದವಡೆಯಿಂದ ಪಾರು ಮಾಡಿದ್ದೀ. ಆದ್ದರಿಂದ ಕನಿಷ್ಠ ಪಕ್ಷ ಮೂರು ಸಲ ನಿನಗೆ ಸಹಾಯ ಮಾಡೋದು ನನ್ನ ಧರ್ಮ".

ಅವನು ಹೇಳಿದ– "ದೈತ್ಯ ರಾಜನ ಟೋಪಿ ತರುವ ಜವಾಬ್ದಾರಿಯನ್ನು ನನಗೆ ಒಪ್ಪಿಸಿದ್ದಾನೆ. ಒಂದು ವೇಳೆ ನಾನು ಈ ಕೆಲಸ ಪೂರ್ತಿ ಮಾಡದೆ ಇದ್ದರೆ ನನ್ನ ತೆಗೆಸುವುದಾಗಿಯೂ ಹೇಳಿದ್ದಾನೆ". ಪಕ್ಷಿ ಹೇಳಿತು– "ನೀನೇನೂ ಯೋಚನೆ ಮಾಡಬೇಡ. ಈ ಕೆಲಸದಲ್ಲಿ ನಾನು ನಿನಗೆ ಸಹಾಯ ಮಾಡ್ತೀನಿ. ಬಾ ನನ್ನ ಬೆನ್ನಮೇಲೆ ಕೂತುಕೋ". ಬೆಟ್ಟದ ಹುಡುಗ ಅದರ ಬೆನ್ನೇರಿದ. ಅಮರ ಪಕ್ಷಿ ತನ್ನ ಗರಿಗೆದರಿ ಆಕಾಶದ ಕಡೆ ಹಾರಿತು. ದೈತ್ಯ ರಾಜನ ಬಳಿಗೆ ಕೊಂಡೊಯ್ಯುತ್ತಿತ್ತು. ದಾರಿಯಲ್ಲಿ ಬೆಟ್ಟದ ಹುಡುಗನಿಗೆ ಹೇಳಿತು–"ನಾವು ದೈತ್ಯರಾಜನ ಮನೆಯ ಹತ್ತಿರ ಹೋದ ಕೂಡಲೇ ನೀನು ನನ್ನ ರೆಕ್ಕೆಗಳನ್ನು ಗಟ್ಟಿಯಾಗಿ ಹಿಡಿದುಕೊಂಡು " ದೈತ್ಯರಾಜ! ಓ ದೈತ್ಯರಾಜ! ಹೊರಕ್ಕೆ ಬಾ. ಬೇಗ ಹೊರಕ್ಕೆ ಬಾ. ಸೂರ್ಯ ಪಶ್ಚಿಮ ದಿಕ್ಕಿನಲ್ಲಿ ಹುಟ್ಟಿದ್ದಾನೆ" –ಎಂದು ಜೋರು ಜೋರಾಗಿ ಕಿರುಚಬೇಕು. ನಿನ್ನ ಧ್ವನಿ ಕೇಳಿ ದೈತ್ಯರಾಜ ಯಾವಾಗ ಈಚೆಗೆ ಬರ್ತಾನೋ ಆ ತಕ್ಷಣ ನಾನು ಅವನ ಮೇಲೆ ಹಾಯ್ದು ಅವನ ಟೋಪಿ ಕಿತ್ತು ಕೊಂಡು ಆಕಾಶದಲ್ಲಿ ಹಾರಿಹೋಗ್ತೀನಿ. ನೀನು ಮಾತ್ರ ಆಗ ಹುಶಾರಾಗಿರ ಬೇಕು. ನನ್ನನ್ನು ಭದ್ರವಾಗಿ ಹಿಡಿದುಕೊಂಡಿರಬೇಕು. ಎಂಥ ಸಂದರ್ಭದಲ್ಲೂ ಸ್ವಲ್ಪವೂ ಕೈಸಡಿಲಿಸಕೂಡದು".

ದೈತ್ಯರಾಜನ ಮನೆ ತಲುಪಲು ಆ ಪಕ್ಷಿಗೆ ಹೆಚ್ಚು ಹೊತ್ತೇನೂ ಹಿಡಿಯಲಿಲ್ಲ. ಕೆಳಕ್ಕೆ ಹಾರಿ ಅವನ ಮನೆಯ ಮೇಲೆ ಸುತ್ತ ಹಾಕುವುದಕ್ಕೆ ಶುರು ಮಾಡಿದಾಗ ಬೆಟ್ಟದ ಹುಡುಗ- 'ಓ ದೈತ್ಯರಾಜ! ಓ ದೈತ್ಯರಾಜ! ಈಚೆಗೆ ಬಾ. ಬೇಗ ಬಾ. ಸೂರ್ಯ ಪಶ್ಚಿಮ ದಿಕ್ಕಿನಲ್ಲಿ ಹುಟ್ಟಿದ್ದಾನೆ' ಎಂದು ಗಟ್ಟಿಯಾಗಿ ಕೂಗಿದ.

ಆ ಸಮಯದಲ್ಲಿ ದೈತ್ಯರಾಜ ತನ್ನ ಮನೆಯ ಒಳಗಡೆ ಮದ್ಯ ಕುಡಿಯುತ್ತಾ ಕೂತಿದ್ದ. ಹೊರಗಡೆ ಯಾರದ್ದೋ ಶಬ್ದ ಅವನ ನೆಮ್ಮದಿ ಕೆಡಿಸಿತು.

"ಓಹೋ ! ಇದ್ಯಾವುದೋ ಮನುಷ್ಯನ ಧ್ವನಿ ಇದ್ದ ಹಾಗಿದೆ. ನನ್ನ ಆಹಾರ ತನ್ನಷ್ಟಕ್ಕೆ ತಾನೇ ಕೈಗೆ ಸಿಕ್ಕಿದ ಹಾಗೆ ಆಯಿತು". ಎಂದು ಒಳಗೊಳಗೇ ಬಹಳ ಖುಷಿ ಪಟ್ಟ. ಈ ಸಂತೋಷದಲ್ಲೇ ಬೇಗ ಹೊರಕ್ಕೆ ಓಡಿದ.

ದೈತ್ಯರಾಜ ತಲೆ ಹೊರಕ್ಕೆ ಹಾಕುತ್ತಿದ್ದ ಹಾಗೆಯೇ ಪಕ್ಷಿಗಳ ರಾಣಿ ಅವನ ಟೋಪಿಯನ್ನು ಕಸಿದುಕೊಂಡು ಆಕಾಶದಲ್ಲಿ ಹಾರಿಹೋಯಿತು. ಆದರೆ ಟೋಪಿಯ ಪಟ್ಟಿ ತುಂಬ ಗಟ್ಟಿಯಾಗಿದ್ದದ್ದರಿಂದ ಅದಿನ್ನೂ ದೈತ್ಯರಾಜನ ತಲೆಗೆ ಕಚ್ಚಿಕೊಂಡೇ ಇತ್ತು. ಅದರಿಂದ ಟೋಪಿಯನ್ನು ಕಚ್ಚಿಕೊಂಡು ಪಕ್ಷಿ ಮೇಲಕ್ಕೆ ಹಾರಿದಾಗ ದೈತ್ಯರಾಜನೂ ಅದರ ಜೊತೆಯಲ್ಲೇ ಬಂದ. ಪಕ್ಷಿರಾಣಿ ಆಕಾಶದಲ್ಲಿ ಎತ್ತರದಲ್ಲಿ ಹಾರಿಹೋಗುತ್ತಿತ್ತು. ದೈತ್ಯರಾಜನೂ ಟೋಪಿಗೆ ಅಂಟಿಕೊಂಡೇ ಇದ್ದ. ಈಗ ಅವನಿಗೆ ಅದರಿಂದ ಬಿಡಿಸಿಕೊಳ್ಳಲು ಯಾವ ದಾರಿಯೂ ಇರಲಿಲ್ಲ. ಅವನು ಪೂರ್ತಿ ಅಸಹಾಯಕನಾಗಿದ್ದ. ಅಮರಪಕ್ಷಿ ಎಷ್ಟೆಷ್ಟು ಎತ್ತರಕ್ಕೆ ಹಾರುತ್ತಿತ್ತೋ ಪಟ್ಟಿಯೂ ಅಷ್ಟಷ್ಟೇ ಬಿಗಿಯಾಗುತ್ತಾ ಇತ್ತು. ಕೊನೆಗೆ ಅವನಿಗೆ ಉಸಿರಾಡುವುದೂ ಕಷ್ಟವಾಯಿತು. ಅದೇ ಸಮಯಕ್ಕೆ ಬೆಟ್ಟದ ಹುಡುಗ ತನ್ನ ಕಬ್ಬಿಣದ ಬಿಲ್ಲು ಬಾಣಗಳಿಂದ ಅವನ ತಲೆಗೆ ಗುರಿಯಿಟ್ಟ. ಆ ಏಟು ಬೀಳುತ್ತಲೇ ಪಟ್ಟಿ ಕಿತ್ತು ಹೋಯಿತು. ದೈತ್ಯರಾಜ ಧಡುಮ್ಮನೆ ನೆಲಕ್ಕೆ ಬಿದ್ದ. ಬೀಳುತ್ತಿದ್ದ ಹಾಗೇ ತಲೆಸುತ್ತು ಬಂದು ಕಣ್ಣಿಗೆ ಕತ್ತಲೆ ಕವಿಯಿತು. ತನ್ನ ಮಾಯಾಟೋಪಿಯನ್ನು ಯಾರು ತೆಗೆದುಕೊಂಡು ಹೋದರು ಅನ್ನುವುದರ ಪರಿವೇ ಆಗಲಿಲ್ಲ. ನಿರಾಶನಾಗಿ ಮನೆಗೆ ಹಿಂತಿರುಗಬೇಕಾಯಿತು.

ಬೆಟ್ಟದ ಹುಡುಗ ಸಂತೋಷದಿಂದ ಟೋಪಿ ತೆಗೆದುಕೊಂಡು ಮನೆಗೆ ಬಂದು ಟೋಪಿಯನ್ನು ರಾಜನಿಗೆ ಒಪ್ಪಿಸಿದ. ರಾಜ ಟೋಪಿಯನ್ನು ಹಾಕಿಕೊಂಡು ರಾಣಿಗೆ ಅದನ್ನು ತೋರಿಸಲು ಹೋದ. ಅತ್ಯಂತ ಕಠಿಣವಾದ ಈ ಕೆಲಸವನ್ನೂ ಯಾವಾಗ ಪೂರ್ತಿಮಾಡಿದ ಎನ್ನುವುದನ್ನು ರಾಣಿ ನೋಡಿದಳೋ ಆಗ ಅವಳು ಇನ್ನೊಂದು ಒಳಸಂಚು ಹೂಡಿದಳು. "ಈಗ ನಿಮ್ಮ ಹತ್ತಿರ ದೈವೀಪೋಷಾಕೂ ಇದೆ. ಮಾಯಾ ಟೋಪಿಯೂ ಇದೆ. ನಿಮ್ಮ ವೈಭವಕ್ಕೆ ಸರಿತೂಗುವಂಥವನು ಈ ಜಗತ್ತಿನಲ್ಲಿ ಇನ್ಯಾವನೂ ಇಲ್ಲ. ಇಷ್ಟಾದರೂ ನಿಮಗೆ ಈಗ ಇನ್ನು ಒಂದು

ವಸ್ತುವಿನ ಕೊರತೆ ಇದೆ. ಇದರ ಜೊತೆಗೆ ನಿಮಗೊಬ್ಬಳು ಅಪ್ಸರೆ ಸಿಕ್ಕಿದ್ದಾದರೆ ಕೋಡು ಮೂಡಿದ ಹಾಗೆ ಆಗುತ್ತೆ".

ರಾಣಿಯ ಮಾತಿಗೆ ಹೂಗುಟ್ಟುವುದನ್ನು ಎಂದೋ ಕಲಿತಿದ್ದ. ತಕ್ಷಣ ಒಪ್ಪಿ ರಾಣಿಗೆ ಹೇಳಿದ – " ಆದರೆ ಅಪ್ಸರೆಯನ್ನು ಹುಡುಕಿಕೊಂಡು ಬರಲು ಯಾರನ್ನು ಕಳಿಸಲಿ " ?

" ಬೆಟ್ಟದ ಹುಡುಗನನ್ನು ಬಿಟ್ಟರೆ ಇನ್ನು ಯಾರ ಕೈಲಿ ಈ ಕೆಲಸ ಆಗುತ್ತೆ " ಎಂದು ಹೇಳಿದಳು.

ರಾಜ ಬೆಟ್ಟದ ಹುಡುಗನನ್ನು ಕರೆಸಿ ಆಜ್ಞೆ ಮಾಡಿದ –" ಹೋಗು ನನಗೊಬ್ಬಳು ಸ್ವರ್ಗದ ಅಪ್ಸರೆಯನ್ನು ಹುಡುಕಿ ಕೊಂಡು ಬಾ. ನಿನ್ನ ಕೈಯಲ್ಲಾಗದೇ ಇದ್ದರೆ ನಿನ್ನ ತಲೆ ತೆಗೆಯಲಾಗುತ್ತೆ". ಅವನು ಅಂಗಲಾಚಿದ –"ಪ್ರಭೂ ಇದನ್ನು ಬಿಟ್ಟು ಬೇರೆ ಇನ್ನು ಏನಾದರೂ ಹೇಳಿ. ನಾನು ಮಾಡ್ತೀನಿ. ಆದರೆ ಸ್ವರ್ಗಕ್ಕೆ ಹೋಗಿ ಅಪ್ಸರೆಯನ್ನು ತರೋದು ನನ್ನ ಶಕ್ತಿಗೆ ಮೀರಿದ್ದು".

ರಾಜ ಅವನ ಮೇಲೆ ರೇಗಿದ – "ನನ್ನ ಬಾಯಿಂದ ಬಂದ ಒಂದೊಂದು ಶಬ್ಧವೂ ಕಾನೂನು ಅಂತ ನಿಂಗೊತ್ತಿಲ್ವೇನು ? ನನ್ನ ಕಾನೂನು ಉಲ್ಲಂಘಿಸುವಷ್ಟು ಧೈರ್ಯ ಇದೆಯೇನು ನಿಂಗೆ?" ಸೈನಿಕರು ಅವನನ್ನು ಅರಮನೆಯಿಂದ ಎಳೆದು ಹೊರಕ್ಕೆ ಹಾಕಿದರು. ನಿರಾಶನಾಗಿ ಮತ್ತೆ ಅಮರ ಪಕ್ಷಿಯ ಬಳಿಗೆ ಹೋದ.

ಪಕ್ಷಿಗಳ ರಾಣಿ ಅವನನ್ನು ತನ್ನ ಬೆನ್ನಿನ ಮೇಲೆ ಕೂಡಿಸಿಕೊಂಡು ಆಕಾಶದ ಕಡೆ ಹಾರಿತು. ಆಕಾಶದಲ್ಲಿ ಹೋಗುತ್ತ ಹೋಗುತ್ತ ಒಂದು ಮನೆಯ ಹತ್ತಿರ ನಿಂತುಕೊಂಡಿತು. ಆ ಮನೆಯಲ್ಲಿ ಒಬ್ಬ ಮುದುಕ ತನ್ನ ಹೆಂಡತಿ ಮತ್ತು ಪ್ರಾಯದ ಮಗಳೊಂದಿಗೆ ಇರುತ್ತಿದ್ದ. ಬೆಟ್ಟದ ಹುಡುಗ ಅವರಿಗೆ ತಲೆ ಬಾಗಿ ನಮಸ್ಕರಿಸಿದ. ಅವರು ಅವನನ್ನು ಆದರದಿಂದ ಕೋಣೆಯಲ್ಲಿ ಕೂಡಿಸಿದರು.

"ಅಯ್ಯಾ ಹೊಳೆಯುವ ಕಣ್ಣಿನ ಸುಂದರ ಯುವಕ, ನಿನ್ನ ಪಯಣದ ಅಂತಿಮ ಗುರಿಏನು?"

ಅವನು ಹೇಳಿದ– "ಒಬ್ಬ ಅಪ್ಸರೆಯನ್ನು ಹುಡುಕಿಕೊಂಡು ಸ್ವರ್ಗಕ್ಕೆ ಹೋಗ ಬೇಕಾಗಿದೆ".

ವೃದ್ಧ ದಂಪತಿಗಳು ಹೇಳಿದರು– "ಭೇಷ್ ಮಗನೆ! ಅಪ್ಸರೆಯ ಜೊತೆಯಲ್ಲಿ ವಾಪಸ್ ಬರುವಾಗ ನಮಗೆ ಖಂಡಿತ ಕಾಣಿಸಿಕೊಳ್ಳಬೇಕು".

ಹಿಂತಿರುಗಿ ಬರುವಾಗ ಅವರನ್ನು ಭೇಟಿ ಮಾಡುವುದಾಗಿ ಬೆಟ್ಟದ ಹುಡುಗ ಭಾಷೆ ಕೊಟ್ಟ. ಅವರು ಅವನಿಗೆ ಊಟಕ್ಕೆ ಹಾಕಿದರು. ಊಟವಾದ ಮೇಲೆ ಮತ್ತೆ ತನ್ನ ದಾರಿಹಿಡಿದ. ಇದೇ ರೀತಿ ದಾರಿಯಲ್ಲಿ ಅವನಿಗೆ ಇನ್ನೆರಡು ಕುಟುಂಬಗಳು ಸಿಕ್ಕಿದವು. ಆ ಕುಟುಂಬಗಳಲ್ಲೂ ಒಂದೊಂದರಲ್ಲೂ ಮುದುಕ, ಮುದುಕಿ ಮತ್ತು ಮಗಳು ಇದ್ದರು. ಹಿಂದಿನ ಮನೆಯವರು ಕೇಳಿದಂತೆ ಇವರು ಅವನನ್ನು ಅದೇ ಪ್ರಶ್ನೆ ಕೇಳಿದರು; ಮತ್ತು ಬರುವಾಗ ತಮ್ಮ ಮನೆಗೆ ಬಂದು ಹೋಗುವಂತೆ ಆಹ್ವಾನಿಸಿದರು. ಬೆಟ್ಟದ ಹುಡುಗನೂ ಮತ್ತೆ ಬರುವುದಾಗಿ ಭಾಷೆ ಕೊಟ್ಟು ಅಲ್ಲಿಂದ ಹೊರಟ.

ಪಕ್ಷಿಗಳ ರಾಣಿ ಅವನನ್ನು ತನ್ನ ಬೆನ್ನಿನ ಮೇಲೆ ಹೊತ್ತುಕೊಂಡು ಸ್ವರ್ಗದ ಕಡೆಗೆ ಹೋಗುತ್ತಾ ಇತ್ತು. ಸಾಕಷ್ಟು ದಾರಿ ಸಾಗಿದ ಮೇಲೆ ಕೊನೆಗೆ ಅದು ಸ್ವರ್ಗದ ದಕ್ಷಿಣದ ಬಾಗಿಲಿನ ಹತ್ತಿರ ಹೋಯಿತು.

ಅಮರ ಪಕ್ಷಿ ಬೆಟ್ಟದ ಹುಡುಗನಿಗೆ ಹೇಳಿತು– "ನೀನು ನನ್ನನ್ನು ಈ ಕೆಂಪು ಹಗ್ಗದಿಂದ ಕಲ್ಲಿಗೆ ಕಟ್ಟಿಹಾಕು. ರೆಕ್ಕೆ ಬಡಿದುಕೊಂಡು ಇಲ್ಲೇ ನಿನ್ನನ್ನು ಕಾಯುತ್ತಾ ಇರುತ್ತೀನಿ- ನೀನು ಒಳಕ್ಕೆ ಹೋಗು. ಅಲ್ಲಿ ಅಪ್ಸರೆಯ ತಾಯಿ ನಿನಗೆ ಸಿಕ್ಕುತ್ತಾಳೆ. ಅವಳೆದುರಿಗೆ ಧೈರ್ಯವಾಗಿ ನಿನ್ನ ವಿಚಾರ ಹೇಳು. ಅವಳು ನಿನಗೆ ಮೂರು ಬಟ್ಟಲು ಚಹಾ ಕೊಡ್ತಾಳೆ. ಮೊದಲನೇ ಬಟ್ಟಲಿನ ಚಹಾವನು ಆರಾಮವಾಗಿ ಕೂತುಕೊಂಡು ಕುಡಿದು ಬಿಡು. ಎರಡನೇದನ್ನು ಬಗ್ಗಿಕೊಂಡು ಕುಡಿ. ಮೂರನೇದನ್ನು ಅರ್ಧ ಕುಡಿದು ಹೊರಕ್ಕೆ ಬಂದುಬಿಡಬೇಕು. ನಾನು ಹೇಳಿದ ಹಾಗೆಯೇ ಎಲ್ಲಾ ನೀನು ಮಾಡಿದರೆ ನಿನಗೆ ಅಪ್ಸರೆ ಸಿಕ್ಕದೆ ಇರುವುದಕ್ಕೆ ಕಾರಣವೇ ಇಲ್ಲ".

ಬೆಟ್ಟದ ಹುಡುಗ ಅಮರ ಪಕ್ಷಿ ಹೇಳಿದ ಹಾಗೆಯೇ ಮಾಡಿದ. ಮತ್ತು ಅದು ಹೇಳಿದ ಹಾಗೆಯೇ ಆಯಿತು. ಅವನಿಗೆ ಅಪ್ಸರೆ ದೊರೆತಳು. ಅವಳ ತಾಯಿ ಅವಳನ್ನು ದಕ್ಷಿಣದ ಬಾಗಿಲಿನಿಂದ ಕಳುಹಿಸಿಕೊಟ್ಟಳು. ಅವರಿಬ್ಬರೂ

ಪಕ್ಷಿಯ ಬೆನ್ನೇರಿ ಅರಮನೆಯ ಕಡೆಗೆ ಹಾರಿದರು. ದಾರಿಯಲ್ಲಿ ಅವರು ಆ ಮೂರೂ ಕುಟುಂಬಗಳ ಮನೆಯನ್ನು ಹೊಕ್ಕು ಹೋದರು.

ಮೊದಲನೇ ಮನೆಗೆ ಹೋದಾಗ ವೃದ್ಧ ದಂಪತಿಗಳು ತಮ್ಮ ಒಬ್ಬಳೇ ಮಗಳನ್ನೂ ಒಂದು ಬೆಳ್ಳಿಯ ಪಿನ್ನನ್ನೂ ಉಡುಗೊರೆಯಾಗಿ ಕೊಟ್ಟರು. ಎರಡನೆಯ ಮನೆಯವರೂ ತಮ್ಮ ಮಗಳನ್ನೂ ಹಳದಿ ಬಣ್ಣದ ಒಂದು ರೇಶ್ಮೆಯ ತುಂಡನ್ನೂ ಕೊಟ್ಟರು. ಮೂರನೇ ಮನೆಯವರೂ ಅವರಿಗೆ ತಮ್ಮ ಮಗಳನ್ನೂ ಒಂದು ಗಾಜನ್ನೂ ಕೊಟ್ಟರು.

ಬೆಟ್ಟದ ಹುಡುಗ ಅಪ್ಸರೆ ಮತ್ತು ಮೂವರು ಯುವತಿಯರೂ ಪಕ್ಷಿಯ ಬೆನ್ನೇರಿದರು. ಪಕ್ಷಿ ಅವರನ್ನು ಅರಮನೆಯ ಪಶ್ಚಿಮದಿಕ್ಕಿನಲ್ಲಿ ನದಿಯ ದಡದಲ್ಲಿಳಿಸಿತು. ಅಪ್ಸರೆ ತನ್ನ ಕೂದಲಿನಿಂದ ಪಿನ್ನನ್ನು (pin) ತೆಗೆದು ನೆಲದ ಮೇಲೊಂದು ಗೆರೆ ಎಳೆದಳು. ಕೂಡಲೇ ಅಲ್ಲೊಂದು ಭವ್ಯವಾದ ಡೇರೆ ಎದ್ದಿತು. ಅದರಲ್ಲಿ ಬಗೆ ಬಗೆಯ ಭೋಜನ ಸಾಮಗ್ರಿಗಳು ಹಾಗೂ ಜೀವನಕ್ಕೆ ಬೇಕಾದ ಎಲ್ಲ ಸಾಮಗ್ರಿಗಳೂ ಇದ್ದುವು.

ಸಂಜೆಗೆ ಎಲ್ಲರೂ ಒಟ್ಟಿಗೆ ಊಟ ಮಾಡಿದರು. ಊಟದ ನಂತರ ಬೆಟ್ಟದ ಹುಡುಗ ಅಪ್ಸರೆ ಸಿಕ್ಕಿದ ಶುಭ ಸಮಾಚಾರವನ್ನು ಹೇಳಲು ಓಡೋಡುತ್ತ ರಾಜನಲ್ಲಿಗೆ ಹೋದ.

ಸ್ವರ್ಗದ ಅಪ್ಸರೆ ಸಿಕ್ಕಿದ ವಿಷಯವನ್ನು ಇವನು ರಾಜನಿಗೆ ಹೇಳುತ್ತಿದ್ದಾಗ ರಾಣಿ ಅವನ ಹತ್ತಿರವೇ ಇದ್ದಳು. ಅವನ ಮಾತು ಕೇಳುತ್ತಿದ್ದ ಹಾಗೆಯೇ ರಾಣಿ ಉರಿಯುವ ಬೆಂಕಿಯಾದಳು. ಮನಸ್ಸಿನಲ್ಲಿ ಅಂದುಕೊಂಡಳು. "ಈ ಮನುಷ್ಯ ಬಹಳ ಅಪಾಯಕಾರಿ. ಇವನನ್ನು ಕೊಲ್ಲದೆ ಇದ್ದರೆ ಆಗೋದಿಲ್ಲ." ರಾಜನ ಕಿವಿಯಲ್ಲೇನೋ ಊದಿದಳು. ರಾಜ ತಕ್ಷಣ ಅವನ ಕಡೆ ತಿರುಗಿಕೊಂಡು ಹೇಳಿದ– "ನಾನು ನಾಳೆ ನದಿಯ ಉತ್ತರ ದಿಕ್ಕಿನಲ್ಲಿ ಬೆಟ್ಟದ ಮೇಲೆ ಅಪ್ಸರೆಯನ್ನು ನೋಡೋಕೆ ಹೋಗ್ತೀನಿ. ನೀನು ಹೋಗಿ ಈ ದಿನ ರಾತ್ರಿಒಳಗೆ ಆ ಬೆಟ್ಟದ ಶಿಖರದ ಮೇಲೆ ಬೆಳ್ಳಿಯ ಕಂಬಗಳ ಮೇಲೆ ಹಳದಿ ರೇಶ್ಮೆಯ ಒಂದು ಡೇರೆನಿಲ್ಲಿಸು. ಡೇರೆಯ ಮುಂದೆ ಒಂದು ಗಾಜಿನ ನಗರವನ್ನು ಕಟ್ಟಿಸು. ಇದೆಲ್ಲಾ

ಮಾಡದೆ ಹೋದರೆ ನಿನ್ನ ಕತ್ತು ಕತ್ತರಿಸುತ್ತೇನಿ". ಬೆಟ್ಟದ ಹುಡುಗ ಎಲ್ಲವನ್ನೂ ಅಪ್ಸರೆಗೆ ತಿಳಿಸಿದ.

ಅವನ ಮಾತಿನ ಪ್ರಭಾವ ತನ್ನ ಮೇಲೇನೂ ಆಗಲೇ ಇಲ್ಲವೇನೋ ಎಂಬಂತೆ- "ನೀವು ನಿಶ್ಚಿಂತೆಯಾಗಿ ನಿದ್ದೆ ಮಾಡಿ. ನಾನೇ ಎಲ್ಲಾ ಕೆಲಸವನ್ನೂ ಪೂರ್ತಿ ಮಾಡ್ತೀನಿ" ಎಂದು ಹೇಳಿದಳು.

ಅರ್ಧರಾತ್ರಿಯ ಸಮಯದಲ್ಲಿ ಅಪ್ಸರೆ, ಮೂರೂ ಜನ ಯುವತಿಯರು ಹಾಗೂ ಅವರ ಅಮೂಲ್ಯ ವಸ್ತುಗಳಾದ ಬೆಳ್ಳಿಯ ಪಿನ್ನು, ಹಳದಿರೇಶ್ಮೆ ಮತ್ತು ಗಾಜು ಇವುಗಳೊಂದಿಗೆ ಬೆಟ್ಟವನ್ನು ಹತ್ತಿದಳು. ಅಲ್ಲಿ ಅವರೆಲ್ಲರೂ ಕೆಲವಾರು ಕಲ್ಲುಗಳನ್ನು ಕೂಡಿಹಾಕಿದರು. ಅವುಗಳಿಂದ ಒಂದು ಮಂಡಲಾಕಾರವನ್ನು ರಚಿಸಿದರು. ಅದರ ಮಧ್ಯದಲ್ಲಿ ಬೆಳ್ಳಿಯ ಪಿನ್ನನ್ನು ಸಿಕ್ಕಿಸಿದರು. ಅದರ ಸುತ್ತಲೂ ಹಳದಿ ರೇಶ್ಮೆಯನ್ನು ಸುತ್ತಿದರು. ಹೀಗೆ ಅದೊಂದು ಡೇರೆ ಸಿದ್ಧವಾಯಿತು. ಈ ಡೇರೆಯ ಏಳು ಹೆಜ್ಜೆ ದೂರದಲ್ಲಿ ದಕ್ಷಿಣಕ್ಕೆ ಒಂದು ಗುಂಡಿಯನ್ನು ತೆಗೆದು ಅದರಲ್ಲಿ ಗಾಜನ್ನು ಹೂಳಿದರು. ಆ ಮೇಲೆ ಅವರು ತಮ್ಮ ಬಿಡಾರಕ್ಕೆ ಹಿಂತಿರುಗಿದರು.

ಮಾರನೇ ದಿನ ಬೆಳಿಗ್ಗೆ ಉತ್ತರ ದಿಕ್ಕಿನಲ್ಲಿ ಪರ್ವತ ಶಿಖರದ ಮೇಲೆ ನಿಜಕ್ಕೂ ಒಂದು ಸುಂದರವಾದ ಹೊಂಬಣ್ಣದ ಹೊಳೆ ಹೊಳೆಯುವ ಡೇರೆ ಇತ್ತು; ಮತ್ತು ಅದರ ಮುಂದೆ ಒಂದು ಥಳ ಥಳಿಸುವ ಗಾಜಿನ ನಗರ ಮಿನುಗುತ್ತಿತ್ತು.

ಯಾವಾಗ ರಾಜ ಮತ್ತು ರಾಣಿ ಅದನ್ನು ನೋಡಿದರೋ ಆಗ ಬೆಟ್ಟದ ಹುಡುಗನನ್ನು ಕೊಲ್ಲಬೇಕೆಂಬ ಕ್ರೂರಯೋಜನೆಗಳೆಲ್ಲಾ ವ್ಯರ್ಥವಾದುವು ಎನ್ನುವುದು ಮನದಟ್ಟಾಯಿತು. ಬಲಾತ್ಕಾರದಿಂದ ಅವನನ್ನು ಹಿಡಿದು ಸಾಯಿಸುವುದೊಂದು ಬಿಟ್ಟರೆ ಈಗ ಅವರಿಗೆ ಬೇರೆ ಇನ್ನೇನೂ ವಿಧಿಯಿರಲಿಲ್ಲ. ಅದರಿಂದ ರಾಜ ರಾಣಿಯರು ತಮ್ಮೆಲ್ಲಾ ಸೈನಿಕರನ್ನೂ ಕರೆಸಿ ಬೆಟ್ಟದ ಹುಡುಗನನ್ನು ಹಿಡಿಯಲು ಉತ್ತರದಿಕ್ಕಿನ ಪರ್ವತಕ್ಕೆ ಮುತ್ತಿಗೆ ಹಾಕಿದರು.

ರಾಜ ರಾಣಿಯರು ತಮ್ಮ ಸೈನ್ಯ ಸಮೇತ ಬರುತ್ತಾ ಇರುವುದನ್ನು ನೋಡಿದ ಅಪ್ಸರೆ ಬೆಟ್ಟದ ಹುಡುಗನಿಗೆ ಅವರ ಮೇಲೆ ಬಾಣದ ಮಳೆಯನ್ನು

ಕರೆಯಲು ಹೇಳಿದಳು. ಅವನು ಬಾಣಗಳನ್ನು ಬಿಟ್ಟ. ಬಾಣಗಳಿಂದ ನೀರಿನ ಪ್ರವಾಹ ಹರಿಯ ತೊಡಗಿತು. ಗಾಜಿನ ನಗರ ಮುರಿದು ಬಿತ್ತು. ಸುತ್ತಲೂ ನೀರೇ ನೀರು ಆವರಿಸಿತು. ನೀರಿನಿಂದ ತುಂಬಿತುಳುಕುವ ಒಂದು ಸರೋವರ ಏರ್ಪಟ್ಟಿತು. ಅದರಲ್ಲಿ ದುಷ್ಟ ರಾಜ ಮತ್ತು ರಾಣಿಯರು ಮುಳುಗಿಸತ್ತರು. ಬೆಟ್ಟದ ಹುಡುಗ ರಾಜನಾದ. ಸ್ವರ್ಗದ ಅಪ್ಸರೆಯನ್ನು ಮದುವೆಯಾದ. ಆ ಮೇಲೆ ತನ್ನ ತಂದೆ ತಾಯಿ ಅಮರಪಕ್ಷಿ ಮತ್ತು ಅದರ ನೂರು ಹೆಣ್ಣು ಮಕ್ಕಳನ್ನು ತನ್ನ ಅರಮನೆಗೆ ಕರೆತಂದ. ಅವರೆಲ್ಲರೂ ಸುಖವಾಗಿ ಬದುಕಿದ್ದರು.

ಸಾಹಸಿ ಸಿಂಗ್ರ

ಒಂದು ಕಾಲಕ್ಕೆ ಆಕಾಶದಲ್ಲಿ ಏಳು ಜನ ಸೂರ್ಯರು, ಹಾಗೂ ಆರು ಜನ ಚಂದ್ರರಿದ್ದರು, ನೆಲವೆಲ್ಲಾ ಹೊಳಪಾಗಿತ್ತು. ಋತುವೂ ಸೊಗಸಾಗಿತ್ತು. ಪಶುಪಕ್ಷಿಗಳೆಲ್ಲಾ ಸುಖವಾಗಿ ಬದುಕುತ್ತಿದ್ದುವು. ಇಂಥ ಕಾಲದಲ್ಲಿ ಸಾಹಸಿ ಸಿಂಗ್ರ ಹುಟ್ಟಿದ್ದು. ಅವನು ದೊಡ್ಡವನಾದ. ಮದುವೆಯೂ ಆಯಿತು. ಒಂದು ದಿನ ವಸಂತದ ಆರಂಭದಲ್ಲಿ ಸಿಂಗ್ರ ತನ್ನಿಬ್ಬರು ಹೆಂಡಿರನ್ನೂ ಮನೆಯಲ್ಲೇ ಬಿಟ್ಟು ಕುದುರೆಯನ್ನೇರಿ ತನ್ನ ಕತ್ತಿಯನ್ನೂ ಹಿಡಿದು ಜಗತ್ತನ್ನೆಲ್ಲಾ ಸುತ್ತಿ ಬರಲು ಹೊರಟ. ಅವನ ಪ್ರಯಾಣದ ಮುಖ್ಯ ಉದ್ದೇಶ ಭಗವಂತನ ಕೃಪೆಯಿಂದ ಜಗತ್ತಿನ ಪ್ರತಿಯೊಂದು ಪ್ರಾಣಿಯೂ (ಮನುಷ್ಯರು ಮತ್ತು ಪಶು ಪಕ್ಷಿಗಳು) ಶಾಂತಿ ಮತ್ತು ಸಮಾನತೆಯಿಂದ ಬದುಕತ್ತಿದೆಯೋ ಇಲ್ಲವೋ ಎಂಬುದನ್ನು ನೋಡಿ ಬರುವುದು.

ಬಹಳ ದೂರ ಪ್ರಯಾಣ ಮಾಡಿದ ಮೇಲೆ ಒಂದು ದಿನ ಅವನು ಲ್ಯಾಂಗ್ ಶಾನ್‌ನ ದಿಬ್ಬವನ್ನು ತಲುಪಿದ. ಅಲ್ಲಿ ಪಕ್ಷಿಗಳು ತಂಡ ತಂಡವಾಗಿ ಸೇರಿಕೊಂಡು ದುಃಖಿತ ಕಂಠದಿಂದ ಕಾಂವ್ ಕಾಂವ್ ಎನ್ನುತ್ತಿದ್ದುವು. ಸಿಂಗ್ರ ಮನಸ್ಸಿನಲ್ಲಿ ಅಂದುಕೊಂಡ– "ನಾನು ಅರ್ಧ ಪ್ರಪಂಚವನ್ನೆಲ್ಲಾ ಸುತ್ತಿಬಂದೆ. ಎಲ್ಲ ಕಡೆಯೂ ಜನ ಜಾನುವಾರುಗಳು ಶಾಂತಿ ಸಮಾನತೆಯಿಂದ ಬದುಕುತ್ತಾ ಇರುವುದನ್ನು ನೋಡಿದೆ. ಈ ಪಕ್ಷಿಗಳು ಏಕೆ ಇಷ್ಟೊಂದು ವ್ಯಥೆಯಿಂದಿವೆ."

ಅವುಗಳ ಹತ್ತಿರ ಹೋಗಿ ಕೇಳಿದ– "ಈ ಪ್ರಪಂಚದಲ್ಲಿ ಉಳಿದೆಲ್ಲ ಪಶುಪಕ್ಷಿ ಪ್ರಾಣಿಗಳು ಸುಖಶಾಂತಿಯಿಂದ ಬದುಕುತ್ತಾ ಇವೆ. ನಿಮ್ಮ ದುಃಖಕ್ಕೇನು ಕಾರಣ" ?

ಸಿಂಗ್ರನ ಗಡಸುದನಿ ಕೇಳಿ ಪಕ್ಷಿಗಳ ಗಮನವೆಲ್ಲಾ ಅವನ ಕಡೆ ಹೋಯಿತು. ಲಾಪಕ್ಕಿ ಕಳವಳದಿಂದ ಹೇಳಿತು– "ಎಲೈ ವೀರನೆ, ಪಶು

ಪಕ್ಷಿಗಳು ಸುಖವಾಗಿ ಬಾಳುವುದು ಈಗ ಹಳೆಯ ಮಾತಾಯಿತು. ಈ ಬೆಟ್ಟದ ಮೇಲಕ್ಕೆ ಯಾವದಿನ ಒಂದು ಭಯಂಕರ ಹೆಬ್ಬಾವು ಬಂತೋ ಆ ಹೊತ್ತಿನಿಂದ ನಮ್ಮ ಊಟಗೀಟ ಎಲ್ಲ ಹಾಳಾಗಿದೆ ".

" ಏನೆಂದೆ ".

ಲಾವಕ್ಕಿ ತನ್ನ ಕಣ್ಣೀರನ್ನೊರಸಿಕೊಳ್ಳುತ್ತ ಹೇಳಿತು– "ಒಂದು ಭಯಂಕರ ಹೆಬ್ಬಾವು! ಪೂರ್ವಕ್ಕಿರುವ ಬೆಟ್ಟದ ಮೇಲೆ ಒಂದು ಭಯಂಕರ ಹೆಬ್ಬಾವು ಇದೆ. ಆರು ಜನ ಚಂದ್ರರ ಬೆಳಕು ಅದರ ದೇಹವನ್ನು ಬಲಗೊಳಿಸಿದೆ. ಏಳು ಜನ ಸೂರ್ಯರ ಬಿಸಿಲು ಅದನ್ನೆಷ್ಟು ಬಲಶಾಲಿಯಾಗಿಮಾಡಿದೆ ಅಂದರೆ ಯಾರೂ ಅದಕ್ಕೆ ಸರಿತೂಗುವಂತವರೇ ಇಲ್ಲ. ಅದು ಎಂದೂ ತನ್ನ ಆಹಾರವನ್ನು ಹುಡುಕಿಕೊಳ್ಳುವ ಯೋಚನೆಯನ್ನೇ ಮಾಡೋದಿಲ್ಲ. ಅದಕ್ಕೆ ಬದಲಾಗಿ ನಮ್ಮನ್ನೇ ಪ್ರತಿದಿನ ಒಂದೊಂದು ಪಕ್ಷಿಯನ್ನು ತಂದೊಪ್ಪಿಸಿಬೇಕೆಂದು ಕೇಳುತ್ತದೆ. ನಾವು ಅವರ ಬೇಡಿಕೆ ಸಲಿಸದೆ ಹೋದರೆ ನಮ್ಮ ಪಕ್ಷಿಲೋಕವನ್ನೆ ಧ್ವಂಸ ಮಾಡಿಬಿಡುತ್ತದೆ. ಈ ಹೊತ್ತು ತಿತ್ತಿರಿ ಹಕ್ಕಿಯ ಸರದಿ. ಆದ್ದರಿಂದ ಅದನ್ನು ಬೀಳ್ಕೊಡುತ್ತಾ ಇದ್ದೀವಿ.

ಪಕ್ಷಿಗಳ ಕತೆ ಕೇಳಿ ಸಿಂಗ್ರನಿಗೆ ತುಂಬಾ ವ್ಯಸನವಾಯಿತು. ಹೇಳಿದ– " ಅದರ ಆಜ್ಞೆಯ ಪ್ರಕಾರ ನೀವಾಗಿ ನೀವೇ ಸಾವಿನ ಬಾಯೊಳಕ್ಕೆ ಹೋಗುವ ಬದಲು ಅದರೊಂದಿಗೆ ಯಾಕೆ ಹೋರಾಡಬಾರದು."

ಸಿಂಗ್ರನ ಮಾತು ಕೇಳಿ ಪಕ್ಷಿಗಳೆಲ್ಲಾ ಅವನ ಹತ್ತಿರ ಮಾತಾಡಲು ಶುರುಮಾಡಿದುವು. ಆದರೆ ಲಾವಕ್ಕಿಯ ಮಾತು ಅವೆಲ್ಲದರ ಮಾತಿಗಿಂತ ಪರಿಣಾಮಕಾರಿಯಾಗಿತ್ತು.

ಅದು ಹೇಳಿತು– "ಏನು ನಾವು ಅದರ ಜೊತೆಯಲ್ಲಿ ಹೋರಾಡಬೇಕೆ? ಅದನ್ನು ಸೋಲಿಸಲು ಯಾರಕೈಲೂ ಆಗೋಲ್ಲ. ಈ ಸೂರ್ಯ ಚಂದ್ರರೆಲ್ಲರೂ ಹಾಳಾಗಿಹೋದರೆ ಈ ಹೆಬ್ಬಾವು ತನ್ನ ಮೊದಲಿನ ಆಕಾರಕ್ಕೆ ಬರುತ್ತೆ. ಶೀತದಿಂದ ತನಗೆ ತಾನೆ ಮರಗಿ ಹೋಗುತ್ತೆ".

" ಬಹಳ ಒಳ್ಳೇದು ನಾನು ಆ ಸೂರ್ಯ ಚಂದ್ರರನ್ನು ಹೊಡದು ಉರುಸುತ್ತೀನಿ" –ಸಿಂಗ್ರ ಹೇಳಿದ.

ಮುಂದೇನೂ ಮಾತಾಡಲಿಲ್ಲ. ಬೇಗ ಬೇಗ ಬೆಟ್ಟದ ತುದಿಯನ್ನೇರಿದ. ತನ್ನ ಬಿಲ್ಲನ್ನೆಳೆದು ಸೂರ್ಯರ ಮೇಲೆ ಬಾಣದ ಮಳೆಗರೆದ. ಅವನ ಬಾಣ ತಾಗಿದ ಮೊದಲ ಸೂರ್ಯ ಒಂದು ಕಪ್ಪು ಹೊಗೆಯ ಚೆಂಡಿನಂತಾಗಿ ಕೆಳಕ್ಕುರುಳಿದ. ಎರಡನೆಯ, ಮೂರನೆಯ, ನಾಲ್ಕನೆಯ ಹಾಗೂ ಐದನೆಯ ಸೂರ್ಯರಿಗೂ ಇದೇ ಗತಿಯಾಯಿತು. ಆರನೇ ಸೂರ್ಯನನ್ನು ಹೊಡೆದುರುಳಿಸಿ, ಏಳನೇ ಸೂರ್ಯನ ಮೇಲೆ ಬಾಣ ಬಿಡಲು ಸಿದ್ಧನಾದ. ಆಗ ಏಳನೇ ಸೂರ್ಯ ಹೇಳಿದ– "ಸಿಂಗ್ರ ಈಗ ನಿಲ್ಲಿಸು. ನನ್ನನ್ನೂ ನೀನು ಹೊಡೆದುರುಳಿಸಿದರೆ ಈ ಪ್ರಪಂಚದಲ್ಲಿ ಬಿಸಿಲೇ ಇರುವುದಿಲ್ಲ. ಶೈತ್ಯದಿಂದ ಪ್ರತಿಯೊಂದು ವಸ್ತುವೂ ನಾಶವಾಗುತ್ತೆ. ಅದರ ಜೊತೆಯಲ್ಲೇ ನೀನೂ ನಾಶವಾಗಿ ಹೋಗ್ತೀಯ."

ಸಿಂಗ್ರ ಚೆನ್ನಾಗಿ ಆಲೋಚನೆ ಮಾಡಿ ಹೇಳಿದ– "ನೀನು ಹೇಳೋದು ಸರಿ. ಆದರೆ ಒಂದು ನೆನಪಿರಲಿ. ಇನ್ನು ಮೇಲೆ ದುಷ್ಟ ಪ್ರಾಣಿಗಳಿಗೆ ನೀನು ಯಾವತ್ತೂ ಬಿಸಿಲು ಬೀಳಿಸಕೂಡದು."

ಒಬ್ಬೊಬ್ಬರಾಗಿ ಸೂರ್ಯರು ಕೆಳಕ್ಕೆ ಉರುಳುತ್ತಿದ್ದುದನ್ನು ನೋಡಿದ ಪಕ್ಷಿಗಳು ಉಲ್ಲಾಸದಿಂದ ಕುಣಿದಾಡಿದುವು. ಅವೆಲ್ಲವೂ ಕೂಡಲೇ ನಾನಾ ಗುಂಪುಗಳಾಗಿ ಭಯಂಕರ ಹೆಬ್ಬಾವಿನ ಗುಹೆಯ ಬಳಿಗೋಡಿದುವು. ಅದಿನ್ನೂ ಬದುಕಿತ್ತು. ಆದರೆ ಶೈತ್ಯದಿಂದ ಮುದುಡಿಕೊಂಡು ಬಿದ್ದಿತ್ತು. ಸ್ವಲ್ಪ ಹೊತ್ತು ಅವು ಇದರ ವಿಷಯವಾಗಿ ಮಾತುಕತೆಯಾಡಿದುವು. ಒಂದು ಪಕ್ಷಿಯ ಕೈಯಲ್ಲಿ ಸಿಂಗ್ರನಿಗೆ ಹೇಳಿ ಕಳುಹಿಸಿದವು. ಅವನು ಚಂದ್ರರನ್ನು ಹೊಡೆದು ಹಾಕಿಬಿಟ್ಟರೆ ಮತ್ತೆ ಆ ಹೆಬ್ಬಾವು ಇನ್ನೆಂದೆಂದೂ ಅವಕ್ಕೆ ಕೇಡುಮಾಡಲು ಸಾಧ್ಯವಿಲ್ಲ.

ಸಿಂಗ್ರ ಅದೇಕ್ಷಣ ಬಿಲ್ಲನ್ನು ಕೈಗೆತ್ತಿಕೊಂಡ. ಐದು ಜನ ಚಂದ್ರರನ್ನೂ ಚೂರು ಮಾಡಿದ. ಆರನೇ ಚಂದ್ರನನ್ನು ಹೊಡೆಯಲು ಬಿಲ್ಲು ಎಳೆಯುವುದಕ್ಕೆ ತೊಡಗಿದಾಗ ಆರನೇ ಚಂದ್ರ ಹೇಳಿದ– "ಸಿಂಗ್ರ ನಿಲ್ಲಿಸು. ನನ್ನನ್ನೂ ನೀನು ಹೊಡೆದುರುಳಿಸಿದರೆ ಭೂಮಿಯ ಮೇಲೆ ಬೆಳಕೇ ಇರುವುದಿಲ್ಲ. ನಿನ್ನ ಸಮೇತ ಎಲ್ಲರೂ ಕುರುಡರಾಗುತ್ತೀರಿ."

ಸಿಂಗ್ರ ಒಂದು ನಿಮಿಷ ಯೋಚನೆ ಮಾಡಿ ಹೇಳಿದ– "ಆಯಿತು. ಆದರೆ ಇನ್ನು ಮುಂದೆ ನೀನು ದುಷ್ಟ ಪ್ರಾಣಿಗಳಿಗೆ ಬೆಳಕು ಬೀರಕೂಡದು."

ಅವನು ಬೆಟ್ಟದಿಂದ ಇಳಿದು ದಿಬ್ಬಕ್ಕೆ ಹಿಂತಿರುಗಿದ. ಅಲ್ಲಿ ಪಕ್ಷಿಗಳೆಲ್ಲಾ ಸಂಭ್ರಮಪಡುತ್ತಾ ಇದ್ದುವು. ಎಲ್ಲಾ ಜಾತಿಯ ಪಕ್ಷಿಗಳೂ ಅಲ್ಲಿದ್ದುವು. ಒಂದನ್ನೊಂದು ಪರಸ್ಪರ ಆಲಿಂಗಿಸುತ್ತಿದ್ದುವು.

ಲಾವಕ್ಕಿ ಮತ್ತು ತಿತ್ತಿರಿ ಹಕ್ಕಿಗಳು ಸಿಂಗ್ರನ ಕತ್ತಿಯ ಹೊಳಪನ್ನು ನೋಡಿದ್ದೇ ತಡ, ಅವೆರಡೂ ಎಲ್ಲ ಪಕ್ಷಿಗಳ ಪರವಾಗಿ ಆ ಸಾಹಸಿಗೆ ಕೃತಜ್ಞತೆಯನ್ನು ಸಿರ್ಸಿದವು– " ಅಯ್ಯಾ ವೀರ ಸಿಂಗ್ರ ನಾವು ನಿನಗೆ ಕೃತಜ್ಞರಾಗಿದ್ದೇವೆ. ನಮ್ಮ ಶಾಂತಿಯುತವಾದ ಬಾಳಿನಲ್ಲಿ ವಿಘ್ನವನ್ನೊಡ್ಡಿದ್ದ ಆ ಭಯಂಕರ ಹೆಬ್ಬಾವು ಶೈತ್ಯದಿಂದ ಸತ್ತು ಹೋಯಿತು. ನಮ್ಮ ಒಳ್ಳೆಯ ದಿನಗಳು ಮತ್ತೆ ಬಂದಿವೆ. ಪ್ರಪಂಚದ ಪಕ್ಷಿಗಳೆಲ್ಲಾ ಸೇರಿದರೂ ನಿನ್ನ ಉಪಕಾರ ತೀರಿಸಲು ಆಗುವುದಿಲ್ಲ ".

ಸಿಂಗ್ರ ಮುಗುಳ್ನಗುತ್ತ ಹೇಳಿದ– "ನನಗೆ ಕೃತಜ್ಞತೆಯನ್ನು ಹೇಳಬೇಕಾದ್ದೇನೂ ಇಲ್ಲ. ನೀವು ಸದಾ ಸುಖವಾಗಿರುವುದನ್ನು ನೋಡುವುದೇ ನನಗೆ ಬೇಕಾಗಿರುವುದು". ಪಕ್ಷಿಗಳನ್ನಲ್ಲೇ ಬಿಟ್ಟು ತನ್ನ ಪ್ರಯಾಣವನ್ನು ಮುಂದುವರೆಸಿದ.

ಪ್ರಯಾಣ ಮಾಡುತ್ತ ದಾರಿಯಲ್ಲಿ ಸುತ್ತಲೂ ಕೋಟೆ ಇರುವ ಒಂದು ಊರಿಗೆ ಬಂದ. ಹೆಬ್ಬಾಗಿಲಿನಿಂದ ಒಳನುಗ್ಗಿದ. ಅಲ್ಲಿ ರಸ್ತೆಗಳಲ್ಲಿ ಜನದ ಗುಂಪು ಓಡುತ್ತಾ ಇರುವುದು ಕಾಣಿಸಿತು. ಅವರೆಲ್ಲರ ಮುಖಗಳು ಕಳೆಗುಂದಿದ್ದುವು. ಕುದುರೆಯ ಲಗಾಮನ್ನು ಸಡಿಲಬಿಟ್ಟು ರಸ್ತೆಯಕಡೆ ಓಡಿದ. ಆ ದೃಶ್ಯ ನೋಡುತ್ತಿದ್ದ ಹಾಗೆಯೇ ಅವನೂ ದುಃಖದಲ್ಲಿ ಮುಳುಗಿದ. ಈ ಹಳ್ಳಿಗೆ ಏನೋ ಭಾರೀ ವಿಪತ್ತು ಬಂದಿರ ಬೇಕು ಎಂದುಕೊಂಡ. ಕುದುರೆಯಿಂದಿಳಿದು ಒಬ್ಬ ಮುದುಕಿಯ ಹತ್ತಿರ ಕೇಳಿದ– "ಏನಜ್ಜಿ ಇಡೀ ಜಗತ್ತೆಲ್ಲಾ ಸುಖ ಶಾಂತಿಯಿಂದ ಇದೆ. ನೀವೆಲ್ಲ ಇಲ್ಲಿ ಯಾಕೆ ಇಷ್ಟೊಂದು ದುಃಖದಲ್ಲಿದ್ದೀರಿ ?"

ಅವಳು ನಿಟ್ಟುಸಿರು ಬಿಡುತ್ತ ತನ್ನ ನರೆತ ತಲೆಯನ್ನು ತೋರಿಸಿ ಹೇಳಿದಳು– " ಏನಂದೆ ! ನಾವು ಶಾಂತಿಯಿಂದ ಇದ್ದೇವೆಯೆ ? ನಿಜ; ಒಂದು ಕಾಲದಲ್ಲಿ ನಮ್ಮ ಜೀವನ ಸುಖವಾಗಿ ಕಳೆಯುತ್ತಿತ್ತು. ನಮ್ಮ ಜೀವನದಲ್ಲಿ ಈಗ ರವೆಯಷ್ಟೂ ಶಾಂತಿ ಇಲ್ಲ. ನಮ್ಮೂರಿನಲ್ಲಿ ನಿನಗೆ ಒಂದಾದರೂ ಹಸುವೋ

ಎಮ್ಮೆಯೋ ಕಾಣಿಸಿತೇನು? ಊರಾಚೆಯ ಬಯಲಿನಲ್ಲಿ ಸೊಂಟದುದ್ದ ಹುಲ್ಲು ಬೆಳೆದು ನಿಂತಿವೆ. ಬೇಸಿಗೆಯಲ್ಲಿ ನೆಲದ ಮೇಲೆ ನೀರು ವ್ಯರ್ಥವಾಗಿ ಹರಿದು ಹೋಗುತ್ತೆ. ಇನ್ನು ಮನುಷ್ಯರನ್ನು ತಿನ್ನುವುದೊಂದು ಉಳಿದಿದೆ. ಅಯ್ಯೋ ದೇವರೇ! ಈ ಮುದಿವಯಸ್ಸಿನಲ್ಲಿ ಇದೆಲ್ಲಾ ನೋಡುವುದು ನನ್ನ ಹಣೇಲಿ ಬರೆದಿತ್ತು."

ಸಿಂಗ್ರ ಹೇಳಿದ- "ಏನು ಇಲ್ಲೂ ಯಾರಾದರೂ ನೆಮ್ಮದಿಯನ್ನು ಹಾಳುಮಾಡುತ್ತಿದ್ದಾರೇನು? ಪ್ರಪಂಚದಲ್ಲಿ ಶಾಂತಿ ಇರಬೇಕು; ಅದನ್ನು ಯಾರೂ ಕೆಡಿಸಕೂಡದು ಅನ್ನುವುದು ಭಗವಂತನ ಇಚ್ಛೆ."

ಸಿಂಗ್ರ ಒಳ್ಳೆ ಎತ್ತರವಾದ ಕಟ್ಟುಮಸ್ತಾದ ಸುಂದರ ತರುಣ. ಅವನ ಧ್ವನಿಯೂ ತೀಕ್ಷ್ಣವಾಗಿತ್ತು. ಆದರಿಂದ ಬಹಳ ಬೇಗ ಜನದ ಗುಂಪು ಅವನ ಸುತ್ತ ಸೇರಿತು. ಅವನ ಹತ್ತಿರ ತಮ್ಮ ಕಥೆ ಹೇಳಲು ಶುರು ಮಾಡಿದರು.

ಒಬ್ಬ ಮುದುಕ ಹೇಳಿದ- "ಪಶ್ಚಿಮದಿಕ್ಕಿನಲ್ಲಿ ಸಮುದ್ರದ ಒಳಗಡೆ ಒಬ್ಬ ರಾಕ್ಷಸ ಇದ್ದಾನೆ. ಅವನು ಆಗಾಗ್ಗೆ ಸಮುದ್ರದಿಂದ ಹೊರಕ್ಕೆ ಬಂದು ನಮ್ಮ ಲೆಕ್ಕವಿಲ್ಲದಷ್ಟು ಹಸುಗಳು ಎಮ್ಮೆಗಳನ್ನೆಲ್ಲ ತಿಂದು ಧ್ವಂಸ ಮಾಡಿಬಿಡುತ್ತಿದ್ದ. ಈಗ ಅವನು ಸೋಮಾರಿ. ಅದಕ್ಕೋಸ್ಕರ ನಾವು ಪ್ರತಿ ದಿನ ಅವನ ಊಟವನ್ನು ಸಮುದ್ರದ ದಡಕ್ಕೆ ತಲುಪಿಸಬೇಕೆಂದು ನಮಗೆ ಅಪ್ಪಣೆ ಮಾಡಿದ್ದಾನೆ. ನಾವು ಅವನಾಸೆಯನ್ನು ಪೂರೈಸದೇ ಇದ್ದರೆ ಇಡೀ ಹಳ್ಳಿಯನ್ನೇ ಹಾಳುಮಾಡಿ ಸಮುದ್ರದಲ್ಲಿ ಮುಳುಗಿಸಿಬಿಡುತ್ತಾನೆ". ಆವೇಗದಿಂದ ಮುದುಕ ಏದುತ್ತಿದ್ದ. ಇನ್ನೊಬ್ಬ ತರುಣ ಅವನ ಮಾತನ್ನು ಮುಂದುವರೆಸಿದ- "ಅವನು ನಮ್ಮ ಹಸು, ಎಮ್ಮೆ ಎಲ್ಲವನ್ನೂ ನುಂಗಿ ಹಾಕಿದ್ದಾನೆ. ಈಗ ಇನ್ನು ನಮ್ಮನ್ನೂ ತಿನ್ನುತ್ತಾನೆ".

ಸಿಂಗ್ರ ಕೇಳಿದ- "ರಾಕ್ಷಸ ಎಂಥವನು"?

ಯಾರೋ ಹೇಳಿದರು-"ಅವನೊಬ್ಬ ವಿನಾಶಕಾರಿಯಾದ ರಾಕ್ಷಸ ಅಂತ ಒಬ್ಬ ಮಂತ್ರವಾದಿ ಹೇಳಿದ್ದಾನೆ".

ಸಿಂಗ್ರ ಕೂಡಲೇ ಆ ಮಂತ್ರವಾದಿಯನ್ನು ಹುಡುಕಿಕೊಂಡು ಹೊರಟ. ಅವನು ಸಿಕ್ಕಿದ ತಕ್ಷಣ ಕೇಳಿದ- "ನಿನಗೆ ಈ ವಿನಾಶಕಾರೀ ರಾಕ್ಷಸನ ಸಮಾಚಾರ ಏನಾದರೂ ಗೊತ್ತೆ"?

ಮಂತ್ರವಾದಿ ಹೇಳಿದ– "ನನಗೆ ಅವನ ವಿಷಯವೆಲ್ಲಾ ಗೊತ್ತು". ಹಾಗೆ ಹೇಳಿ ಅವನು ತನ್ನ ತಲೆ ತಗ್ಗಿಸಿದ. ಸಿಂಗ್ರನೊಂದಿಗೆ ಮುಖಕ್ಕೆ ಮುಖ ಕೊಟ್ಟು ಮಾತಾಡುವಷ್ಟು ಧೈರ್ಯವಾಗಲಿಲ್ಲ.

"ಅಯ್ಯಾ ಮಂತ್ರವಾದಿ ನೀನು ಅವನನ್ನು ಹೊಗಳುವುದರಿಂದ ಆಗುವ ಪ್ರಯೋಜನವೇನು ? ನಿಮ್ಮೂರಿನವರನ್ನೆಲ್ಲಾ ನುಂಗಿಹಾಕುತ್ತಾ ಇರುವುದನ್ನು ನೀನೇ ನೋಡ್ತಿದ್ದೀಯ".

"ಅಯ್ಯಾ ವೀರ ಸಿಂಗ್ರ! ಅವನನ್ನು ಹೊಗಳಿ ಹೊಗಳಿ ನನ್ನ ತುಟಿಯೆಲ್ಲಾ ಒಣಗಿ ಹೋಯಿತು. ನನ್ನ ಮನಸ್ಸಿಗೆ ತುಂಬ ಬೇಜಾರಾಗಿಬಿಟ್ಟಿದೆ. ಆದರೆ ಬರೀ ದೇವರ ಹೆಸರು ಹೇಳಿದ ಮಾತ್ರದಿಂದ ಅವನನ್ನು ಯಾರೂ ಹಿಡಿತಕ್ಕೆ ತರಲು ಆಗುವುದಿಲ್ಲ. ಅವನು ನೀರಿನಲ್ಲಿದ್ದಾಗ ಅವನನ್ನು ಗೊತ್ತುಹಚ್ಚುವುದೇ ಕಷ್ಟ. ನೆಲದ ಮೇಲಕ್ಕೆ ಬಂದಾಗಲಂತೂ ಹರಿತವಾದ ಕತ್ತಿಯಿಂದ ಹೊಡೆದರೂ ಅವನಿಗೇನೂ ಆಗುವುದಿಲ್ಲ. ಅವನನ್ನು ಬೆಂಕಿಯಿಂದ ಸುಟ್ಟುಹಾಕಿಬಿಡಬಹುದು. ಆದರೆ ನಾವು ಅವನನ್ನು ಸುಡುವುದು ಹೇಗೆ ? "

"ಅದಕ್ಕೂ ಒಂದಲ್ಲ ಒಂದು ಉಪಾಯ ಇರಲೇ ಬೇಕು".

ಸಿಂಗ್ರ ಸ್ವಲ್ಪ ಹೊತ್ತು ತನ್ನಲ್ಲೇ ಯೋಚನೆ ಮಾಡಿದ. ಆಮೇಲೆ ಕುದುರೆ ಹತ್ತಿ ನೇರವಾಗಿ ಪಶ್ಚಿಮದ ಕಡೆಗೆ ಧಾವಿಸಿದ. ಬಹುಬೇಗ ಒಂದು ಕಬ್ಬಿಣದ ಬೆಟ್ಟವನ್ನೇರಿದ. ಅದರ ಮೇಲೆ ಒಂದೇ ಒಂದು ಹುಲ್ಲುಕಡ್ಡಿಯೂ ಬೆಳೆಯುತ್ತಿರಲಿಲ್ಲ. ಮೂರು ಸಲ ಪರ್ವತವನ್ನು ಸುತ್ತುಹಾಕಿದ. ನಂತರ ಅಲ್ಲಿಂದ ಮೂರು ಕಬ್ಬಿಣದ ಸಲಾಕಿಗಳನ್ನು ತೆಗೆದುಕೊಂಡ. ಕುದುರೆಯೇರಿ ಮತ್ತೆ ಬಂದ. ಅಲ್ಲಿಗೆ ಹೋಗಿ ಬರಲು ಸಾವಿರಾರು ಮೈಲಿ ಪ್ರಯಾಣ ಮಾಡಬೇಕಾಯಿತು. ಇಷ್ಟಾದರೂ ಸಿಂಗ್ರ ಅದನ್ನು ಒಂದು ಸಲ ಊಟಮಾಡುವಷ್ಟು ಹೊತ್ತಿನಲ್ಲಿ ಮುಗಿಸಿದ.

ಸಿಂಗ್ರ ಆ ಜನಕ್ಕೆಲ್ಲ ಸೌದೆ ಕೂಡಿಹಾಕಲು ಹೇಳಿದ. ಕಬ್ಬಿಣದ ಸಲಾಕಿಗಳನ್ನು ಕಾಯಿಸಿ ಎಂದು ಹೇಳಿದ. ಉಳಿದಿರುವ ಕುರಿಗಳನ್ನೆಲ್ಲ ಕತ್ತರಿಸಿ ಅವೆಲ್ಲವನ್ನೂ ಸಮುದ್ರದ ದಡಕ್ಕೆ ತೆಗೆದುಕೊಂಡು ಹೋಗಿ ಎಂದು ಹೇಳಿದ. ದಡದ

ಹತ್ತಿರಕ್ಕೆ ಹೋದ ಮೇಲೆ ಅವನು ಕಬ್ಬಿಣದ ಸಲಾಕಿಗಳನ್ನೆಲ್ಲ ಒಟ್ಟಿಗೇ ಇಟ್ಟ. ಅದರ ಕೆಳಗಡೆ ಕುರಿಯ ಮಾಂಸವನ್ನಿಟ್ಟ. ಕೆಂಪಗೆ ಕೆಂಡದ ಹಾಗೆ ಕಾದಿದ್ದ ಸಲಾಕಿಗಳಿಂದ ಚೆನ್ನಾಗಿ ಹುರಿದಂತೆ ಆದ ಕುರಿಯ ಮಾಂಸದ ವಾಸನೆ ದೂರದೂರದ ವರೆಗೂ ಹರಡಿತು.

ಬಲು ಬೇಗ ಬಿರುಗಾಳಿಯ ಒಂದು ಸುಳಿವು ಬೀಸಿತು. ಸಮುದ್ರದಲ್ಲಿ ಐದು ಅಡಿಗಳಿಗಿಂತ ಎತ್ತರವಾದ ಒಂದು ಅಲೆ ಚಿಮ್ಮಿತು. ಅದೇ ಸಮಯಕ್ಕೆ ಭಯಂಕರ ದೈತ್ಯನೊಬ್ಬ ನೀರಿನಿಂದ ಹೊರಕ್ಕೆ ಬಂದ. ನೇರವಾಗಿ ಸುಟ್ಟ ಮಾಂಸದ ಕಡೆಗೆ ನುಗ್ಗಿದ. ಕುರಿಯ ಮಾಂಸವನ್ನು ತಿನ್ನುವುದಕ್ಕೆಂದು ಬಾಯಿ ತೆರೆಯುವದಕ್ಕೆ ಮುಂಚೆ ಕೆಂಡದಹಾಗೆ ಕಾದಿದ್ದ ಮೂರು ಸಲಾಕಿಗಳು ಅವನ ಮೈಮೇಲೆ ಬಿದ್ದುವು. ನೋವಿನಿಂದ ಸೆಡೆತುಕೊಂಡ. ಉರಿಯಿಂದ ಕಿರುಚ ತೊಡಗಿದ. ಅವನ ಮೂಗಿನಿಂದ ನೀರು ಕಿತ್ತುಕೊಂಡಿತು. ಕೂಡಲೇ ಅವನ ಪ್ರಾಣ ಹಾರಿ ಹೋಯಿತು.

ಊರಿನವರು ದೂರದಿಂದ ಇದನ್ನು ನೋಡುತ್ತ ಇದ್ದರು. ಅವರಲ್ಲಿ ಧೈರ್ಯ ಇದ್ದವರು ಅದನ್ನು ಬಹಳ ಹತ್ತಿರದಿಂದ ಚೆನ್ನಾಗಿ ನೋಡಿದರು. ತಮ್ಮ ಜೊತೆಯವರಿಗೆಲ್ಲಾ ಹೇಳಲು ಬೇಗ ಬೇಗ ಓಡುತ್ತಾ ಹೋದರು.

ಯುವಕರೆಲ್ಲಾ ಸಿಂಗ್ರನ ಬುದ್ಧಿ ಚಾತುರ್ಯವನ್ನೂ ಧೈರ್ಯವನ್ನೂ ಹೊಗಳಿದ್ದೂ ಹೊಗಳಿದ್ದೇ. ಹೆಂಗಸರೆಲ್ಲಾ ತಮ್ಮ ಮಕ್ಕಳಿಗೆ ಜೀವನಾನಪರ್ಯಂತ ಸಿಂಗ್ರನ ಹೆಸರು ಹೇಳಿಕೊಂಡು ಬದುಕಿರಬೇಕು ಎಂದು ಹೇಳಿದರು.

ಅವನನ್ನು ಹೊಗಳಿ ಹಾಡುತ್ತ ಅವನಿಗೆ ಧನ್ಯವಾದವನ್ನರ್ಪಿಸಲು ಅವರೆಲ್ಲ ಒಂದೆಡೆ ಸೇರಿದರು. ಸಿಂಗ್ರ ತನ್ನ ಕುದುರೆಯನ್ನೇರುತ್ತ ಹೇಳಿದ– "ಈ ಪ್ರಪಂಚದಲ್ಲಿರುವ ಪ್ರತಿಯೊಂದು ಪ್ರಾಣಿಯೂ ಸುಖವಾಗಿ ಬದುಕಬೇಕೆಂಬುದು ದೇವರ ಇಚ್ಛೆ. ಅವನ ಈ ಇಚ್ಛೆಯನ್ನು ಯಾವುದೇ ಸಂದರ್ಭದಲ್ಲೂ ಉಲ್ಲಂಘಿಸಕೂಡದು. ಈಗ ಹೇಗೂ ದೈತ್ಯ ನಿರ್ನಾಮವಾದ. ಇನ್ನು ಮುಂದೆ ಯಾರೊಬ್ಬರೂ ಇನ್ನೊಬ್ಬರನ್ನು ಪೀಡಿಸಿಕೊಂಡು ಬದುಕಿರಬಾರದು. ನೀವೆಲ್ಲರೂ ಸುಖಶಾಂತಿಗಳಿಂದ ಬದುಕಬೇಕೆಂದೂ ನಿಮ್ಮ ದನಕರುಗಳು ಮೊದಲಿನ ಹಾಗೆ ಅಧಿಕವಾಗಬೇಕೆಂದೂ ನನ್ನ ಆಶೆ."

ಸಿಂಗ್ರ ಹೋದ ಮೇಲೂ ಅವನ ಬಗ್ಗೆ ಕೃತಜ್ಞತೆಯನ್ನು ವ್ಯಕ್ತಪಡಿಸಲು ಅವರು ನಾಚಿಕೊಂಡೇ ಇದ್ದರು. ಅವನು ಕಣ್ಣಿನಿಂದ ಮರೆಯಾಗುವವರೆಗೂ ಅವನು ಹೋದ ದಾರಿಯ ಕಡೆಗೇ ಅವರ ದೃಷ್ಟಿಗಳು ನಟ್ಟಿದ್ದುವು.

ಈ ಸಾಹಸಕಾರ್ಯವಾದ ನಂತರ ಸಿಂಗ್ರ ಪೂರ್ವಸಾಗರ ದ್ವೀಪದಲ್ಲಿದ್ದ ತನ್ನ ಮೊದಲ ಹೆಂಡತಿಯನ್ನು ನೋಡಲು ಹೊರಟ. ಹೆಂಡತಿ ಅವನನ್ನು ನೋಡುತ್ತಿದ್ದಹಾಗೆಯೇ ಅಳುವುದಕ್ಕೆ ಪ್ರಾರಂಭಿಸಿದಳು. ಕಾರಣ ಒಂದು ವರ್ಷದಿಂದ ಅವನನ್ನು ಕಂಡಿರಲಿಲ್ಲ. ಯಾವಾಗ ಸಿಂಗ್ರ ತನ್ನ ರಾಮಾಯಣವನ್ನೆಲ್ಲ ಹೇಳಿದನೋ ಆಗ ಅವಳ ಅಳು ನಿಂತಿತು.

ಆದರೆ ಅವನ ಹೆಂಡತಿ ಒಂದು ಭಾರೀ ಮೂರ್ಖತನ ಮಾಡಿದಳು. ಮತ್ತೆ ಅವನು ಸಂಚಾರ ಹೊರಡುವುದನ್ನು ತಪ್ಪಿಸಲು ರಾತ್ರಿ ಸದ್ದಿಲ್ಲದೆ ಅವನ ಕುದುರೆಯ ಒಂದು ರೆಕ್ಕೆಯನ್ನು ಕತ್ತರಿಸಿ ಹಾಕಿದಳು.

ಸಿಂಗ್ರ ತನ್ನ ಎರಡನೇ ಹೆಂಡತಿಯನ್ನು ನೋಡಿಬರಲು ಮರುದಿನ ಹೊತ್ತಿಗೆ ಮುಂಚೆಯೇ ಎದ್ದ. ವಾಯುವೇಗದಿಂದ ಓಡುವ ತನ್ನ ಕುದುರೆಯ ಬೆನ್ನೇರಿದ. ಆದರೆ ಅಲ್ಲಿಗೆ ಹೋಗುವಷ್ಟರೊಳಗೆ ಅವನು ಬಹಳ ಕಷ್ಟಗಳನ್ನು ಎದುರಿಸಬೇಕಾಗಿ ಬಂತು. ಅವನ ಬಹುಪಾಲು ಶಕ್ತಿಯೆಲ್ಲಾ ಇದರಲ್ಲೇ ಖರ್ಚಾಗಿ ಹೋಯಿತು. ಅವನನ್ನು ಕಾಣುತ್ತಿದ್ದಂತೆಯೇ ಅವನ ಎರಡನೇ ಹೆಂಡತಿಯ ಕಣ್ಣಲ್ಲೂ ನೀರಾಡಿತು. ಆದರೆ ತಾನು ದೈತ್ಯನನ್ನೂ ಒಂದು ಹೆಬ್ಬಾವನ್ನೂ ಕೊಂದ ಕಥೆಯನ್ನೆಲ್ಲಾ ಹೇಳಿದ ಮೇಲೆ ಅವಳಿಗೆ ಬಹಳ ಸಂತೋಷವಾಯಿತು.

ಆದರೆ ಮತ್ತೆ ಅವನು ಮನೆ ಬಿಟ್ಟು ಹೋಗುವುದನ್ನು ತಪ್ಪಿಸಲು ರಾತ್ರಿ ಸದ್ದಿಲ್ಲದೆ ಅವನ ಕುದುರೆಯ ಇನ್ನೊಂದು ರೆಕ್ಕೆಯನ್ನೂ ಕತ್ತರಿಸಿ ಹಾಕಿದಳು.

ಸಿಂಗ್ರನ ಇಚ್ಛೆ ಈಗ ಇನ್ನೊಂದು ಸಂಚಾರ ಹೊರಡುವುದಾಗಿತ್ತು. ಆ ದಿನ ಜೂನ್ ತಿಂಗಳ ಕಾರ್ಗತ್ತಲ ರಾತ್ರಿ. ಮುಂಜಾನೆಗೇ ಎದ್ದ. ಸದ್ದಿಲ್ಲದೆ ತನ್ನ ಕುದುರೆಯನ್ನು ಹೊರತಂದು ಅದನ್ನು ಏರಿಯೇ ಬಿಟ್ಟ. ಆದರೆ ಒಂದು ರೆಕ್ಕೆಯೂ ಇಲ್ಲದ್ದರಿಂದ ಕುದುರೆಗೆ ಗಾಳಿಯಲ್ಲಿ ಹಾರಲಾಗಲಿಲ್ಲ. ಅದು ಸುತ್ತಲೂ ತಿರುಗುತ್ತಾ ದುಃಖಿತ ಕಂಠದಿಂದ ಕೆನೆಯುವುದಕ್ಕೆ ಶುರುಮಾಡಿತು.

ಅವನ ಹೆಂಡತಿ ಕೂಡಲೇ ಹೊರಕ್ಕೆ ಬಂದಳು. ಆದರೆ ಅವಳು ಏನಾದರೂ ಹೇಳುವುದಕ್ಕೆ ಮುನ್ನವೇ ಸಿಂಗ್ರನೂ ಅವನ ಕುದುರೆಯೂ ಸಮುದ್ರದಲ್ಲಿ ಬಿದ್ದು ಬಿಟ್ಟವು.

ಸಿಂಗ್ರ ಸಮುದ್ರದಲ್ಲಿ ಮುಳುಗಿಹೋದನೆಂಬ ಸಮಾಚಾರ ಮನುಷ್ಯರ ಕಿವಿಗೆ, ಪ್ರಾಣಿಗಳ ಕಿವಿಗೆ ಬಲು ಬೇಗ ಬಿತ್ತು. ಅವರ ದುಃಖವನ್ನು ವರ್ಣಿಸಲು ಸಾಧ್ಯವೇ ಇಲ್ಲ.

ಜನಗಳ ಗುಂಪುಗುಂಪೇ ತಮ್ಮ ಸನ್ಮಿತ್ರನನ್ನು ಗೌರವಿಸಲು ಸಮುದ್ರದ ದಂಡೆಯಲ್ಲಿ ಸೇರಿದೆ. ದುಃಖಗೊಂಡ ಪಕ್ಷಿಗಳು ಕಾಂವ್ ಕಾಂವ್ ಎಂಬು ಕೂಗಲು ತೊಡಗಿದವು. ತಮ್ಮ ವೀರನನ್ನು ಮರಳಿ ಕೊಟ್ಟುಬಿಡು ಎಂದು ಅವರೆಲ್ಲ ಮೊರೆಯಿಟ್ಟರು.

ಆದರೆ ಅವರ ಪ್ರಶ್ನೆಗೆ ಉತ್ತರಕೊಟ್ಟದ್ದು; ಉಕ್ಕಿ ಏರುವ ಅಲೆಗಳು. ಕೊನೆಗೆ ಬಳಲಿದ ಪಕ್ಷಿಗಳು ತಮ್ಮ ತಮ್ಮ ಗೂಡಿಗೆ ಹಿಂತಿರುಗಿದುವು. ಈಗಲೂ ಅವು ಆಸೆಬಿಟ್ಟಿಲ್ಲ. ಪ್ರತಿವರ್ಷ ಜೂನ್ ತಿಂಗಳಲ್ಲಿ ಬೆಟ್ಟದ ಮೇಲೆ ಯಾವ ಪಕ್ಷಿಯೂ ಕಾಣಿಸುವುದಿಲ್ಲ. ಅವು ತಮ್ಮ ಸಿಂಗ್ರನನ್ನು ಹಿಂದಕ್ಕೆ ಕಳುಹಿಸಿಕೊಡು ಎಂದು ಪ್ರಾರ್ಥಿಸಲು ಸಮುದ್ರದ ಬಳಿ ಸೇರುತ್ತವೆ.

ಸಮುದ್ರ ಎಂದಿನಂತೆ ಭಯಂಕರವಾಗಿ ಮೊರೆಯುತ್ತಿರುತ್ತದೆ. ಆದರೆ ಪಕ್ಷಿಗಳ ಪ್ರಶ್ನೆಗೆ ಅದರಿಂದ ಉತ್ತರವಿಲ್ಲ.

ಬುದ್ಧಿವಂತ ಹೆಂಡತಿ

ಒಂದೂರಿನಲ್ಲಿ ಒಬ್ಬ ಹುಡುಗಿ ಇದ್ದಳು. ಅವಳು ತುಂಬ ಚೆಲುವೆ ಮತ್ತು ಬುದ್ಧಿವಂತೆ. ಕಸೂತಿ ಕೆಲಸದಲ್ಲಿ ಅವಳು ನಿಪುಣೆ. ಬಟ್ಟೆಗಳ ಮೇಲೆ ಗಿಡ ಬಳ್ಳಿಗಳನ್ನು ಚಿತ್ರಿಸುವುದರಲ್ಲಿ ಅವಳಿಗೆ ಸಮಾನರು ಇನ್ನು ಯಾರೂ ಇರಲಿಲ್ಲ. ಆದರೆ ಅವಳು ಒಂದು ಬಡ ಕುಟುಂಬದ ಹೆಣ್ಣು.

ಚಿಕ್ಕಂದಿನಿಂದಲೇ ಅವಳು ಒಬ್ಬ ಯುವಕನನ್ನು ಪ್ರೀತಿಸುತ್ತಿದ್ದಳು. ಆ ಹುಡುಗನ ಮನೆಯವರೂ ಅವಳ ಮನೆಯವರ ಹಾಗೆಯೇ ತುಂಬ ಬಡವರು. ಒಂದು ಮುರುಕು ಗುಡಿಸಿಲು ಬಿಟ್ಟರೆ ಅವನದ್ದಾಗಿ ಇನ್ನೇನೂ ಇರಲಿಲ್ಲ. ತನ್ನ ಅಪಾರ ಪರಿಶ್ರಮದಿಂದ ಸಂಪಾದಿಸಿದ ಹಣದಿಂದ ಜೀವಿಸುತ್ತಿದ್ದ ಈ ಯುವಕ ಹೆಚ್ಚು ಬುದ್ಧಿವಂತನೇನಲ್ಲ; ಆದರೆ ಪ್ರಾಮಾಣಿಕತೆಯಲ್ಲಿ ಎಲ್ಲರಿಗಿಂತ ಮುಂದಿದ್ದ. ಇನ್ನೊಬ್ಬರಿಗೆ ಮೋಸಮಾಡುವುದನ್ನು ಅವನೆಂದೂ ಕಲಿತಿರಲಿಲ್ಲ. ಬೇರೆಯವರ ಮಾತನ್ನು ಕೂಡಲೇ ನಂಬಿಬಿಡುವಷ್ಟು ಭೋಳೆ ಸ್ವಭಾವದ ವ್ಯಕ್ತಿ. ಹುಡುಗಿ ಎಳೆಯ ವಯಸ್ಸಿನಿಂದ ಈ ಯುವಕನ ಜೊತೆ ನಕ್ಕು ನಲಿದು ದಿನಕಳೆಯುತ್ತ ಬಂದಿದ್ದಳು. ಇಷ್ಟೊಂದು ವರ್ಷಗಳಿಂದ ಜೊತೆ ಜೊತೆಯಲ್ಲೇ ಇದ್ದುದರಿಂದ ಒಬ್ಬರನ್ನೊಬ್ಬರು ಚೆನ್ನಾಗಿ ಅರಿತಿದ್ದರು. ಅವರಿಂದ ಹುಡುಗಿಗೆ ತನ್ನ ಪ್ರೇಮಿಯ ಬಗ್ಗೆ ಯಾವುದೇ ಸಂಶಯವಿರಲಿಲ್ಲ. ಮತ್ತು ಅವನನ್ನು ತನ್ನ ಹೃದಯ ದೇಗುಲದಲ್ಲಿ ನೆಲೆಗೊಳಿಸಿದ್ದಳು. ತಂದೆ ತಾಯಿಗಳೂ ಮಗಳ ಮನಸ್ಸನ್ನು ತಿಳಿದಿದ್ದರು. ಈ ಸಂಬಂಧವನ್ನು ಸಂತೋಷದಿಂದ ಒಪ್ಪಿಕೊಂಡರು. ಇಬ್ಬರ ಮದುವೆಯೂ ನಿಷ್ಕರ್ಷೆಯಾಯಿತು. ಹುಡುಗನಿಗೆ ಸಂಬಳ ಬಂದ ಮೇಲೆ ಮದುವೆಯ ಶಾಸ್ತ್ರವನ್ನು ಮುಗಿಸುವುದು ಎಂದು ನಿಶ್ಚಿತವಾಯಿತು.

ಆ ಪ್ರಾಂತದ ರಾಜನೂ ತನ್ನನ್ನು ಪ್ರೇಮಿಸುತ್ತಿದ್ದಾನೆ ಮತ್ತು ತನ್ನನ್ನು ರಾಣಿಯನ್ನಾಗಿ ಮಾಡಿಕೊಳ್ಳಬೇಕೆಂದಿದ್ದಾನೆಂಬ ಸಮಾಚಾರ ಪಾಪ ಆ ಹುಡುಗಿ

ಗೇನು ಗೊತ್ತು ! ಹಾಗೆ ನೋಡಿದರೆ ಆಗಿನ ಪದ್ಧತಿಯಂತೆ ಯಾವ ಊರಿನಲ್ಲಿ ಚೆಲುವೆಯಾದ ಹೆಣ್ಣಿದ್ದರೂ ಆ ಸುದ್ದಿ ರಾಜನ ಕಿವಿಗೆ ಮುಟ್ಟುತ್ತಿತ್ತು. ರಾಜನಿಗೆ ಅವಳ ಮೇಲೆ ಮನಸ್ಸಾಯಿತೆಂದರೆ ಅವಳನ್ನು ತನ್ನ ಅಂತಃಪುರಕ್ಕೆ ಸೇರಿಸಿ ಕೊಂಡು ಬಿಡುತ್ತಿದ್ದ. ಈ ಹುಡುಗಿಯ ಸೌಂದರ್ಯದ ವಿಚಾರವೂ ರಾಜನ ಕಿವಿಯನ್ನು ಮುಟ್ಟಿತು, ಆದರೆ ರಾಜ ಇದುವರೆಗೂ ಆ ಹುಡುಗಿಯನ್ನು ಕಣ್ಣಿಂದ ನೋಡಿರಲಿಲ್ಲ. ಒಂದು ದಿನ ಮಂತ್ರಿ ಆ ಚೆಲುವೆ ಕಸೂತಿ ಹಾಕಿದ ಒಂದು ಹೂವನ್ನು ರಾಜನಿಗೆ ತೋರಿಸಿದ. ಹೂವು ನೋಡುತ್ತಿದ್ದಂತೆಯೇ ರಾಜ ಅವಳ ಮೇಲೆ ಮೋಹಗೊಂಡ.

ಕೆಲ ದಿನಗಳ ನಂತರ ತನ್ನೊಬ್ಬ ದೂತನನ್ನು ಹುಡುಗಿಯ ತಂದೆ ತಾಯಿಗಳಲ್ಲಿಗ ಕಳುಹಿಸಿದ. ದೂತ ರಾಜನ ಮದುವೆಯ ಪ್ರಸ್ತಾಪಕ್ಕೋಸ್ಕರ ಹುಡುಗಿಯ ಮನೆಗೆ ಬಂದ. ಅವರಪ್ಪನಿಗೆ ಹೇಳಿದ– "ನಿಮ್ಮ ಮಗಳ ಅದೃಷ್ಟ ಖುಲಾಯಿಸಿತು. ದೊರೆಗಳು ಅವಳನ್ನು ಮದುವೆಯಾಗಲು ಬಯಸಿದ್ದಾರೆ. ನಾನು ರಾಜನ ಕಡೆಯಿಂದ ಮದುವೆಯ ಸಂದೇಶ ತೆಗೆದುಕೊಂಡು ಬಂದಿದ್ದೇನೆ". ತಂದೆ ಹೇಳಿದ– " ಅವಳ ಮದುವೆ ಗೊತ್ತಾಗಿದೆ. ಅವಳು ಆಗಲೇ ಒಬ್ಬನನ್ನು ಒಪ್ಪಿ ಆಗಿದೆ. ಬೇಕಾದರೆ ನೀವೇ ಹೋಗಿ ಅವಳನ್ನು ಕೇಳಿ."

ದೂತನಿಗೆ ವಿಪರೀತ ಸಿಟ್ಟುಬಂದಿತು.ಮನಸ್ಸಿನಲ್ಲೇ ಗೊಣಗಿಕೊಂಡ– "ಈ ಮನುಷ್ಯನಿಗೆ ಇಷ್ಟೊಂದು ಧೈರ್ಯವೆ ! ರಾಜನ ಮಾತಿಗೆ ಯಾವ ಬೆಲೆಯೂ ಇಲ್ಲ. ಹುಡುಗಿಯದೇ ಇದೆಲ್ಲವೂ !" ಆಮೇಲೆ ಆವನು ಹುಡುಗಿಯ ಮುಂದೆ ರಾಜನ ಪ್ರಸ್ತಾಪ ಇಟ್ಟ.

ಹುಡುಗಿ ಆ ದೂತನಿಗೆ ಹೇಳಿದಳು– " ನೀವು ಹೋಗಿ ನಿಮ್ಮ ರಾಜರಿಗೆ ಹೇಳಿ; ನನಗೆ ಅವರ ಹೆಂಡತಿ ಆಗುವ ಯೋಗ್ಯತೆ ಇಲ್ಲ. ನಾನೊಂದು ಬಡ ಕುಟುಂಬದ ಹೆಣ್ಣು. ಆದ್ದರಿಂದ ಯಾರಾದರೂ ನನ್ನಂತೆಯೇ ಬಡವನಾದೊಬ್ಬ ಯುವಕನನ್ನು ಮದುವೆಯಾಗುತ್ತೇನೆ. ಒಂದು ವೇಳೆ ಹೊಟ್ಟೆಗಿಲ್ಲದೆ ಸಾಯ ಬೇಕಾಗಿ ಬಂದರೂ ಅವನ ಜೊತೆಯಲ್ಲಿ ಸಂತೋಷವಾಗಿರುತ್ತೇನೆ. ರಾಜರ ಮನೆಯಲ್ಲಿ ವೈಭೋಗದಿಂದಿರಬಹುದು. ಆದರೆ ರಾಜರ ಭೋಗವಿಲಾಸಗಳಲ್ಲಿ

ನನಗೆ ಸ್ವಲ್ಪವೂ ಆಸೆ ಇಲ್ಲ. ಅದೂ ಅಲ್ಲದೆ ನನ್ನಂಥವಳನ್ನು ರಾಣಿಯನ್ನಾಗಿ ಮಾಡಿಕೊಳ್ಳುವುದು ರಾಜರಿಗೂ ಶೋಭಿಸುವುದಿಲ್ಲ. ನನ್ನನ್ನು ಮದುವೆಯಾದರೆ ಅವರ ಗೌರವಕ್ಕೇ ಕುಂದು".

ರಾಜದೂತ ಇದುವರೆಗೂ ಇಂಥ ನಿರ್ದಾಕ್ಷಿಣ್ಯದ ಮಾತುಗಳನ್ನು ಎಲ್ಲಿಯೂ ಕೇಳಿರಲಿಲ್ಲ. ಆಗವನು ಮನಸ್ಸಿಗೆ ಬಂದದ್ದನ್ನು ಅಂದುಕೊಂಡು ಅವರ ಮನೆಯಿಂದ ಹೊರಟು ಹೋದ. ರಾಜನ ಹತ್ತಿರ ಹೋಗಿ ಎಲ್ಲ ಸಮಾಚಾರವನ್ನೂ ಹೇಳಿದ. ಇದನ್ನು ಕೇಳುತ್ತಿದ್ದ ಹಾಗೆಯೇ ರಾಜ ಉಗ್ರಕಂಠದಿಂದ ಗುಡುಗಿದ– "ನಾನೂ ನೋಡ್ತೀನಿ ಅದು ಹ್ಯಾಗೆ ಅವಳು ನನ್ನ ಬಲೆಯಿಂದ ತಪ್ಪಿಸಿಕೊಳ್ತಾಳೋ".

ಹುಡುಗಿ ತಾನು ಮೊದಲಿನಿಂದ ಪ್ರೇಮಿಸಿದ ಯುವಕನನ್ನು ಮದುವೆಯಾದಳು. ಗಂಡ ಹೆಂಡಿರು ದಿನವೆಲ್ಲಾ ಚೆನ್ನಾಗಿ ಕಷ್ಟ ಪಟ್ಟು ಕೆಲಸ ಮಾಡುತ್ತಿದ್ದರು. ಮಿತವಾಗಿ ಜೀವನ ನಡೆಸುತ್ತಿದ್ದರು. ಕ್ರಮೇಣ ಎಂಟು ಆಣೆ ಕೂಡಿಟ್ಟರು. ಒಂದು ದಿನ ಹುಡುಗಿ ಗಂಡನಿಗೆ ಹೇಳಿದಳು– " ನೋಡಿ ನೀವು ಪಟ್ಟಣಕ್ಕೆ ಹೋಗಿ ಈ ದುಡ್ಡಿನಿಂದ ಸ್ವಲ್ಪ ನೂಲು ತೆಗೆದುಕೊಂಡು ಬನ್ನಿ." ಯುವಕ ಪಟ್ಟಣದಿಂದ ನೂಲು ತಂದುಕೊಟ್ಟ. ಹುಡುಗಿ ಹಗಲೂ ರಾತ್ರಿ ಕಷ್ಟಪಟ್ಟು ಕೆಲಸ ಮಾಡಿ ನಾಲ್ಕು ಒಳ್ಳೆಯ ಪಟ್ಟಿಗಳನ್ನು ನೂತಳು. ಅವಳ ಗಂಡ ಅವನ್ನು ಮಾರಲು ಪೇಟೆಗೆ ಒಯ್ದ. ನೆಯ್ಗೆ ಕುಶಲತೆಯಿಂದ ಕೂಡಿತ್ತು. ಅದರಿಂದಾಗಿ ನಾಲ್ಕೂ ಪಟ್ಟಿಗಳು ಬಲು ಬೇಗ ಮಾರಾಟವಾದುವು. ಒಟ್ಟು ಹದಿನಾರು ಆಣೆ ಸಿಕ್ಕಿದುವು. ಹನ್ನೆರಡು ಆಣೆಗೆ ಮನೆಗೆ ಸಾಮಾನು ತಂದ. ನಾಲ್ಕು ಆಣೆಗೆ ನೂಲು ತಂದ. ಹುಡುಗಿ ಈ ಸಲ ಇನ್ನಷ್ಟು ಉತ್ತಮವಾದ ಹೆಚ್ಚು ಪಟ್ಟಿಗಳನ್ನು ನೂತಳು. ಅವನ್ನು ಮಾರಿದ್ದರಿಂದ ನಲವತ್ತು ಆಣೆ ಸಿಕ್ಕಿತು. ಒಂದು ದಿನ ಹುಡುಗಿ ಗಂಡನಿಗೆ ಹೇಳಿದಳು– "ಈಗ ನೀವು ಹೋಗಿ ಸ್ವಲ್ಪ ಬಣ್ಣದ ನೂಲು ತನ್ನಿ. ಒಂದು ಶಾಲು ನೇಯುತ್ತೇನೆ. ಆದರ ಮೇಲೆ ಹೂವಿನ ಕಸೂತಿ ಹಾಕುತ್ತೇನೆ.

ಬಣ್ಣದ ನೂಲು ಬಂತು. ಒಂದೆರಡು ದಿನದಲ್ಲಿ ಶಾಲು ತಯಾರಾಯಿತು. ಹುಡುಗಿ ಗಂಡನಿಗೆ ಹೇಳಿದಳು– " ಈ ಶಾಲನ್ನು ಪೇಟೆಯಲ್ಲಿ ಮಾರಿಕೊಂಡು

ಬನ್ನಿ. ಆದರೆ ಒಂದು ಮಾತು. ಇಪ್ಪತ್ತು ಬೆಳ್ಳಿ ರೂಪಾಯಿಗಿಂತ ಕಮ್ಮಿಗೆ ಮಾರಕೂಡದು. ಒಂದು ಮಾತು ಮರೆಯುಕೂಡದು. ಪಟ್ಟಣದ ಇಪ್ಪತ್ತೊಂದನೇ ರಸ್ತೆಯಲ್ಲಿ ಹೋಗಕೂಡದು. ಪಟ್ಟಣದ ಉಳಿದ ನಲವತ್ತು ರಸ್ತೆಗಳಲ್ಲಿ ಎಲ್ಲೂ ಮಾರಾಟವಾಗದಿದ್ದರೆ ವಾಪಸ್ ತನ್ನಿ."

ಅವಳ ಗಂಡ ಶಾಲನ್ನ ತೆಗೆದುಕೊಂಡು ಪೇಟೆಯನ್ನೆಲ್ಲ ತಿರುಗ ತೊಡಗಿದ. ಜನ ಅವನ ಸುತ್ತಲೂ ಮುತ್ತಿಕೊಂಡರು. ಶಾಲು ಎಷ್ಟೊಂದು ಚೆನ್ನಾಗಿತ್ತೆಂದರೆ ಗಿರಾಕಿಗಳಿಗೆ ಅದನ್ನು ಎಷ್ಟು ಹೊಗಳಿದರೂ ತೃಪ್ತಿ ಇಲ್ಲ. ಆದರೆ ಇಪ್ಪತ್ತು ರೂಪಾಯಿ ಕೊಟ್ಟು ಕೊಂಡುಕೊಳ್ಳಲು ಯಾರೂ ಸಿದ್ಧರಿರಲಿಲ್ಲ. ಸಂಜೆಯ ತನಕ ಬೀದಿ ಬೀದಿ ಅಲೆಯುತ್ತಿದ್ದ. ಆದರೆ ಯಾವ ಗಿರಾಕಿಯೂ ಸಿಕ್ಕಲಿಲ್ಲ. ಯೋಚನೆ ಮಾಡಿದ– "ಮನೆಗೆ ಹೋಗಿ ಬಿಡಲೆ? ಬರೀ ಕೈಯಲ್ಲಿ ಹೋದರೆ ಹೆಂಡತಿಗೆ ನಿರಾಸೆಯಾಗುತ್ತೆ". ಇದೇ ಯೋಚನೆಯಲ್ಲಿ ಮುಂದುವರಿಯುತ್ತ ಇಪ್ಪತ್ತೊಂದನೇ ರಸ್ತೆಗೆ ಹೋಗಿನಿಂತ. ಆ ಸಮಯದಲ್ಲಿ ಹೆಂಡತಿ ಹೇಳಿದ್ದ ಮಾತನ್ನು ಪೂರ್ತಿ ಮರೆತಿದ್ದ. ಈ ರಸ್ತೆಯಲ್ಲಿ ಭಾರಿ ಭಾರಿ ಉಪ್ಪರಿಗೆಯ ಮಹಲುಗಳಿದ್ದವು. ಈ ಬಡಾವಣೆ ಜನವಸತಿಯಿಂದ ಬಹಳ ದೂರ ಇತ್ತು. ಇಲ್ಲಿಯ ವಾತಾವರಣ ಅವನಿಗೆ ಸ್ವಲ್ಪ ವಿಚಿತ್ರವಾಗಿ ಕಂಡಿತು. ಇದು ಬಹುಶಃ ಅರಮನೆಯಿರಬೇಕು ಅಂದುಕೊಂಡ. ಕೂಡಲೇ ಅವನಿಗೆ ತನ್ನ ಹೆಂಡತಿಯ ಮಾತು ನೆನಪಿಗೆ ಬಂತು. ಅಲ್ಲಿಂದ ಇನ್ನೇನು ಹೊರಡ ಬೇಕೆನ್ನುವಷ್ಟರಲ್ಲಿ ಅರಮನೆಯಿಂದ ರಾಜ ವೇಷವನ್ನು ಧರಿಸಿದ್ದ ಒಬ್ಬ ವ್ಯಕ್ತಿ ಬಂದ. ಅವನು ಕುದುರೆಯನ್ನೇರಿದ್ದ. ಅವನ ಅಕ್ಕ ಪಕ್ಕದಲ್ಲಿ ಬಹಳ ಜನ ಕರಣಿಕರಿದ್ದರು. ಅವನ ದೃಷ್ಟಿ ಆ ಯುವಕನ ಮೇಲೆ ಬಿತ್ತು. ಅವನು ಯುವಕನನ್ನು ಕೇಳಿದ– "ಎಲಾ ಇಲ್ಲೇನು ಮಾಡುವುದಕ್ಕೆ ಬಂದಿದ್ದಿ? ಇದು ನನ್ನ ಅರಮನೆ ಅನ್ನುವುದು ಕಾಣುವುದಿಲ್ಲವೆ"? ರಾಜನ ಗದರಿಕೆಯ ಮಾತು ಕೇಳಿ ಅವನು ಬೆಚ್ಚಿದ.

ಯುವಕ ಹೇಳಿದ– "ಇದು ತಮ್ಮ ಅರಮನೆ ಅಂತ ನನಗೆ ಗೊತ್ತಿರಲಿಲ್ಲ ಪ್ರಭೂ. ನನ್ನನ್ನು ಕ್ಷಮಿಸಿ ಸ್ವಾಮಿ. ಈ ಕ್ಷಣ ಇಲ್ಲಿಂದ ಹೊರಟುಹೋಗ್ತೀನಿ". ಅವನು ಹೊರಟು ನಿಂತ. ರಾಜ ಅವನನ್ನು ತಡೆದು ಕೇಳಿದ– "ಇದೇನು ನಿನ್ನ

ಕೈಲಿರೋದು"? ಅವನು ಹೇಳಿದ- "ಬಡವರ ಬಂಧುವೆ, ನನ್ನ ಹತ್ತಿರ ಅಂಥ ಹೇಳಿ ಕೊಳ್ಳುವಂಥದ್ದು ಏನೂ ಇಲ್ಲ. ಒಂದು ತೀರಾ ಸಾಧಾರಣವಾದ ಶಾಲು ಇದೆ". ರಾಜ ಹೇಳಿದ- "ಸ್ವಲ್ಪ ತೋರಿಸು ಅದನ್ನ".

ಶಾಲನ್ನು ನೋಡುತ್ತಿದ್ದ ಹಾಗೆಯೇ ಈ ಕಸೂತಿ ಕೆಲಸ ಆ ಹುಡುಗಿಯದೇ ಎಂದು ತಿಳಿಯಲು ಅವನಿಗೆ ತಡವಾಗಲಿಲ್ಲ. ಕಾರಣ ಇದಕ್ಕೆ ಮೊದಲು ಅವಳು ಕಸೂತಿ ಹಾಕಿದ್ದ ಒಂದು ಹೂವನ್ನು ಅವನು ನೋಡಿದ್ದ. ರಾಜ ಕೇಳಿದ- "ಇದನ್ನು ಯಾರು ಹಾಕಿದವರು"? ಯುವಕನ ಕೈಕಾಲು ನಡುಗತೊಡಗಿದುವು. ಏಕೆಂದರೆ ಇಂಥ ಪ್ರಶ್ನೆಯನ್ನು ಕೇಳಬಹುದು ಎನ್ನುವುದು ಅವನ ಕನಸು ಮನಸಿನಲ್ಲೂ ಮೂಡಿರಲಿಲ್ಲ. ಅದರಿಂದ ಗಾಬರಿಗೊಂಡು ಹೇಳಿದ- "ನಾನೇ ಹಾಕಿದ್ದು ಸ್ವಾಮಿ" ಅವನಿನ್ನೂ ಈ ಮಾತು ಮುಗಿಸಿರಲಿಲ್ಲ. ಅಲ್ಲಿದ್ದವರೆಲ್ಲಾ ಗೊಳ್ಳೆಂದು ನಕ್ಕರು. ಈಗ ಇನ್ನಷ್ಟು ಗಾಬರಿಯಾದ. ರಾಜ ಹೇಳಿದ- " ಹೆದರಬೇಡ. ನಿಜ ಹೇಳು. ಈ ಕಸೂತಿ ಯಾರದ್ದು". ಯುವಕ ಅಳುಕುತ್ತಾ ಹೇಳಿದ- ಪ್ರಭೂ, ಹೌದು ಮರೆತಿದ್ದೆ. ಈ ಶಾಲನ್ನು ನೆಯ್ದುವಳು ನನ್ನ ಅಕ್ಕ".

ಇದನ್ನು ಕೇಳುತ್ತಿದ್ದಂತೆಯೇ ರಾಜ ಹುಬ್ಬುಗಂಟಿಕ್ಕಿದ- "ನೀನು ಪಕ್ಕಾ ಸುಳ್ಳು ಹೇಳುತ್ತಿದ್ದೀ". ಬಿಗುವಿನಿಂದ ಹೇಳಿದ- "ಬೇಗ ನಿಜ ಹೇಳು. ಇಲ್ಲದೆ ಇದ್ದರೆ ನಿನಗೆ ನೆಟ್ಟಗಾಗೋದಿಲ್ಲ". ಯುವಕನ ಉಸಿರೇ ಅಡಗಿಹೋಯಿತು. ರಾಜನಿಗೆ ಮೋಸ ಮಾಡುವುದು ಅವನ ಕೈಯಲ್ಲಿ ಆಗದ್ದು. ಕಡೆಗೆ ನಿಜ ಹೇಳಬೇಕಾಯಿತು-"ಪ್ರಭೂ ನನ್ನನ್ನು ಕ್ಷಮಿಸಿ. ನಾನು ನಿಮ್ಮ ಹತ್ತಿರ ತುಂಬ ಸುಳ್ಳು ಹೇಳಿದೆ. ನಿಜ ಹೇಳಬೇಕು ಅಂದರೆ ಈ ಶಾಲನ್ನು ನೆಯ್ದುವಳು ನನ್ನ ಹೆಂಡತಿ."

ರಾಜ ಕೇಳಿದ- "ಒಳ್ಳೇದು. ಇದನ್ನು ಎಷ್ಟಕ್ಕೆ ಮಾರಬೇಕೆಂದಿದ್ದಿ ಹೇಳು?"

ಯುವಕ ಹೇಳಿದ- "ಇದರ ಬೆಲೆ ಇಪ್ಪತ್ತು ಬೆಳ್ಳಿರೂಪಾಯಿ ಸ್ವಾಮಿ". ರಾಜ ಪೂರ್ತಿ ಬೆಲೆಕೊಟ್ಟು ಶಾಲನ್ನು ಕೊಂಡುಕೊಂಡ. ಅವನಿಗೆ ಹೇಳಿದ- "ನಾನು ಹೊರಗಡೆ ಬೇಟೆಗೆ ಹೋಗ್ತಾ ಇದ್ದೀನಿ. ವಾಪಸ್ ಬರುವಾಗ ನಿಮ್ಮ ಮನೆ ಹತ್ತಿರ ಸ್ವಲ್ಪ ಹೊತ್ತು ನಿಲ್ತೀನಿ. ನೀನು ನಿಮ್ಮ ಮನೆಯಲ್ಲಿ ನನಗೆ ಊಟ ತಿಂಡಿಗೆ ಏನಾದರೂ ಸ್ವಲ್ಪ ಏರ್ಪಾಟು ಮಾಡು."

ಯುವಕ ತನ್ನ ಮನೆಯ ದಾರಿ ಹಿಡಿದ. ದಾರಿಯಲ್ಲಿ ತನ್ನ ಕೆಲಸಕ್ಕೆ ತುಂಬ ಕೈ ಕೈ ಹಿಸುಕಿಕೊಂಡ. ಮನಸ್ಸಿನಲ್ಲೇ ಅಂದುಕೊಂಡ– "ನಾನಾಗಿ ನಾನು ನನ್ನ ಕಾಲ ಮೇಲೆ ಕೊಡಲಿ ಹಾಕಿಕೊಂಡೆ. ನನ್ನ ಹೆಂಡತಿಯ ಮಾತಿಗೆ ಲಕ್ಷ್ಯ ವನ್ನೇ ಕೊಡಲಿಲ್ಲ. ಅವಳು ಯಾವ ದಾರಿಯಲ್ಲಿ ಹೋಗಬೇಡ ಎಂದು ಹೇಳಿ ದ್ದಳೋ ನಾನು ಆ ದಾರಿಯಲ್ಲೇ ಹೋದೆ. ಮತ್ತು ಅವಸರದಲ್ಲಿ ಶಾಲನ್ನು ಮಾರಿದೆ." ಇದೇ ಚಿಂತೆಯಲ್ಲಿ ಮನೆಗೆ ಹಿಂತಿರುಗಿದ. ಬರುತ್ತಿದ್ದ ಹಾಗೆಯೇ ಹಣವನ್ನೆಲ್ಲಾ ಹೆಂಡತಿಯ ಕೈಯಲ್ಲಿ ಹಾಕಿದ. ಹೆಂಡತಿ ಗಂಡನ ಸಪ್ಪೆ ಮುಖ ವನ್ನು ನೋಡಿ ಕೇಳಿದಳು– "ಇದೇನು ಈ ದಿನ ಇಷ್ಟೊಂದು ಯೋಚನೆ ಹಚ್ಚಿ ಕೊಂಡಿರುವ ಹಾಗೆ ಕಾಣ್ತೀರಿ.? ಏನು ಕಾರಣ.?"

ಗಂಡ ತನ್ನ ಹೆಂಡತಿಗೆ ಮೊದಲಿಂದ ಕೊನೆಯುವರೆಗೂ ಎಲ್ಲ ಸಂಗತಿಯನ್ನೂ ಹೇಳಿದ. ಅವಳಿಗೆ ತನ್ನ ಗಂಡನ ಮೇಲೆ ಎಲ್ಲಿಲ್ಲದ ಸಿಟ್ಟುಬಂತು. ರೇಗಿಕೊಂಡು ಹೇಳಿದಳು– " ನಾನು ನಿಮಗೆ ರಾಜನ ಬಡಾವಣೆಗೆ ಹೋಗಬೇಡಿ ಅಂತ ಮತ್ತೆ ಮತ್ತೆ ಹೇಳಿದ್ದೆ. ನಿಮಗೆ ಅದೆಷ್ಟು ಅಸಡ್ಡೆ ಅಂದರೆ ಯಾರು ಹೇಳಿದ್ದೂ ಕೇಳೋದೇ ಇಲ್ಲ. ನೀವು ಸುಮ್ಮ ಸುಮ್ಮನೆ ಒಂದು ಆಪತ್ತು ಕೊಂಡು ಕೊಂಡು ಬಂದಿರಿ. ಇನ್ನೆಂಥೆಂಥ ಕಷ್ಟ ಎದುರಿಸಬೇಕಾಗಿ ಬರುತ್ತೆ ಅಂತ ಗೊತ್ತಿದೆಯೇನು?" ಯುವಕನಿಗೂ ತುಂಬ ದುಃಖವಾಯಿತು. ಕಣ್ಣೀರು ಬಂತು. ಗಂಡನ ಅಳು ಮುಖ ನೋಡಿ ಅವಳು ಪ್ರೀತಿಯಿಂದ ಹೇಳಿದಳು– " ನೀವು ಯಾಕೆ ಮನಸ್ಸು ಚಿಕ್ಕದು ಮಾಡಿಕೊಳ್ತೀರಿ? ಯೋಚನೆ ಮಾಡೋಂಥೋದು ಏನಿಲ್ಲ. ನಾಳೆ ಅವನು ಬರುವುದಕ್ಕೆ ಮುಂಚೆ ನಾನೆಲ್ಲಾದರೂ ಅಡಗಿಕೊಳ್ತೇನಿ. ನನ್ನ ಬಗ್ಗೆ ಏನಾದರೂ ಕೇಳಿದರೆ ನಾನು ಮನೆಯಲಿಲ್ಲ ಅಂತ ಹೇಳಿಬಿಡಿ."

ಮರುದಿನ ರಾಜ ಬಂದೇಬಿಟ್ಟ. ಹೊಸಿಲ ಮೇಲೆ ಕಾಲಿಡು ತ್ತಿದ್ದಂತೆಯೇ ಅವನು 'ಚಾ' ಬೇಕು ಎಂದು ಕೇಳಿದ. ಕಾರಣ ಹುಡುಗಿಯನ್ನು ನೋಡಲು ಅವನು ಒಂದಲ್ಲ ಒಂದು ನೆಪ ಹುಡುಕಲೇ ಬೇಕಿತ್ತು. ಆದರೆ ಹಾಗಾಗಲಿಲ್ಲ. ರಾಜನನ್ನು ಚಾಪೆಯ ಮೇಲೆ ಕೂರಿಸಿ ಯುವಕ ತಾನೇ 'ಚಾ' ಮಾಡ ತೊಡಗಿದ. ರಾಜ ಹೇಳಿದ– "ನಿನ್ನ ಹೆಂಡತಿಯ ಕೈಯಲ್ಲಿ ಚಾ ಮಾಡಿಸು. ನಿನ್ನ ಹತ್ತಿರ ಸ್ವಲ್ಪ ಮಾತಾಡ ಬೇಕಾಗಿದೆ." ಯುವಕ ಹೇಳಿದ–

"ಪ್ರಭೂ ತುಂಬ ದಿನದಿಂದ ನನ್ನ ಹೆಂಡತಿ ಮನೆಯಲಿಲ್ಲ. ಮನೆಯ ಎಲ್ಲಾ ಕೆಲಸ ಕಾರ್ಯ ನಾನೇ ಮಾಡಬೇಕಾಗಿದೆ." ಇದನ್ನು ಕೇಳುತ್ತಲೇ ರಾಜನ ಮುಖ ಕೆಂಪನಾಯಿತು. ಹುಡುಗಿ ಎಲ್ಲೂ ಹೋಗಿಲ್ಲ. ಇಲ್ಲೇ ಎಲ್ಲಿಯೋ ಅಡಗಿ ಕೊಂಡಿದ್ದಾಳೆ ಎನ್ನುವುದು ಆ ದುಷ್ಟನಿಗೆ ಗೊತ್ತಾಯಿತು. ಅವನು ತೋರಿಕೆಯ ನಯದಿಂದ ಯುವಕನನ್ನು ಕರೆದು ಹೇಳಿದ– " ಬಾ ಇಲ್ಲಿ ನನ್ನ ಹತ್ತಿರ ಕೂತುಕೋ. ಮೊದಲು ನಾವಿಬ್ಬರೂ ಜೊತೆಯಲ್ಲಿ ಹೆಂಡ ಕುಡಿಯೋಣ."

ರಾಜನ ನಯವನ್ನು ಕಂಡು ಯುವಕ ಅವನ ಬಲೆಯಲ್ಲಿ ಸಿಕ್ಕಿಕೊಂಡ. ರಾಜನ ಜೊತೆಯಲ್ಲಿ ಹೆಂಡ ಕುಡಿದ. ರಾಜ ಗುಟ್ಟಾಗಿ ಹೆಂಡದಲ್ಲಿ ಮತ್ತು ಬರಿಸುವ ಔಷಧವನ್ನು ಸೇರಿಸಿದ್ದ. ಅದರಿಂದ ಹೆಂಡ ಕುಡಿದ ಕೂಡಲೇ ತಲೆ ತಿರುಗು ಬಂದು ಪ್ರಜ್ಞೆ ತಪ್ಪಿ ಕೆಳಗುರುಳಿದ. ಮೂರು ನಾಲ್ಕು ದಿನಕ್ಕೆ ಮುನ್ನ ಅವನ ಮತ್ತು ಇಳಿಯುವುದು ಸಾಧ್ಯವಿರಲಿಲ್ಲ.

ಯುವಕ ಪ್ರಜ್ಞೆ ತಪ್ಪುತ್ತಲೇ ರಾಜ ಅವನ ಹೆಂಡತಿಯನ್ನು ಹುಡುಕಲು ಆಜ್ಞೆ ಮಾಡಿದ. ಆ ಬಡಪಾಯಿಯ ಚಿಕ್ಕ ಮನೆಯಲ್ಲಿ ಅವಳು ಇನ್ನೆಲ್ಲಿ ತಾನೆ ಅಡಗಿ ಕೊಂಡಾಳು? ಅವಳನ್ನು ಬಲು ಬೇಗ ಹುಡುಕಿದರು. ರಾಜ ಅವಳ ರೂಪವನ್ನು ನೋಡಿದೊಡನೆಯೇ ಅವಳ ಮೇಲೆ ಮೋಹಗೊಂಡ. ಇಂಥ ಚೆಲುವ ಹೆಣ್ಣನ್ನು ತನ್ನ ಜೀವಮಾನದಲ್ಲೇ ನೋಡಿರಲಿಲ್ಲ. ರಾಜ ಆ ಕೂಡಲೇ ಅವಳ ಮುಂದೆ ಮದುವೆಯ ಪ್ರಸ್ತಾಪವನ್ನೆತ್ತಿದ. ಪ್ರಪಂಚದ ಎಲ್ಲಾ ಭೋಗಗಳನ್ನೂ ಅವಳಿಗೆ ನೀಡುವುದಾಗಿ ಭರವಸೆ ಕೊಟ್ಟ. ರಾಜನ ಜೇನಿನಂಥ ಮಾತುಗಳಾಗಲಿ, ಅವನ ಭೋಗ ವಿಲಾಸಗಳಾಗಲಿ ಅವಳನ್ನು ಚಂಚಲಗೊಳಿಸಲಾಗಲಿಲ್ಲ. ರಾಜನನ್ನು ಸ್ಪಷ್ಟವಾಗಿ ನಿರಾಕರಿಸುತ್ತಾ ಹೇಳಿದಳು– "ನಾನು ಮದುವೆಯಾದವಳು, ನನ್ನ ಗಂಡ ಇನ್ನೂ ಬದುಕಿದ್ದಾನೆ. ಅದೂ ಅಲ್ಲದೆ ನನ್ನ ಗಂಡನನ್ನು ತುಂಬ ಪ್ರೀತಿ ಸುತ್ತೇನೆ. ಬೇಕಾದರೆ ನೀವು ನನ್ನನ್ನು ಗಲ್ಲಿಗೇರಿಸಿ. ಆದರೆ ನನ್ನ ಗಂಡನ ಹೊರತು ಇನ್ನೊಬ್ಬ ವ್ಯಕ್ತಿಯನ್ನು ನಾನು ಪ್ರೀತಿಸಲು ಸಾಧ್ಯವಿಲ್ಲ."

ರಾಜನಿಗೆ ಇಂಥ ಖಂಡತುಂಡವಾದ ಮಾತುಗಳನ್ನು ಕೇಳಿ ಅಭ್ಯಾಸ ವಿರಲಿಲ್ಲ. ಸಿಟ್ಟಿನಿಂದ ಹುಚ್ಚನಾದ. ತನ್ನ ಕರಣಿಕರಿಗೆ ಹೇಳಿದ– " ಇವಳನ್ನು

ಹಿಡಿದುಕೊಳ್ಳಿ. ಕಟ್ಟಿ ಕುದುರೆಯ ಮೇಲೆ ಹಾಕಿ. ಬಲವಂತವಾಗಿ ಅರಮನೆಗೆ ಕರೆದುಕೊಂಡು ನಡೀರಿ. ಅದೆಲ್ಲಿಯು ತನಕ ಮದುವೆಗೆ ಒಪ್ಪದೆ ಹಠ ಹಿಡಿಯುತ್ತಾಳೋ ನಾನೂ ನೋಡುತ್ತೇನೆ."

ಹುಡುಗಿ ಅಸಹಾಯಕಳು. ಆ ರಾಕ್ಷಸರ ಮುಂದೆ ಅವಳೊಬ್ಬಳು ಏನುತಾನೆ ಮಾಡಿಯಾಳು? ರಾಜ ತನ್ನನ್ನು ಹಿಡಿದುಕೊಂಡು ಅರಮನೆಗೆ ಕೊಂಡೊಯ್ಯುತ್ತಾನೆ ಎಂಬುದಂತೂ ಚೆನ್ನಾಗಿ ಗೊತ್ತಿತ್ತು. ಆದರೆ ಅವಳಿಗೆ ಇದ್ದ ಚಿಂತೆ ಎಂದರೆ ಗಂಡನಿಗೆ ಪ್ರಜ್ಞೆ ಬಂದಮೇಲೆ ತನ್ನನ್ನು ಎಲ್ಲಿಂದು ಹುಡುಕಿಯಾನು ಎಂಬದು. ಇದೇ ಒಂದು ತೊಡಕಿನಲ್ಲಿ ಮುಳುಗಿದ್ದಾಗ ಅವಳಿಗೊಂದು ಉಪಾಯ ಹೊಳೆಯಿತು. ಅವಳು ರಾಜನಿಗೆ ಹೇಳಿದಳು– "ನಿಮಗೆ ನನ್ನನ್ನು ಮದುವೆಯಾಗವ ಇಷ್ಟವಿದ್ದರೆ ನನ್ನೊಂದು ಮಾತನ್ನು ನೀವು ನಡೆಸಿಕೊಡಬೇಕು." ರಾಜ ನಡುವೆಯೇ ಅವಳ ಮಾತನ್ನು ತಡೆದು ಹೇಳಿದ– "ಹೇಳು. ಬೇಗ ಹೇಳು. ನಿನ್ನ ಒಂದು ಮಾತು ಏಕೆ; ಎಲ್ಲ ಆಸೆಗಳನ್ನೂ ನಡೆಸಿಕೊಡುತ್ತೇನೆ." ಹುಡುಗಿ ಹೇಳ ತೊಡಗಿದಳು– "ನಮ್ಮ ಕಡೆಯ ಪದ್ಧತಿಯಂತೆ ಎರಡನೆಯ ಸಲ ಮದುವೆಯಾಗುವವಳು ರೊಟ್ಟಿ ಮತ್ತು ನೀರಿನಿಂದ ದೇವತೆಗಳಿಗೆ ಪೂಜೆ, ನೈವೇದ್ಯ, ಮಾಡಬೇಕಾಗುತ್ತೆ. ಇಲ್ಲದೆ ಇದ್ದರೆ ಕೆಟ್ಟದ್ದಾಗುತ್ತದೆ".

"ಓಹೋ ಆಗಲಿ; ಅದಕ್ಕೇನಂತೆ! ನಿನ್ನಿಷ್ಟ ಬಂದ ಹಾಗೆ ಮಾಡು." ಎಂದು ರಾಜ ಸಂತೋಷದಿಂದ ಒಪ್ಪಿಗೆ ಕೊಟ್ಟ.

ಹುಡುಗಿ ತನ್ನ ಗಂಡನ ಪಕ್ಕದಲ್ಲಿ ಎಷ್ಟು ಬೇಕೋ ಅಷ್ಟು ರೊಟ್ಟಿಗಳನ್ನೂ ನೀರು ತುಂಬಿದ ಲೋಟವನ್ನೂ ಇಟ್ಟಳು. ಆ ಮೇಲೆ ತನ್ನ ಮನೆಯಿಂದ ಅರಮನೆಯವರೆಗೂ ಅಲ್ಲಲ್ಲಿ ದಾರಿಯುದ್ದಕ್ಕೂ ಇದೇ ರೀತಿ ಒಂದೆರಡು ರೊಟ್ಟಿ ಮತ್ತು ನೀರಿನ ಲೋಟಗಳನ್ನಿಡುತ್ತಾ ಹೋದಳು. ಅವಳು ಹೀಗೆ ಮಾಡಿದ್ದರ ಉದ್ದೇಶ; ತನ್ನ ಗಂಡನಿಗೆ ತನ್ನನ್ನು ಹುಡುಕಲು ಏನೂ ಕಷ್ಟವಾಗದಿರಲಿ ಎಂಬುದು.

ರಾಜ ಹುಡುಗಿಯನ್ನು ಅರಮನೆಗೆ ಕರೆತಂದ. ಅರಮನೆಯನ್ನು ತಲುಪುತ್ತಿದ್ದಹಾಗೆಯೇ ಅವಳಿಗೆ ಹೇಳಿದ– "ಬಾ ಈಗ ನಾವಿಬ್ಬರೂ ಒಂದಾಗೋಣ". ಹುಡುಗಿ ಹೇಳಿದಳು– "ನಾನು ಒಬ್ಬಳೇ ಯಾವಾಗ ನಿಮ್ಮ

ಮನೆಗೆ ಬಂದೆನೋ ಆಗಲೇ ನಿಮ್ಮನ್ನು ಮದುವೆಯಾಗುತ್ತೇನೆ ಎಂದು ಅರ್ಥ. ಆದರೆ ಇತ್ತೀಚಿಗೆ ನನ್ನ ಆರೋಗ್ಯ ತುಂಬ ಕೆಟ್ಟಿದೆ. ಆದ್ದರಿಂದ ಈಗ ಸದ್ಯಕ್ಕೆ ನಿಮ್ಮನ್ನು ಮದುವೆ ಆಗುವುದಕ್ಕೆ ಸಾಧ್ಯವಿಲ್ಲ. ಒಂದು ತಿಂಗಳು ನೀವು ನನ್ನ ಕೋಣೆಗೆ ಬರಬೇಡಿ. ಹೌದು ಇನ್ನೊಂದು ವಿಷಯ. ಒಂದೊಂದು ಸಲ ನಾನು ತುಂಬ ಕಂಗೆಡುತ್ತೀನಿ. ಆಗ ಹೊರಗೆ ಒಳ್ಳೆಯ ಗಾಳಿ ಸೇವನೆ ಬಹಳ ಅವಶ್ಯಕ. ಇಲ್ಲವೆ ಇದ್ದರೆ ನನ್ನ ಆರೋಗ್ಯ ಸುಧಾರಿಸುವುದಕ್ಕೆ ಸಾಧ್ಯವಿಲ್ಲ. ಆದರಿಂದ ನೀವು ನಿಮ್ಮ ಕಾವಲಿನವರಿಗೆ ಹೊರಗೆ ಹೋಗಲು ನನ್ನನ್ನು ತಡೆಯಕೂಡದು ಎಂದು ಅಪ್ಪಣೆ ಮಾಡಿಬಿಡಿ. ಆಮೇಲೆ ನಿಮಗೆ ಇನ್ನು ಯಾತರದ ಚಿಂತೆ ? ನೀವು ನನ್ನನ್ನು ಹೇಗೂ ಅರಮನೆಗೆ ತಂದಿದ್ದೀರಿ. ಒಂದಲ್ಲ ಒಂದು ದಿನ ನಾನು ನಿಮ್ಮನ್ನು ಮದುವೆಯಾಗಲೇ ಬೇಕು. ಅದಕ್ಕೆ ಇಷ್ಟೊಂದು ಅವಸರವೇಕೆ". ಇದಕ್ಕೆ ಪ್ರತಿ ಹೇಳಲು ರಾಜನಿಗೆ ಆಗಲಿಲ್ಲ. ಹುಡುಗಿಯ ಮಾತಿಗೆ ಒಪ್ಪಲೇ ಬೇಕಾಯಿತು.

ಮೂರು ದಿನ ಕಳೆದ ಮೇಲೆ ಯುವಕನಿಗೆ ಪ್ರಜ್ಞೆ ಬಂದಿತು. ನೋಡಿದರೆ ಹೆಂಡತಿ ಮಂಗಮಾಯ. ಕೋಣೆಯಲ್ಲಿ ಯಾರೂ ಇಲ್ಲ. ಸಾಮಾನೆಲ್ಲ ಅತ್ತ ಇತ್ತ ಚೆದರಾಡಿವೆ. ರಾಜ ಹೆಂಡತಿಯನ್ನು ಹಾರಿಸಿಕೊಂಡು ಹೋಗಿದ್ದಾನೆ ಎಂದು ಗೊತ್ತಾಗಿ ಹೋಯಿತು. ನೆಲದ ಮೇಲೆ ಬೇಕಾದಷ್ಟು ರೊಟ್ಟಿ ಮತ್ತು ನೀರಿನ ಲೋಟ ಇಟ್ಟಿರುವುದು ಕಾಣಿಸಿತು. ಇವೆಲ್ಲ ತನ್ನ ಹೆಂಡತಿಯದೇ ಕೆಲಸ ಎಂದು ಗೊತ್ತಾಯಿತು. ಅವನಿಗೆ ಹಸಿವಾಗಿತ್ತು. ರೊಟ್ಟಿತಿಂದು ನೀರು ಕುಡಿದ. ಆಮೇಲೆ ಅರಮನೆ ಕಡೆ ಹೊರಟ. ದಾರಿಯಲ್ಲಿ ಹೆಚ್ಚು ಕಷ್ಟವೇನೂ ಆಗಲಿಲ್ಲ. ಕಾರಣ ಸ್ವಲ್ಪ ದೂರ ಹೋದ ಹಾಗೇ ರೊಟ್ಟಿ ಮತ್ತು ನೀರು ಸಿಕ್ಕುತ್ತಿತ್ತು. ಹೀಗೆ ಏನೊಂದೂ ಕಷ್ಟವಿಲ್ಲದೆ ಅರಮನೆ ತಲುಪಿದ.

ಅರಮನೆಯ ಗೋಡೆಗಳು ಅತಿ ಎತ್ತರವಾಗಿದ್ದುವು. ಬಾಗಿಲಿನಲ್ಲಿ ಸೈನಿಕರು ಕಾವಲು ಕಾಯುತ್ತಿದ್ದರು. ಹೇಗೆ ಒಳಗೆ ಹೋಗುವುದು ಎಂಬುದೇ ಅವನಿಗೆ ಸಮಸ್ಯೆಯಾಯಿತು. ಹಗಲೂ ರಾತ್ರಿ ಅರಮನೆಯ ಕೋಟೆಯ ಸುತ್ತ ಮುತ್ತ ಅಲೆದಾಡುತ್ತಿದ್ದ. ಆದರೆ ಏನೂ ಉಪಾಯ ಹೊಳೆಯಲಿಲ್ಲ. ಅಕಸ್ಮಾತ್ ಒಬ್ಬ ಮುದುಕಿ ಆ ಕಡೆ ಬಂದಳು. ಅವಳು ಇವನು ದಿಕ್ಕೆಟ್ಟು ಅತ್ತ ಇತ್ತ ಅಲೆ

ದಾಡುತ್ತಾ ಇರುವುದನ್ನು ನೋಡಿದಳು. ಮುದುಕಿ ಕೇಳಿದಳು- "ನೀನು ಇಲ್ಲಿ ಯಾರನ್ನು ಹುಡುಕುತ್ತಿದ್ದೀ ?" ಯುವಕನಿಗೆ ಅವಳ ಮಾತು ಆತ್ಮೀಯವಾಗಿ ಕಂಡಿತು. ತನ್ನ ಕಥೆಯನ್ನೆಲ್ಲಾ ಹೇಳಿದ. ಅವನ ಕರುಣಾಜನಕ ಕಥೆ ಕೇಳಿ ಮುದುಕಿಗೆ ಕನಿಕರ ಉಂಟಾಯಿತು. ಅವಳೊಂದು ಉಪಾಯ ಹೇಳಿದಳು- "ಮಗು ನಾನು ನಿನಗೊಂದು ರೂಪಾಯಿ ಕೊಡುತ್ತೀನಿ. ನೀನು ಪೇಟೆಯಿಂದ ಹೆಂಗಸರಿಗೆ ಬೇಕಾದ ಸೂಜಿ, ದಾರ, ಕನ್ನಡಿ, ಬಾಚಣಿಗೆ ಇಂಥವನ್ನೆಲ್ಲಾ ಕೊಂಡುಕೊಂಡು ಬಾ. ಅರಮನೆಯ ಮುಂದುಗಡೆ ಜೋರಾಗಿ ಕೂಗುತ್ತಾ ಮಾರಾಟ ಮಾಡು. ಹೀಗೆ ಮಾಡುವುದರಿಂದ ನಿನಗೆ ನಿನ್ನ ಹೆಂಡತಿಯನ್ನು ನೋಡಲು ಸಾಧ್ಯವಾಗಬಹುದು."

ಯುವಕ ಮುದುಕಿಗೆ ಹೃತ್ಪೂರ್ವಕವಾಗಿ ನಮಸ್ಕರಿಸಿದ. ಸಾಮಾನು ತರಲು ಪೇಟೆಗೆ ಹೋದ. ಒಂದು ದಿನ ರಾಜ ಬೇಟೆಯಾಡಲು ಹೊರಗೆ ಹೋಗಿದ್ದ. ಹುಡುಗಿ ಅರಮನೆಯ ಬಾಗಿಲಲ್ಲಿ ಬಂದು ನಿಂತಳು. ಅಲ್ಲಿ ಯಾರೋ ಸಾಮಾನು ಮಾರುವವನ ಧ್ವನಿ ಕೇಳಿಸಿತು. "ಅರೆ! ಇದು ನನ್ನ ಯಜಮಾನರ ಧ್ವನಿ ಇದ್ದ ಹಾಗೆ ಇದೆಯಲ್ಲಾ!" ಎಂದು ಮನಸ್ಸಿನಲ್ಲೇ ಬಹು ಸಂತೋಷ ಪಟ್ಟಳು. ಹತ್ತಿರ ಹೋಗಿ ನೋಡಿದಳು. ಆತನು ನಿಜಕ್ಕೂ ಅವಳ ಗಂಡನೇ ಆಗಿದ್ದ. ಆದರೆ ಅವನಿಗೆ ತನ್ನ ಹೆಂಡತಿಯ ಗುರುತು ಸಿಗಲಿಲ್ಲ. ಏಕೆಂದರೆ ಅವಳು ಮುಖಕ್ಕೆ ಪರದೆ ಹಾಕಿಕೊಂಡಿದ್ದಳು. ಹುಡುಗಿ ಅವನನ್ನು ಹತ್ತಿರ ಕರೆದಳು. ಬೇಕೆಂದೇ ಪ್ರತಿಯೊಂದು ಸಾಮಾನಿನ ಬೆಲೆ ಕೇಳಲು ಶುರುಮಾಡಿದಳು. ಉದ್ದೇಶ ಅವನು ತನ್ನ ಧ್ವನಿಯನ್ನು ಗುರುತಿಸಲಿ ಎನ್ನುವುದು. ಅವನು ಕೂಡಲೇ ಹೆಂಡತಿಯನ್ನು ಗುರುತುಹಿಡಿದ. ಹುಡುಗಿ ಸುತ್ತಲೂ ನೋಡಿದಳು. ಯಾರೂ ಇರಲಿಲ್ಲ. ಮೆಲು ದನಿಯಲ್ಲಿ ಗಂಡನಿಗೆ ಹೇಳಿದಳು- "ನಾನು ನಿಮಗೆ ಎರಡು ಚಿನ್ನದ ನಾಣ್ಯ ಕೊಡುತ್ತೇನೆ. ಇವನ್ನು ತೆಗೆದುಕೊಂಡು ಪೇಟೆಗೆ ಹೋಗಿ ಅಲ್ಲಿ ಯಾರು ಎರಡು ಕುದುರೆ ಮಾರುತ್ತಿರುತ್ತಾನೋ ಅವನ ಹತ್ತಿರ ಕುದುರೆಗಳನ್ನು ಕೊಂಡುಕೊಂಡು ಮೂರು ದಿನ ಕಳೆದ ಮೇಲೆ ಅರ್ಧರಾತ್ರಿಯ ಹೊತ್ತಿಗೆ ಇದೇ ಜಾಗದಲ್ಲಿ ನನಗಾಗಿ ಕಾಯುತ್ತಾ ಇರಿ. ನಾವಿಬ್ಬರೂ ಕುದುರೆಯನ್ನು ಏರಿ ಕೊಂಡು ಎಲ್ಲಾದರೂ ಓಡಿ ಹೋಗೋಣ." ಹೀಗೆಂದು ಹೇಳಿ ಗಂಡನಿಗೆ ಹಣವನ್ನು ಕೊಟ್ಟು ಅರಮನೆಗೆ ಹೊರಟು ಹೋದಳು. ಇದನ್ನು ಯಾರೂ ನೋಡಲಿಲ್ಲ.

ಬೇಟೆ ಮುಗಿಸಿಕೊಂಡು ರಾಜ ಅರಮನೆಗೆ ಬಂದ. ಕೂಡಲೇ ಹುಡುಗಿಯನ್ನು ನೋಡಲು ಹೊರಟ. ನೋಡಿದರೆ ಹುಡುಗಿಯ ಮುಖ ಸಪ್ಪಗಿದೆ. ರಾಜ ಪ್ರೇಮದಿಂದ ಕೇಳಿದ– " ಯಾಕೆ ಯಾರಾದರೂ ನಿನ್ನನ್ನು ಏನಾದರೂ ಅಂದರೇ? "ಹುಡುಗಿ ಮುಖ ಊದಿಸಿಕೊಂಡು ಹೇಳಿದಳು– "ನಿಮ್ಮ ಮೇಲೇ ನನ್ನ ದೂರು. ನೀವು ನನ್ನನ್ನು ರಾಣಿ ಮಾಡಿಕೊಳ್ಳಬೇಕೆಂದಿದ್ದೀರಿ. ಆದರೆ ಒಬ್ಬ ದಾಸಿಯ ಹಾಗೆ ನೋಡಿಕೊಳ್ಳುತ್ತಾ ಇದ್ದೀರಿ. ಇಲ್ಲಿ ಯಾವ ಪದಾರ್ಥದ ಮೇಲೂ ನನಗೆ ಅಧಿಕಾರವೇ ಇಲ್ಲ. "

" ನಿನಗೆ ಇಲ್ಲಿ ಯಾವ ಅಧಿಕಾರವೂ ಇಲ್ಲ ಎಂದು ಯಾವೋನು ಹೇಳ್ತಾನೆ? ಈ ಅರಮನೆಯ ಇಪ್ಪತ್ತೊಂದು ಬೀಗದ ಕೈಗಳನ್ನು ತಗೋ. ನೀನೇ ಈ ಮನೆಗೆ ಯಜಮಾನಿ. ನಿನಗೆ ಹೇಗೆ ಬೇಕೋ ಹಾಗೆಮಾಡು"– ಎಂದು ಹೇಳಿ ರಾಜ ಅರಮನೆಯ ಇಪ್ಪತ್ತೊಂದು ಬೀಗದ ಕೈಗಳನ್ನೂ ಅವಳ ವಶಕ್ಕೆ ಒಪ್ಪಿಸುತ್ತ ಹೇಳಿದ– "ಹೂಂ ನಿನ್ನ ಒಂದು ತಿಂಗಳ ವಾಯಿದೆಯೂ ಮುಗಿಯುತ್ತ ಬಂತು. ನೀನು ಮಾತುಕೊಟ್ಟಂತೆ ಇನ್ನು ನನ್ನನ್ನು ಮದುವೆಯಾಗಲು ಸಿದ್ಧಳಾಗು." ಹುಡುಗಿ ಬೀಗದ ಕೈಗಳನ್ನು ಕೈಗೆ ತೆಗೆದುಕೊಂಡು ಮುಗುಳ್ನಗುತ್ತ ಹೇಳಿದಳು– "ಏನಂಥ ಅವಸರ? ಇನ್ನೂ ಮೂರು ದಿನ ಬಾಕಿ ಇದೆ. ಆ ಮೇಲೆ ನಾನು ನಿಮ್ಮವಳೇ."

ರಾಜ ಮತ್ತೆ ಬೇಟೆಯಾಡಲು ಹೊರಟು ಹೋದ. ಹುಡುಗಿ ರಾಜನ ಅಶ್ವಶಾಲೆಯ ಬಾಗಿಲು ತೆಗೆದಳು. ಎರಡು ಬಲಿಷ್ಠ ಕುದುರೆಗಳನ್ನು ಬಿಚ್ಚಿ ಮಾರಲು ಪೇಟೆಗೆ ಕಳುಹಿಸಿದಳು. ಪೇಟೆಯಲ್ಲಿ ಯುವಕನೂ ಎರಡು ಕುದುರೆಗಳನ್ನು ಹುಡುಕುತ್ತಲೇ ಇದ್ದ. ಎರಡನ್ನೂ ಎರಡು ಚಿನ್ನದ ನಾಣ್ಯಕೊಟ್ಟು ಕೊಂಡು ಕೊಂಡ. ಆಗಲೇ ಅವನಿಗೆ ಆ ದಿನವೇ ಮೂರನೇ ದಿನ ಎಂದು ಇದ್ದಕ್ಕಿದ್ದಂತೆ ನೆನಪಿಗೆ ಬಂತು. ಅದರಿಂದ ಅವನು ಅದೇದಿನ ರಾತ್ರಿ ಎರಡು ಕುದುರೆಗಳನ್ನೂ ಹೊಡೆದುಕೊಂಡು ಅರಮನೆಯ ಗೋಡೆಯ ಹತ್ತಿರ ಹೋಗಿ ನಿಂತ. ಕಾಯುತ್ತಾ ಕಾಯುತ್ತಾ ಅರ್ಧರಾತ್ರಿ ಆಗಿಹೋಯಿತು. ಹೆಂಡತಿಯ ಮುಖವೇ ಇಲ್ಲ. ಅವಳು ಬರದೇ ಇದ್ದದ್ದರಿಂದ ಕಳವಳಗೊಂಡ. ಸ್ವಲ್ಪ ಹೊತ್ತಿನ ನಂತರ ಆಯಾಸದಿಂದ ಅವನಿಗೆ ತೂಕಡಿಕೆ ಬಂತು. ಅಲ್ಲೇ ಗೋಡೆಯನ್ನೊರಗಿ ನಿದ್ದೆ ಹೋದ. ಅದೇ

ಹೊತ್ತಿಗೆ ಆ ಊರಿನ ಬಕ್ಕತಲೆಯ ಕಟುಕ ಮದ್ಯದ ಅಮಲಿನಲ್ಲಿ ತೂರಾಡಿ ಕೊಂಡು ಆ ಕಡೆ ಬಂದ. ನೋಡಿದರೆ ಎದುರುಗಡೆ ಎರಡು ಕುದುರೆ ನಿಂತಿವೆ. ಅದರ ಪಕ್ಕದಲ್ಲೇ ಒಬ್ಬ ಮನುಷ್ಯನೂ ನಿದ್ದೆ ಮಾಡುತ್ತಿದ್ದಾನೆ. ಈ ಮನುಷ್ಯ ಕುದುರೆ ತೆಗೆದುಕೊಂಡು ಇಲ್ಲಿ ಏನು ಕೆಲಸಕ್ಕೆ ಬಂದಿದ್ದಾನೆ ಎಂದು ಚಕಿತನಾದ. ಹತ್ತಿರ ಹೋಗಿ ಅವನನ್ನು ಕೇಳಬೇಕೆಂದಿರುವ ಹೊತ್ತಿಗೆ ಗೋಡೆಯಿಂದ ಎರಡು ಚಿಕ್ಕ ಗಂಟುಗಳು ಕೆಳಗೆ ಬಿದ್ದುವು. ಒಬ್ಬ ಮನುಷ್ಯನೂ ಹಾರಿಬಿದ್ದ. ಏನೋ ಗಲಿ ಬಿಲಿಯಾಗಿರಬೇಕು ಎಂದು ಅವನಿಗೆ ಅನುಮಾನವಾಯಿತು. ಹತ್ತಿರ ಹೋಗಿ ನೋಡಲು ಗುರುತು ಸಿಕ್ಕಿತು. "ಓ ಹೋ ಅದೇ ನಮ್ಮ ರಾಜ ತನ್ನ ರಾಣಿ ಯನ್ನಾಗಿ ಮಾಡಿಕೊಳ್ಳಬೇಕೆಂದಿದ್ದ ಹುಡುಗಿ ಇವಳು!" ಎಂದು ಮನಸ್ಸಿನಲ್ಲೇ ಖುಷಿಯಿಂದ ಹೇಳಿಕೊಂಡ. ಅರಮನೆಯಿಂದ ಹೊರಕ್ಕೆ ಬಂದಮೇಲೆ ಹುಡುಗಿ ತುಂಬ ಅವಸರವಲ್ಲಿದ್ದಳು. ಆದ್ದರಿಂದ ಅವಳು ಅವನನ್ನು ತೀರ ಹತ್ತಿರದಿಂದ ನೋಡಲಾಗಲಿಲ್ಲ. ಅವಳು ಆ ಬಕ್ಕ ತಲೆಯ ಕಟುಕನನ್ನೇ ತನ್ನ ಗಂಡನೆಂದು ಭಾವಿಸಿದಳು. ಅವನಿಗೆ ಒಂದು ಕುದುರೆಯ ಮೇಲೆ ಆ ಗಂಟುಗಳನ್ನು ಹೇರಲು ಹೇಳಿದಳು. ಇನ್ನೊಂದು ಕುದುರೆಯ ಮೇಲೆ ಕುಳಿತು ಕುದುರೆಯನ್ನು ಓಡಿಸಿದಳು. ಅವನೂ ಅವಳನ್ನು ಹೇಗೆ ಹಿಂಬಾಲಿಸಿಕೊಂಡು ಹೋಗಬೇಕು ಎಂಬ ಹಂಚಿಕೆ ಯಲ್ಲೇ ಇದ್ದ. ಆದರಿಂದ ಇನ್ನೊಂದು ಕುದರೆಯನ್ನೇರಿ ಅವಳನ್ನು ಹಿಂಬಾಲಿ ಸಿದ. ಇಬ್ಬರೂ ಪಟ್ಟಣದ ಗಡಿಯನ್ನು ದಾಟಿ ನಡೆದರು. ಅದೇ ವೇಗದಲ್ಲೇ ಇನ್ನಷ್ಟು ದೂರ ಸಾಗಿದರು.

ಹುಡುಗಿ ಹಿಂತಿರುಗಿ ನೋಡಿದಳು. ಪಟ್ಟಣ ಬಹಳ ಹಿಂದೆ ಉಳಿಯಿತು ಎಂದು ಗೊತ್ತಾಯಿತು. ಇನ್ನೇನು ಅವಳಿಗೆ ಯಾವ ಹೆದರಿಕೆಯೂ ಇರಲಿಲ್ಲ. 'ಸದ್ಯಗೆದ್ದೆ' ಎಂದು ನೆಮ್ಮದಿಯ ನಿಟ್ಟುಸಿರೆಳೆದಳು. ಬೆಳುದಿಂಗಳ ರಾತ್ರಿಯಲ್ಲಿ ಕೆದರಿದ ಕೂದಲನ್ನು ಸರಿಪಡಿಸಿಕೊಂಡಳು. ಕುದುರೆಯನ್ನು ನಿಧಾನ ಮಾಡಿದಳು. ತನ್ನ ಗಂಡನೆಂದೇ ಭಾವಿಸಿ ಬೋಳುತಲೆಯ ಕಟುಕನನ್ನು ಕೇಳಿದಳು. – "ನೀನು ನನ್ನನ್ನು ಹೇಗೆ ಹುಡುಕಿದೆ." ಅವನಿಗೆ ಮಾತನಾಡುವ ಧೈರ್ಯವಾಗಲಿಲ್ಲ. ಹುಡುಗಿಗೆ ಖಂಡಿತ ಏನೋ ಮೋಸವಾಗಿದೆ ಅನ್ನಿಸಿತು. ಆ ಕುಡುಕ ಬೋಡನನ್ನು ನೋಡಿ ದಿಗ್ಭ್ರಮೆಯಾಯಿತು. ತನ್ನ ಗಂಡನನ್ನು ಸರಿ ಯಾಗಿ ಗುರುತಿಸದೆ ಬೆಪ್ಪಳಂತೆ ಹೊರಟು ಬಂದದ್ದಕ್ಕೆ ತನ್ನ ಮೇಲೆಯೇ ವಿಪರೀತ

ಸಿಟ್ಟು ಬಂದಿತು. ಹೇಗೋ ಏನೋ ಆ ದುಷ್ಟ ರಾಜನ ಬಲೆಯಿಂದೇನೋ ತಪ್ಪಿಸಿ ಕೊಂಡಳು. ಇಲ್ಲಿ ನೋಡಿದರೆ ಇನ್ನೊಬ್ಬ ಬದ್ಮಾಶನ ಕೈಯಲ್ಲಿ ಸಿಕ್ಕಿಹಾಕಿ ಕೊಂಡಳು.

ಆದರೆ ಅವಳು ಧೈರ್ಯ ತಂದುಕೊಂಡಳು. ಸ್ವಲ್ಪವೂ ನಿರಾಶಳಾಗಲಿಲ್ಲ. ಕುದುರೆ ಯನ್ನು ಮುಂದುವರೆಸಿದಳು. ಹಾಗೆ ಹೋಗುತ್ತಲೇ ಏನಾದರೂ ಉಪಾಯ ವನ್ನು ಚಿಂತಿಸುತ್ತಲೇ ಇದ್ದಳು. ಹುಡುಗಿ ಅವನ ಹತ್ತಿರ ಹೇಳತೊಡಗಿದಳು– "ಅರಮನೆಯಿಂದ ಹೊರಕ್ಕೆಬಂದಕೂಡಲೇ ಮೊದಲು ಯಾರು ಸಿಕ್ಕುತ್ತಾರೋ ಅವರನ್ನೇ ನನ್ನವರನ್ನಾಗಿ ಮಾಡಿಕೊಳ್ಳಬೇಕೆಂದು ಮೊದಲೇ ನಿರ್ಧರಿಸಿಬಿಟ್ಟಿದ್ದೆ. ಆದರೆ ಒಂದು ಮಾತು. ಮೊದಲು ಸ್ವಲ್ಪ ನಿನ್ನ ಕೋಳಕು ತಲೆ, ಮೈಯನ್ನು ನೋಡಿಕೋ. ನೀನೆಷ್ಟು ಅವಲಕ್ಷಣವಾಗಿ ಕಾಣಿಸುತ್ತೀಯ. ಇದೇ ವೇಷ ದಲ್ಲೇ ನನ್ನನ್ನು ಮದುವೆ ಆಗ್ತೀಯಾ? ಇಲ್ಲಿ ನೋಡು. ನಾನು ಹೇಳಿದ ಹಾಗೆ ಮಾಡು. ಈ ಐದು ರೂಪಾಯಿ ತಗೋಡು ಪೇಟೆಗೆ ಹೋಗಿ ಒಂದು ಶೀಷೆ ಎಣ್ಣೆ ತಗೊಂಡು ಬಾ. ಅದರಿಂದ ನಿನ್ನ ಬೋಳು ತಲೆಯನ್ನು ಸರಿಪಡಿಸುತ್ತೀನಿ. ಅದು ಸರಿಹೋದ ಮೇಲೆ ನಿನ್ನನ್ನು ಮದುವೆ ಆಗ್ತೀನಿ. ಏನು, ಏನು ಹೇಳ್ತಿ?" ಬೋಡ ಯಾವಾಗ ತನ್ನ ಬೋಳು ತಲೆ ಸರಿಹೋಗುವುದಷ್ಟೇ ಅಲ್ಲ; ಒಬ್ಬ ಚೆಲುವೆ ಹೆಂಡತಿಯೂ ತನಗೆ ಸಿಕ್ಕುತ್ತಾಳೆಂದು ತಿಳಿದನೋ ಮನಸ್ಸಿನಲ್ಲೇ ತನ್ನ ಅದೃಷ್ಟವನ್ನು ಕೊಂಡಾಡಿದ. ಬೇಗನೆ ಪಕ್ಕದ ಒಂದು ಹಳ್ಳಿಗೆ ಓಡಿದ. ಒಂದು ಶೀಷೆಯ ತುಂಬ ಎಣ್ಣೆಯನ್ನು ತಂದ. ಒಂದಷ್ಟು ಸೌದೆಯನ್ನೂತಂದ. ಆಮೇಲೆ ಸೌದೆ ಹತ್ತಿಸಿ ಎಣ್ಣೆ ಕಾಯಿಸಿದ. ಎಣ್ಣೆ ಚೆನ್ನಾಗಿ ಕುದಿಯಲಾರಂಭಿಸಿದಾಗ ಹುಡುಗಿ ಗಟ್ಟಿ ಮನಸ್ಸು ಮಾಡಿ ಎಣ್ಣೆಯನ್ನು ಆ ಬೋಡನ ತಲೆಯ ಮೇಲೆ ಸುರಿದಳು. ಎಣ್ಣೆಯ ತಾಪದಿಂದ ಆ ಕ್ಷಣವೇ ಅಯ್ಯೋ ಎಂದು ಚೀರುತ್ತಾ ಸತ್ತು ಹೋದ. ಹುಡುಗಿ ಮನಸ್ಸಿನಲ್ಲೇ ಅಂದು ಕೊಂಡಳು.- "ಈ ದುಷ್ಟ ದಿನವೂ ಬಹಳ ಜನರನ್ನು ಕಾಡುತ್ತಿದ್ದ. ಇಂಥ ಅನ್ಯಾಯಿಗೆ ಇದೇ ರೀತಿ ಸಾವು ಬರಬೇಕು."

ಈಗ ಅವಳೊಬ್ಬಳೇ ಕುದುರೆಯೇರಿ ಮುಂದೆ ಸಾಗಿದಳು. ಸ್ವಲ್ಪ ದೂರ ಹೋದ ಮೇಲೆ ಅವಳಿಗೆ ನಾಲ್ಕು ಜನ ಬೇಟೆಗಾರರು ಸಿಕ್ಕಿದರು. ಈ ಚೆಲುವೆ ಯನ್ನು ನೋಡಿದ ಕೂಡಲೇ ನಾಲ್ವರೂ ಅವಳ ಮೇಲೆ ಮೋಹಿತರಾದರು. ತಮ್ಮ

ತಮ್ಮಲ್ಲೇ ಜಗಳವಾಡತೊಡಗಿದರು. ಒಬ್ಬ ಹೇಳಿದ– “ನಾನು ಇವಳನ್ನು ಮದುವೆಯಾಗ್ತೀನಿ.” ಇನ್ನೊಬ್ಬ ಹೇಳಿದ– “ಲೇ ಹೋಗಲೇ ನಾನು ಇವಳನ್ನು ಮದುವೆಯಾಗ್ತೀನಿ.” ಹುಡುಗಿ ಅವರಿಗೆ ಹೇಳಿದಳು– “ನೀವು ಯಾಕೆ ಒಬ್ಬರಿಗೊಬ್ಬರು ಕಿತ್ತಾಡ್ತೀರಿ ? ಇದರಿಂದ ಏನೂ ಪ್ರಯೋಜನ ಇಲ್ಲ. ಯಾಕಂದ್ರೆ ನಾನು ನಾಲ್ಕು ಜನರನ್ನಂತೂ ಮದುವೆಯಾಗುವುದಕ್ಕೆ ಸಾಧ್ಯವಿಲ್ಲ. ಈಗ ನಾನು ಏನು ಹೇಳ್ತೀನೋ ಅದುಮಾಡಿ. ನೀವು ನಿಮ್ಮ ಬಿಲ್ಲು ಬಾಣವನ್ನು ನನ್ನ ಕೈಗೆ ಕೊಡಿ. ನಾನು ನಾಲ್ಕು ದಿಕ್ಕಿಗೂ ಒಂದೊಂದು ಬಾಣಬಿಡ್ತೀನಿ. ಆ ಬಾಣ ತೆಗೆದುಕೊಂಡು ಎಲ್ಲರಿಗಿಂತ ಮುಂಚೆ ಯಾರು ಬರ್ತಾನೋ ಅವನನ್ನೇ ನಾನು ಮದುವೆಯಾಗೋದು”.

ಬೇಟೆಗಾರರಿಗೆ ಈ ಸಲಹೆ ತುಂಬ ಹಿಡಿಸಿತು. ಅವರಿಗೆ ತಮ್ಮ ಕಾಲುಗಳ ಮೇಲೆ ಪೂರ್ತಿ ನಂಬಿಕೆ ಇತ್ತು. ನಾಲ್ಕು ಜನರೂ ಒಟ್ಟಿಗೇ ಹೇಳಿದರು– “ನಿಮ್ಮ ಮಾತು ನಮಗೆ ಒಪ್ಪಿಗೆ ಇದೆ. ಬೇಗ ಬಾಣ ಬಿಡಿ”. ಅವಳು ಬಿಲ್ಲು ಬಾಣಗಳನ್ನೆತ್ತಿಕೊಂಡು ನಾಲ್ಕು ದಿಕ್ಕಿಗೂ ಒಂದೊಂದು ಬಾಣ ಬಿಟ್ಟಳು. ಹುಡುಗಿಯ ತೋಳುಗಳಲ್ಲಿ ಶಕ್ತಿ ಇತ್ತು. ಅದರಿಂದ ಅವಳು ಬಿಟ್ಟ ಬಾಣಗಳೆಲ್ಲಾ ಬಹುದೂರ ಹೋಗಿ ಬಿದ್ದವು. ಬೇಟೆಗಾರರು ಹೊರಡುತ್ತಿದ್ದ ಹಾಗೆಯೇ ಹುಡುಗಿಯೂ ವಾಯುವೇಗದಿಂದ ಮುಂದುವರಿದಳು.

ಬೇಟೆಗಾರರಿಂದ ಬಿಡಿಸಿಕೊಂಡು ಹುಡುಗಿ ಕುದುರೆಯೇರಿ ಓಡುತ್ತಿದ್ದಳು. ಆದರೆ ಅವಳ ಅದೃಷ್ಟ ಚೆನ್ನಾಗಿರಲಿಲ್ಲ. ದಾರಿಯಲ್ಲಿ ಮತ್ತೆ ನಾಲ್ಕು ಜನ ಸಿಕ್ಕಿದರು. ಇವರು ಜೂಜು ಕೋರರು. ಅವಳನ್ನು ನೋಡಿದ ಕೂಡಲೇ ನಾಲ್ಕು ಜನರೂ ಅವಳ ಮೇಲೆ ಮೋಹಗೊಂಡರು. ಅವರು ಜೂಜಾಡುವುದನ್ನು ಮರೆತು ತಮ್ಮ ತಮ್ಮಲ್ಲೇ ಜಗಳವಾಡತೊಡಗಿದರು. ಹುಡುಗಿ ಹೇಳಿದಳು– “ನನಗಾಗಿ ನೀವು ನೀವು ಜಗಳ ಗುದ್ದಾಟ ಮಾಡಬೇಡಿ. ನನ್ನ ಮಾತುಕೇಳಿ. ನಾನು ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಬಟ್ಟಲು ಮದ್ಯ ಕೊಡುತ್ತೇನೆ. ಆ ಬಟ್ಟಲು ಮದ್ಯವನ್ನು ಒಂದೇ ಗುಟುಕಿಗೆ ಕುಡಿಯುವಷ್ಟರಲ್ಲಿ ಯಾರಿಗೆ ಮತ್ತೇರುವುದಿಲ್ಲ ಅವನನ್ನೇ ನಾನು ಮದುವೆಯಾಗುತ್ತೇನೆ”. ಜೂಜು ಕೋರರು ಅವಳ

ಮಾತನ್ನು ಸಂತೋಷದಿಂದ ಒಪ್ಪಿದರು. ಅವರೆಲ್ಲರೂ ಒಂದೇ ಸಲಕ್ಕೆ ಮದ್ಯ ಕುಡಿದು ಮತ್ತೇರಿ ಬಿದ್ದರು.

ಹುಡುಗಿ ಲಗಾಮನ್ನು ಸಡಿಲ ಬಿಟ್ಟು ಕುದುರೆಯನ್ನೋಡಿಸಿದಳು. ಹೀಗೆ ಯುವತಿಯರು ಒಬ್ಬೊಬ್ಬರೇ ತಿರುಗಾಡಿದರೆ ಅಪಾಯ ತಪ್ಪಿದ್ದಲ್ಲ ಎಂಬುದು ಈಗ ಅವಳಿಗೆ ಖಚಿತವಾಯಿತು. ಅವಳು ಅರಮನೆಯಿಂದ ಹೊರ ಬರುವಾಗ ಗಂಡಸಿನ ವೇಷವನ್ನು ಜೊತೆಯಲ್ಲಿ ತಂದಿದ್ದಳು. ಅದನ್ನು ಧರಿಸಿ ತನ್ನ ಮುಂದಿನ ಪ್ರಯಾಣವನ್ನು ಪ್ರಾರಂಭಿಸಿದಳು. ಸ್ವಲ್ಪ ದೂರ ಹೋದ ಮೇಲೆ ಅವಳೊಂದು ಪಟ್ಟಣವನ್ನು ತಲುಪಿದಳು. ಪಟ್ಟಣದಲ್ಲಿ ಚಿತ್ರ ವಿಚಿತ್ರ ವಾದ ಮಾತುಕತೆಗಳಾಗುತ್ತಿದ್ದವು. ಪಟ್ಟಣಿಗರು ಬಣ್ಣ ಬಣ್ಣದ ಬಟ್ಟೆಗಳನ್ನು ತೊಟ್ಟಿದ್ದರು. ಅವರ ಕೈಗಳಲ್ಲಿ ದೊಡ್ಡದೊಡ್ಡ ಮಾಂಸದ ಚೂರುಗಳು, ಕೋಳಿಗಳು, ಪಾರಿವಾಳಗಳು ಇದ್ದುವು. ಅವರೆಲ್ಲರೂ ಆಕಾಶದ ಕಡೆ ನೋಡುತ್ತಿದ್ದರು. ಗುಂಪಿನಲ್ಲಿ ವಿಪರೀತ ನೂಕುನುಗ್ಗಲು ಇತ್ತು. ಹುಡುಗಿಗೆ ಇದೆಲ್ಲ ನೋಡಿ ಆಶ್ಚರ್ಯವಾಯಿತು. ಹತ್ತಿರದಲ್ಲಿದ್ದ ಒಬ್ಬ ವ್ಯಕ್ತಿಯನ್ನು ಕೇಳಿದಳು– "ಇಲ್ಲೇನು ನಡೆಯುತ್ತಿದೆ. ನೀವೇನು ಮಾಡುತ್ತಿದ್ದೀರಿ?" ಅವನು ಹೇಳಿದ– "ನಮ್ಮ ದೊರೆಗಳು ತೀರಿಹೋದರು. ಅದರಿಂದ ಇಲ್ಲಿನ ಪದ್ಧತಿಯ ಪ್ರಕಾರ 'ಅದೃಷ್ಟದ ಹಕ್ಕಿ'ಯನ್ನು ಹಾರಿಬಿಡುತ್ತೇವೆ. ಯಾವ ವ್ಯಕ್ತಿಯ ಹೆಗಲ ಮೇಲೆ ಪಕ್ಷಿ ಕುಳಿತುಕೊಳ್ಳುತ್ತದೆಯೋ ಅವನನ್ನೇ ಹೊಸ ರಾಜನೆಂದು ಘೋಷಿಸಲಾಗುವುದು".

ಅವನ ಮಾತಿನ್ನೂ ಮುಗಿದಿರಲಿಲ್ಲ. ಪಕ್ಷಿ ಹಾರುತ್ತಿರುವುದು ಕಾಣಿಸಿತು. ಜನಗಳಲ್ಲಿ ಕೋಲಾಹಲ ಶುರುವಾಯಿತು. ಪ್ರತಿಯೊಬ್ಬರೂ ಪಕ್ಷಿ ತನ್ನ ಹತ್ತಿರ ಬಂದರೆ ತನ್ನ ಅದೃಷ್ಟ ಖುಲಾಯಿಸ ಬಹುದು ಎಂದು ಗಟ್ಟಿಯಾಗಿ ಆಡ ತೊಡಗಿದರು. ಆ ಹಕ್ಕಿ ಗುಂಪಿನಲ್ಲಿದ್ದ ವ್ಯಕ್ತಿಗಳ ತಲೆಯ ಮೇಲೊಂದು ಸುತ್ತು ಹಾಕಿತು. ಅದೃಷ್ಟವಶಾತ್ ಹಕ್ಕಿ ಗಂಡು ವೇಷದಲ್ಲಿದ್ದ ಆ ಹುಡುಗಿಯ ಹೆಗಲ ಮೇಲೆ ಹೋಗಿ ಕುಳಿತುಕೊಂಡಿತು. ಸರಿ ಇನ್ನೇನು? ಜನ ತಮ್ಮತಮ್ಮ ವಸ್ತುಗಳನ್ನೆಲ್ಲಾ ಅಲ್ಲೇ ಬಿಟ್ಟು ಅವಳ ಸುತ್ತ ಮುತ್ತಿದರು. ಅರಮನೆಗೆ ಬರಬೇಕೆಂದು ಆಗ್ರಹಪಡಿಸಿದರು. ಹುಡುಗಿ ಈ ಅನಿರೀಕ್ಷಿತ ಘಟನೆಗೆ ಸಿದ್ಧಳಿರಲಿಲ್ಲ.

ಅವಳಿಗೆ ಇದು ಅಸಂಭವ ಎನಿಸಿತ್ತು. ಮೊದ ಮೊದಲು ಈ ತೊಡಕಿನಿಂದ ದೂರ ಇರಲು ಬಯಸಿದಳು. ಆದರೆ ಜನ ಬಿಡಬೇಕಲ್ಲ! ಇದು ತಮ್ಮ ಪ್ರಾಚೀನ ಧಾರ್ಮಿಕ ಪದ್ಧತಿ; ಯಾರೇ ಇದನ್ನು ಮುರಿಯಲು ಪ್ರಯತ್ನಿಸಿದರೂ ಅಂಥವನು ಕಠಿಣ ಶಿಕ್ಷೆಯನ್ನನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಡೆಗೆ ಅವಳು ರಾಜ ಪದವಿಯನ್ನು ಸ್ವೀಕರಿಸಲೇ ಬೇಕಾಯಿತು. ಅದೊಂದು ದೊಡ್ಡ ರಾಜ್ಯ. ಅದರ ಅಧೀನದಲ್ಲಿ ಅನೇಕ ಚಿಕ್ಕ ಚಿಕ್ಕ ರಾಜ್ಯಗಳಿದ್ದವು. ಇವಳನ್ನು ಮೊದಲು ಯಾವ ರಾಜನು ಗಂಡನಿಂದ ಅಗಲಿಸಿ ತನ್ನ ಅರಮನೆಗೆ ಕರೆತಂದು ಬಲವಂತದಿಂದ ಮದುವೆಯಾಗಲು ಬಯಸಿದ್ದನೋ ಅವನೂ ಈ ರಾಜ್ಯದ ಒಬ್ಬ ಆಶ್ರಿತ ರಾಜ. ಹುಡುಗಿ ಒಂದೆಡೆ ಜನರ ಅಭಿನಂದನೆಗಳನ್ನು ಸ್ವೀಕರಿಸುತ್ತಿದ್ದಳು. ಇನ್ನೊಂದೆಡೆ ದೇಶದ ಆಡಳಿತ ನಡೆಸುವುದನ್ನು ಕಲಿಯುತ್ತಿದ್ದಳು. ಅವಳು ತುಂಬ ಪ್ರಾಮಾಣಿಕಳೂ ನ್ಯಾಯಪ್ರಿಯಳೂ ಆಗಿದ್ದಳು. ಆದ್ದರಿಂದ ಬಹುಬೇಗ ಜನಪ್ರಿಯಳಾದಳು. ಜನ ತಮ್ಮ ತಮ್ಮಲ್ಲೇ– " ನಾವು ತುಂಬ ಅದೃಷ್ಟಶಾಲಿಗಳು. ನಮಗೆ ಇಂಥ ಚತುರ ಪ್ರಾಮಾಣಿಕ ರಾಜ ಸಿಕ್ಕಿದ್ದಾನೆ " ಎಂದು ಮಾತಾಡಿ ಕೊಳ್ಳುತ್ತಿದ್ದರು. ಹುಡುಗಿ ಜನರ ಜೀವನವನ್ನು ಸುಖಮಯವನ್ನಾಗಿ ಮಾಡುವುದರಲ್ಲೇ ಯಾವಾಗಲೂ ಮಗ್ನಳಾಗಿರುತ್ತಿದ್ದಳು. ಆದರಿಂದ ಜನರೂ ತಮ್ಮ ದೊರೆ ಸುಖವಾಗಿರಲೆಂದು ಹಾರೈಸುತ್ತಿದ್ದರು.

ಕೆಲವು ಜನ ಹೋಗಿ ರಾಜನಲ್ಲಿ ವಿನಂತಿಸಿದರು– " ದೊರೆಗಳೇ ನಿಮಗೆ ರಾಣಿ ಇಲ್ಲ. ತಾವೊಂದು ಒಳ್ಳೆಯ ಹುಡುಗಿಯನ್ನು ಹುಡುಕಿ ಮದುವೆ ಆಗಬೇಕು ಎಂದು ನಮ್ಮ ಆಸೆ ". ಅವಳು ಹೇಳಿದಳು– " ಈಗಾಗಲೇ ಏನು ಅವಸರ ? ನಾನಿನ್ನೂ ಈ ವಿಷಯ ಯೋಚನೆ ಕೂಡ ಮಾಡಿಲ್ಲ. ನನಗೆ ಯಾವಾಗ ಮನಸ್ಸಿಗೆ ಬರುತ್ತೋ ಆಗ ನಿಮಗೆ ತಿಳಿಸುತ್ತೇನೆ ", ಜನಗಳು ಹೆಚ್ಚು ಬಲವಂತ ಮಾಡಲಿಲ್ಲ. ಆದರಿಂದಾಗಿ ರಾಜನ ಮದುವೆಯ ಮಾತು ಕೆಲವು ದಿನದ ಮಟ್ಟಿಗೆ ಮರೆಯಾಯಿತು.

ಒಂದು ದಿನ ರಾಜ ಆಸ್ಥಾನದಲ್ಲಿದ್ದ ಸಮಯದಲ್ಲಿ ಮಂತ್ರಿ ಬಂದು ರಾಜನಿಗೆ ಹೇಳಿದ– " ಮಹಾಪ್ರಭೂ ಈಗ ತಾನೆ ನಾಲ್ಕು ಜನ ಬೇಟೆಗಾರರು ಬಂದಿದ್ದಾರೆ. ಅವರು ಇಲ್ಲೊಬ್ಬ ಹೆಂಗಸಿನ ಮೇಲೆ ಒಂದು

ಮೊಕದ್ದಮೆ ಹೂಡಬೇಕೆಂದಿದ್ದಾರೆ. ಒಬ್ಬ ಹೆಂಗಸು ಅವರಲ್ಲೊಬ್ಬನನ್ನು ಮದುವೆಯಾಗುವೆನೆಂದು ಮಾತುಕೊಟ್ಟು ಓಡಿಹೋದಳು ಎಂದು ಅವರು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ ಎಲ್ಲೋ ಅಡಗಿಕೊಂಡಿದ್ದಾಳೆ ಎಂದು ಅವರ ಅಭಿಪ್ರಾಯ. ಈ ವ್ಯವಹಾರವನ್ನು ಹೇಗೆ ತೀರ್ಮಾನ ಮಾಡಬೇಕು ಅನ್ನುವುದನ್ನು ಅಪ್ಪಣೆಕೊಡಿಸಬೇಕು". ರಾಜ ಆಜ್ಞೆಮಾಡಿದ– "ಆ ಹುಡುಗಿ ಸಿಕ್ಕುವ ತನಕ ಅವರನ್ನು ಸೆರೆಯಲ್ಲಿಟ್ಟಿರು". ಮಂತ್ರಿ ಅವರನ್ನು ಜೈಲಿಗೆ ಕಳುಹಿಸಿದ. ಕೆಲವು ದಿನಗಳ ನಂತರ ಇನ್ನೊಂದು ಮೊಕದ್ದಮೆಯನ್ನು ರಾಜನ ಹತ್ತಿರಕ್ಕೆ ತಂದು ಹೇಳಿದ– "ಪ್ರಭೂ ಈ ದಿನವೂ ನಾಲ್ಕು ಜನ ಬಂದಿದ್ದಾರೆ. ಒಬ್ಬ ಯುವತಿ ಅವರಲ್ಲೊಬ್ಬನನ್ನು ಮದುವೆಯಾಗುವೆನೆಂದು ಮಾತುಕೊಟ್ಟು ಆಮೇಲೆ ಅವರಿಗೆ ಮದ್ಯದ ಅಮಲೇರುವಂತೆ ಮಾಡಿ ಓಡಿಹೋದಳು ಎಂದು ಅವರು ಹೇಳುತ್ತಾರೆ." ರಾಜ ಮತ್ತೆ ಅದೇ ರೀತಿ ಹೇಳಿದ– "ಈ ನಾಲ್ಕು ಜನರಿಗೂ ಬೇಡಿ ಹಾಕಿಸು. ಆ ಹುಡುಗಿ ಸಿಕ್ಕಿದಾಗಲೇ ಇವರದ್ದೂ ತೀರ್ಮಾನವಾಗಬೇಕು".

ಇನ್ನುಸ್ವಲ್ಪ ದಿನ ಆದ ಮೇಲೆ ಯಾವ ರಾಜನ ಅರಮನೆಯಿಂದ ಇವಳು ತಪ್ಪಿಸಿಕೊಂಡು ಬಂದಿದ್ದಳೋ ಅದೇ ರಾಜ ತನ್ನ ಒಂದು ದೂರನ್ನು ತೆಗೆದುಕೊಂಡು ಬಂದ. ಕಾರಣ ಅವನ ಪ್ರಾಂತವೂ ಈ ರಾಜನ ಆಳ್ವಿಕೆಗೆ ಒಳಪಟ್ಟಿತ್ತು. ತನ್ನ ಅತಿಥಿರಾಜನನ್ನು ಅದ್ದೂರಿಯ ಸ್ವಾಗತ ಸಂಭ್ರಮಗಳಿಂದ ರಾಜಾಸ್ಥಾನಕ್ಕೆ ಕರೆಸಿದಳು. ಆದರೆ ಆ ವ್ಯಭಿಚಾರಿ ರಾಜನನ್ನು ಬೇಗ ಗುರುತಿಸಿದಳು. ಆ ರಾಜ ಹೇಳಿದ– "ಮಹಾಪ್ರಭೂ ನನ್ನದೊಂದು ಸಣ್ಣದೂರನ್ನು ತಮ್ಮ ಹತ್ತಿರ ತಂದಿದ್ದೇನೆ". "ನೀನು ಏನು ಹೇಳಬೇಕಿದ್ದರೂ ನನ್ನ ಮಂತ್ರಿಯ ಹತ್ತಿರ ಹೋಗಿ ಹೇಳು. ನನ್ನನ್ನು ಪೀಡಿಸಬೇಡ" ಎಂದು ಹೇಳಿ ಮುಖತಿರುಗಿಸಿಕೊಂಡು ಅಲ್ಲಿಂದ ಹೊರಟು ಹೋದಳು. ಸ್ವಲ್ಪ ಸಮಯದ ನಂತರ ಮಂತ್ರಿ ರಾಜನ ಹತ್ತಿರ ಬಂದು ಹೇಳಿದ– "ಈ ರಾಜನೂ ಒಬ್ಬ ಹೆಂಗಸನ್ನು ಹುಡುಕಲು ಇಲ್ಲಿಗೆ ಬಂದಿದ್ದಾನೆ. ಅವನು ಹೇಳುವುದು; ಒಬ್ಬ ಯುವತಿಯನ್ನು ಅವನು ರಾಣಿಯನ್ನಾಗಿ ಮಾಡಿಕೊಂಡಿದ್ದನಂತೆ. ಆದರೆ ಆಮೇಲೆ ಆ ಹೆಣ್ಣು ಇವನಿಗೆ ಮೋಸ ಮಾಡಿ ಎಲ್ಲೋ

ವಾಾಯವಾದಳಂತೆ. ಅವಳು ನಮ್ಮ ರಾಜ್ಯದಲ್ಲಿ ಅಡಗಿಕೊಂಡಿದ್ದಾಳು ಎಂದು ." ರಾಜನ ವೇಷವಲ್ಲಿರುವ ಹುಡುಗಿ ಆವೇಶಗೊಂಡು ಹೇಳಿದಳು– "ಓಹೋ ಈ ರಾಜನೂ ಒಂದು ಹೆಣ್ಣಿನ ವಿರಹದಿಂದ ನರಳುತ್ತಾ ಇದ್ದಾನೋ ? ಹಾಕು ಇವನನ್ನು ಜೈಲಿಗೆ. ಹೆಂಗಸಿನ ಪತ್ತೆಯಾದ ಮೇಲೆ ಅವನ ಮೊಕದ್ದಮೆ ಕೈಗೆ ತೆಗೆದುಕೊಳ್ಳೋಣ ".

ಮಂತ್ರಿಗೆ ಬಹಳ ಆಶ್ಚರ್ಯವಾಯಿತು. ಹಿಂದೆಂದೂ ಹೀಗೆ ಒಂದು ಸಣ್ಣ ವಿಚಾರಕ್ಕೆ ಸೆರೆಯ ಒಬ್ಬ ಸಾಮಂತ ರಾಜನನ್ನು ಸೆರೆಯಲ್ಲಿ ಹಾಕಿದ್ದು ನಡೆದಿರ ಲಿಲ್ಲವಲ್ಲ ಎಂದು ಯೋಚನೆಯಲ್ಲಿ ಮುಳುಗಿದ. ಆದರೆ ಹುಡುಗಿಯದು ದೃಢ ವಾದ ನಿರ್ಧಾರ. ಅವಳು ಅದೇ ಆವೇಶದಲ್ಲೇ ಹೇಳಿದಳು– "ನನ್ನ ಆಜ್ಞೆಯ ಪ್ರಕಾರ ಕೆಲಸ ಮಾಡು. ಅವನನ್ನು ಬಂಧಿಸಿ ಜೈಲಿನಲ್ಲಿಡು ".

ಕೆಲವು ದಿನ ಕಳೆಯಿತು. ಒಂದು ದಿನ ಇದ್ದಕ್ಕಿದ್ದಂತೆ ಮಂತ್ರಿ ಸುದ್ದಿ ತಂದ– "ಪ್ರಭು ಇಂದು ಇನ್ನೊಬ್ಬ ಮನುಷ್ಯ ತನ್ನ ಹೆಂಡತಿಯನ್ನು ಹುಡುಕಿ ಕೊಂಡು ಬಂದಿದ್ದಾನೆ. ಅವನು ಒಬ್ಬ ಬಡ ಯುವಕ. ತಾವು ಅಪ್ಪಣೆ ಮಾಡಿ ದರೆ ಅವನನ್ನೂ ಸೆರೆಯಲ್ಲಿ ಹಾಕುತ್ತೇವೆ."

"ಕೂಡದು. ಅವನನ್ನು ನನ್ನ ಮುಂದೆ ಕರೆನುಕೊಂಡು ಬಾ." ಹುಡುಗಿಗೆ ಈ ಯುವಕನ ಬಗ್ಗೆ ಸ್ವಲ್ಪ ಅನುಮಾನ ಇತ್ತು. ಆದರೆ ಮಂತ್ರಿಗಂತೂ ತಮ್ಮ ರಾಜನ ಮನಸ್ಸಿನ ಆಳ ಏನು ಎಂದು ತಿಳಿಯಲಿಲ್ಲ. ಆದದ್ದಾಗಲಿ, ಅವನಿಗೇನಾಗಬೇಕು ? ತನ್ನ ಪ್ರಭುವಿನ ಆಜ್ಞೆಯನ್ನು ಪಾಲಿಸುವುದಷ್ಟೇ ಅವನ ಕೆಲಸ. ಅವನು ಯುವಕನನ್ನು ರಾಜನ ಮುಂದೆ ತಂದು ನಿಲ್ಲಿಸಿದ. ಹುಡುಗಿ ತನ್ನ ಗಂಡನನ್ನು ಕೂಡಲೇ ಗುರುತಿಸಿದಳು. ಈ ಪುನರ್ಮಿಲನದಿಂದ ಅವಳ ಸಂತೋಷಕ್ಕೆ ಪಾರವೇ ಇಲ್ಲ. ಇಂದು ಅವಳ ಬಳಿ ಅವಳ ಪತಿ ನಿಂತಿ ದ್ದಾನೆ. ಅವಳು ರಾಜಸಿಂಹಾಸನವನ್ನೇರಿದ್ದಳು. ಆದರೆ ಒಂದು ಕ್ಷಣವೂ ತನ್ನ ಗಂಡನನ್ನು ಮರೆತಿರಲಿಲ್ಲ. ಅವನ ಅಗಲಿಕೆಯಲ್ಲಿ ಊಟ ತಿಂಡಿಯನ್ನೂ ಮರೆತಿದ್ದಳು. ಅವಳ ಕಣ್ಣುಗಳಿಂದ ನಿದ್ರೆ ಎಂದೋ ಹಾರಿ ಹೋಗಿತ್ತು. ಅವನ ನೆನಪೇ ಅವಳನ್ನು ಸದಾ ಕಾಡುತ್ತಿತ್ತು. ಆದರೆ ಈಗ ಅವಳ ಗಂಡನಿಗೆ ಅವಳ ಗುರುತು ಹತ್ತಲಿಲ್ಲ. ಕಾರಣ ಅವಳು ಪುರುಷವೇಷದಲ್ಲಿದ್ದಳು. ಹುಡುಗಿ ಮಂತ್ರಿ

ಮತ್ತು ಇತರ ಆಸ್ಥಾನಿಕರಿಗೆ ಅಲ್ಲಿಂದ ಹೊರ ಹೋಗುವಂತೆ ಆಜ್ಞೆ ಮಾಡಿದಳು. ಅವಳೊಬ್ಬಳೇ ಅಲ್ಲಿ ಉಳಿದಾಗ ಆ ಯುವಕನನ್ನು ಕೇಳಿದಳು– "ಏನು ನಿನ್ನ ಹೆಂಡತಿಯನ್ನು ಹುಡುಕುವುದಕ್ಕೆ ಬಂದಿದ್ದೀಯೇನು? ಹಾಗಾದರೆ ನಿನ್ನ ಹೆಂಡತಿಯ ದೇಹದ ಮೇಲೆ ಏನಾದರೂ ಮಚ್ಚೆ-ಗಿಚ್ಚೆ ಇತ್ತೇನು?"

ಯುವಕ ಉತ್ತರಿಸಿದ– "ಹೌದು ಅವಳ ಬಲ ಭುಜದ ಮೇಲೆ ಒಂದು ಕಪ್ಪು ಮಚ್ಚೆ ಇದೆ." ಹುಡುಗಿ ತನ್ನ ಬಟ್ಟೆಯನ್ನು ಸರಿಸಿ ಅದನ್ನ ತೋರಿಸಿ ಕೇಳಿದಳು– "ನಿನ್ನ ಹೆಂಡತಿಯ ಮೈ ಮೇಲೆ ಇಂಥದ್ದೇನಾದರೂ ಕಪ್ಪು ಮಚ್ಚೆ ಇತ್ತೇನು?"

ಅವನು ದಿಗ್ಭ್ರಮೆಗೊಂಡು ಕೂಗಿದ– "ಓಹ್! ನೀನು! ನನ್ನ...." ಹುಡುಗಿ ತುಟಿಯ ಮೇಲೆ ಬೆರಳಿಟ್ಟು ಹೇಳಿದಳು– "ಸದ್ದು! ಗಲಾಟೆ ಮಾಡ ಬೇಡಿ. ಇಂದು ನಾನು ನಿಮ್ಮನ್ನು ಬಿಟ್ಟು ಬಿಡುತ್ತೇನೆ. ನಾಳೆ ಹೆಣ್ಣಿನ ವೇಷ ದಲ್ಲಿ ಪಟ್ಟಣದ ದೊಡ್ಡ ಹೋಟೆಲಿನಲ್ಲಿ ಊಟ ಮಾಡುವುದಕ್ಕೆ ಹೋಗಿ." ಅವಳು ಮೊಕದ್ದಮೆಯನ್ನು ರದ್ದುಪಡಿಸಿ ಅವನನ್ನು ಬಿಡುಗಡೆ ಮಾಡಿದಳು. ರಾಜನ ಮಂತ್ರಿ ಸಮುದಾಯವೆಲ್ಲ ನೋಡುತ್ತಿತ್ತು. ಮರುದಿನ ಹುಡುಗಿ ತನ್ನ ಮಂತ್ರಿಗಳೊಂದಿಗೆ ಪೇಟೆಯಲ್ಲಿ ಸುತ್ತಾಡಲು ಹೊರಟಳು. ಪೇಟೆಯಲ್ಲಿ ಸುತ್ತಾ ಡುತ್ತಾ ಅವಳು ಇದ್ದಕ್ಕಿದ್ದಂತೆ ಒಂದು ಹೋಟೆಲಿನ ಬಾಗಿಲಿನಲ್ಲಿ ನಿಂತು ಬಿಟ್ಟಳು. ಮತ್ತು ಅಲ್ಲಿ ಊಟ ಮಾಡುತ್ತಿದ್ದ ಯುವ ಮಹಿಳೆಯನ್ನು ಒಂದೇ ಸಮನೆ ದೃಷ್ಟಿಸಿ ನೋಡತೊಡಗಿದಳು. ಅವಳೂ ಇವಳ ಕಡೆ ನೋಡಿ ಮುಗುಳ್ನಕ್ಕಳು. ಅನಂತರ ಹುಡುಗಿ ಏನನ್ನೋ ಕಳೆದುಕೊಂಡವಳಂತೆ ಮನೆಗೆ ಹಿಂತಿರುಗಿದಳು.

ರಾಜ ತನ್ನ ಮಂತ್ರಿಗಳಿಗೆ ಸಂತಸದ ಸುದ್ದಿಯನ್ನು ಹೇಳಿದ– "ನೀವು ಗಳೆಲ್ಲ ನನ್ನನ್ನು ಮದುವೆ ಮಾಡಿಕೊಳ್ಳಿ ಎಂದು ಪೀಡಿಸುತ್ತಿದ್ದಿರಿ. ಈ ಹೊತ್ತು ನಿಮ್ಮ ಮನಸ್ಸಿನ ಆಸೆ ಕೈಗೂಡುತ್ತೆ. ಈ ಹೊತ್ತು ನಾನು ಪೇಟೆಯಲ್ಲಿ ದೊಡ್ಡ ಹೋಟೆಲಿನಲ್ಲಿ ಊಟ ಮಾಡುತ್ತ ಕುಳಿತಿದ್ದ ಹುಡುಗಿಯನ್ನು ನೋಡಿದೆನಲ್ಲ ಅವಳನ್ನು ಪ್ರೀತಿಸುತ್ತೇನೆ. ಅವಳನ್ನೇ ನಾನು ಮದುವೆಯಾಗುವುದು." ಎಲ್ಲರೂ ಒಕ್ಕೊರಲಿನಿಂದ ಹೇಳಿದರು– "ನಾವು ಈಗಲೇ ಹೋಗಿ ತಮ್ಮ ಮದುವೆಯ ಎಲ್ಲ

ಏರ್ಪಾಟನ್ನೂ ಮಾಡುತ್ತೇವೆ." ರಾಜನ ಮದುವೆ ಅಂದೇ ಭಾರೀ ಸಂಭ್ರಮ ದಿಂದ ನೆರವೇರಿತು. ಮದುವೆಯ ನಂತರ ಹುಡುಗಿ ಗಂಡನಿಗೆ ರಾಜ್ಯದ ಆಡಳಿತ ವ್ಯವಸ್ಥೆಯನ್ನು ಕಲಿಸಿದಳು. ಅವನು ರಾಜಕೀಯದ ಕಾರ್ಯಗಳಲ್ಲಿ ನಿಪುಣನಾದ ಮೇಲೆ ಅವನಿಗೆ ರಾಜವೇಷವನ್ನು ಹಾಕಿಸಿ ರಾಜಕಾರ್ಯದ ಮೇಲ್ವಿಚಾರಣೆಗೆ ಮಂತ್ರಿಗಳ ಬಳಿಗೆ ಕಳುಹಿಸಿದಳು. ಅವನು ಇದೇ ರೀತಿ ಕೆಲವು ದಿನ ಆಡಳಿತ ವ್ಯವಸ್ಥೆಯನ್ನು ನಡೆಸುತ್ತಿದ್ದ. ಆದರೆ ತನ್ನ ಕೆಲಸದ ವರದಿಯನ್ನೆಲ್ಲ ತನ್ನ ಹೆಂಡತಿಗೆ ದಿನವೂ ಕೊಡುತ್ತಿದ್ದ. ತನ್ನ ಪತಿಯ ಕೈಯಲ್ಲಿ ರಾಜ್ಯದ ಆಡಳಿತಸೂತ್ರ ಸುರಕ್ಷಿತವಾಗಿರುತ್ತದೆಂಬ ಸಂಪೂರ್ಣ ವಿಶ್ವಾಸ ಅವಳಿಗುಂಟಾದ ಮೇಲೆ ಒಂದು ದಿನ ಗಂಡನಿಗೆ ಹೇಳಿದಳು– "ಇನ್ನು ಮೇಲೆ ನಾವು ಹೀಗೆಯೇ ಮುಚ್ಚುಮರೆ ಯಲ್ಲಿ ಹೆಚ್ಚು ದಿನ ಇರುವುದು ಸರಿಯಲ್ಲ. ನಮ್ಮ ಮಂತ್ರಿಗಳ ಮುಂದೆ ನಮ್ಮ ವಿಚಾರವನ್ನೆಲ್ಲ ಹೇಳಿಬಿಡಬೇಕೆಂದು ನನಗನ್ನಿಸುತ್ತದೆ. ಅದೂ ಅಲ್ಲದೆ ಹಳೆಯ ಮೊಕದ್ದಮೆಗಳ ತೀರ್ಮಾನವನ್ನೂ ನಾವು ಮಾಡಬೇಕಾಗಿದೆ."

ಆ ದಿನದ ಕಾರ್ಯಗಳೆಲ್ಲ ಮುಗಿದ ಮೇಲೆ ಮಂತ್ರಿಗಳೆಲ್ಲ ತಮ್ಮ ತಮ್ಮ ಮನೆಗೆ ಹೊರಟರು. ದಾರಿಯಲ್ಲಿ ತಮ್ಮ ತಮ್ಮಲ್ಲೇ ತಮ್ಮ ರಾಜನ ಮುಖ ಎಷ್ಟು ಬದಲಾಗಿ ಬಿಟ್ಟಿದೆ ಎಂದು ಮಾತಾಡಿಕೊಂಡರು. ಯಾವುದಾದರೂ ಕಾಯಿಲೆ ಯಿಂದ ಹೀಗಾಗಿರಬಹುದು ಎಂದು ಅಂದುಕೊಂಡರು. ಅವರಿನ್ನೂ ರಸ್ತೆಯಲ್ಲಿ ಹೋಗುತ್ತಿದ್ದಾಗಲೇ ಅರಮನೆಯ ಗಂಟೆಯ ಶಬ್ದ ಕೇಳಿಸಿತು. ಎಲ್ಲರೂ ಹಿಂತಿರುಗಿ ಅರಮನೆಗೆ ಹೋದರು. ರಾಜ ಪ್ರಜೆಗಳ ಮುಂದೆ ಏನಾದರೂ ಘೋಷಣೆ ಮಾಡಬೇಕಾದಾಗ ಈ ಗಂಟೆ ಬಾರಿಸಲಾಗುತ್ತಿತ್ತು. ಆದರಿಂದ ಗಂಟೆ ಹೊಡೆದ ಕೂಡಲೇ ಎಲ್ಲ ಜನರೂ ಅರಮನೆಯ ಮುಂದೆ ಗುಂಪು ಸೇರಿದರು. ಆದರೆ ರಾಜ ಏತಕ್ಕೆ ತಮ್ಮನ್ನು ಕರೆಸಿದ್ದಾನೆ ಎಂಬುದು ಯಾರಿಗೂ ಗೊತ್ತಿರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಹುಡುಗಿ ಹೊರಬಂದಳು. ಒಂದು ಎತ್ತರದ ವೇದಿಕೆಯ ಮೇಲೆ ನಿಂತು ತನ್ನೆಲ್ಲ ಕರುಣ ಕಥೆಯನ್ನು ಹೇಳತೊಡಗಿದಳು. ತಮ್ಮ ರಾಜನ ಕರುಣಾಜನಕ ಕಥೆಯನ್ನು ಕೇಳುತ್ತಾ ಕೇಳುತ್ತಾ ಎಲ್ಲರ ಕಣ್ಣುಗಳೂ ಮಂಜಾ ದುವು. ಎಲ್ಲ ಪಟ್ಟಣಿಗರೂ ಒಕ್ಕೊರಲಿನಿಂದ ಆ ದುಷ್ಟ ಅಪರಾಧಿಗಳಿಗೆ ಬೇಗ ಶಿಕ್ಷೆ ಕೊಡಬೇಕೆಂದು ಕೇಳಿಕೊಂಡರು.

ಹುಡುಗಿ ರಾಜಪೀಠದಿಂದಲೇ ಆ ಹಳೆಯ ಮೊಕದ್ದಮೆಗಳ ತೀರ್ಮಾನವನ್ನು ಹೇಳಿದಳು– "ನಾಲ್ಕುಜನ ಜೂಜುಕೋರರನ್ನೂ ಬಿಟ್ಟುಬಿಡುವುದು. ಏಕೆಂದರೆ ಅವರೇನು ಅಂಥ ದೊಡ್ಡ ತಪ್ಪು ಮಾಡಿಲ್ಲ. ಅದೂ ಅಲ್ಲದೆ ಜೈಲಿನಲ್ಲಿ ಈಗಾಗಲೇ ಸ್ವಲ್ಪ ದಿನ ಇದ್ದು ಅವರು ತಾವು ಮಾಡಿದ್ದಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸಿದ್ದಾರೆ. ನಾನಾಗಿ ಒಂದು ವೇಳೆ ಅವರ ಕೈಗೆ ಸಿಕ್ಕದೇ ಹೋಗಿದ್ದರೆ ಬಹುಶಃ ಅವರಿಗೆ ಇಂಥ ಕೆಟ್ಟ ಕೆಲಸ ಮಾಡುವ ಯೋಚನೆ ಬರುತ್ತಿರಲಿಲ್ಲ. ನಾಲ್ಕು ಜನ ಬೇಟೆಗಾರರನ್ನೂ ಬಿಡತಕ್ಕದ್ದು. ಏಕೆಂದರೆ ಅವರೂ ನನಗೆ ಏನೂ ಅಂಥ ಹೆಚ್ಚಿನ ತೊಂದರೆ ಉಂಟು ಮಾಡಿಲ್ಲ. ಆದರೆ ಆ ಪಾಪಿ ರಾಜನಿಗೆ ಮಾತ್ರ ನಾನು ಆಜೀವ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸುತ್ತೇನೆ. ಇದರ ಉದ್ದೇಶ ಇನ್ನು ಮುಂದೆ ಅವನು ಯಾವ ಹೆಣ್ಣಿನ ಮರ್ಯಾದೆಗೂ ಧಕ್ಕೆ ಉಂಟು ಮಾಡದಿರಲೆಂಬುದು."

—oOo—

ಮಾಯದ ಕುಂಚ

ಒಂದಾನೊಂದು ಕಾಲದಲ್ಲಿ ಮಾಲಿಯಾಂಗ್ ಎಂಬ ಒಬ್ಬ ಹುಡುಗನಿದ್ದ. ಅವನು ಇನ್ನೂ ಚಿಕ್ಕವನಿದ್ದಾಗಲೇ ಅವನ ತಂದೆ ತಾಯಿಗಳು ತೀರಿ ಹೋಗಿದ್ದರು. ಹೀಗಾಗಿ ಸೌದೆಯನ್ನು ಮಾರಿಯೋ ಇಲ್ಲ ಕಳೆಯನ್ನು ಕಿತ್ತೋ ಅವನು ಹೊಟ್ಟೆ ಹೊರೆದುಕೊಳ್ಳಬೇಕಾಗಿತ್ತು. ಅವನು ಬಲು ಬುದ್ಧಿವಂತ. ಚಿತ್ರಕಲೆಯನ್ನು ಕಲಿಯಬೇಕೆಂಬುದು ಅವನ ಬಹುದೊಡ್ಡ ಆಶೆ. ಆದರೆ ಅವನಿಗೆ ಒಂದು ಕುಂಚವನ್ನು ಕೊಳ್ಳಲೂ ಶಕ್ತಿಯಿರಲಿಲ್ಲ.

ಒಂದು ದಿನ ಮಾಲಿಯಾಂಗ್ ಒಂದು ಶಾಲೆಯ ಮುಂದೆ ಹಾದು ಹೋಗುತ್ತಿದ್ದ. ಆಗ ಆ ಶಾಲೆಯ ಉಪಾಧ್ಯಾಯರು ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಅವರ ಕುಂಚದ ಗೆರೆಗಳಿಂದ ಆಕರ್ಷಿತನಾದ. ಅದೇನೆಂದು ತಿಳಿಯುವ ಮುನ್ನ ಅವನು ಶಾಲೆಯೊಳಕ್ಕೆ ಕಾಲಿಟ್ಟಿದ್ದ.

"ನನಗೆ ಚಿತ್ರಕಲೆಯೆಂದರೆ ತುಂಬಾ ಇಷ್ಟ. ದಯವಿಟ್ಟು ನನಗೊಂದು ಕುಂಚ ಕೊಡುತ್ತೀರಾ ?" – ಎಂದು ಅಧ್ಯಾಪಕರನ್ನು ಕೇಳಿದ.

"ಏನು ! " ಎಂದು ಉದ್ಗಾರ ತೆಗೆದು ಅವರು ಹುಡುಗನನ್ನೊಮ್ಮೆ ತೀಕ್ಷ್ಣವಾಗಿ ನೋಡಿದರು. " ಈ ಗತಿಯಿಲ್ಲದ ಪೋರನಿಗೆ ಚಿತ್ರಕಲೆ ಬೇರೆ ಬೇಕೋ ? ನೀನೆಲ್ಲೋ ಕನಸು ಕಾಣುತ್ತಿರಬೇಕು." ಹೀಗೆಂದು ಅಣಕವಾಡಿ ಆ ಹುಡುಗನನ್ನು ಅಟ್ಟಿಬಿಟ್ಟರು.

ಆದರೆ ಈ ವಿಷಯದಲ್ಲಿ ಮಾಲಿಯಾಂಗನ ನಿರ್ಧಾರ ದೃಢವಾಗಿತ್ತು. "ನಾನು ಬಡವನಾದರೇನಂತೆ; ಚಿತ್ರಕಲೆಯನ್ನೇಕೆ ಕಲಿಯಬಾರದು ?" –ಎಂದು ತನ್ನಲ್ಲೇ ಅಂದು ಕೊಂಡ. ಚಿತ್ರಕಲೆಯನ್ನು ಕಲಿಯಲೇಬೇಕೆಂದು ನಿಶ್ಚಯಿಸಿದ. ಅದಕ್ಕಾಗಿ ಪ್ರತಿ ದಿನವೂ ಕಷ್ಟಪಟ್ಟು ಅಭ್ಯಾಸ ಮಾಡತೊಡಗಿದ. ಸೌದೆಯನ್ನು

ತರಲು ಬೆಟ್ಟದ ಮೇಲಕ್ಕೆ ಹೋದಾಗ ಮರದ ಕಟ್ಟಿಗೆಯಿಂದ ಮರಳಿನ ಮೇಲೆ ಹಕ್ಕಿಗಳನ್ನು ಬಿಡಿಸುತ್ತಿದ್ದ. ಜೊಂಡು ತರಲು ನದಿಯ ಕಡೆ ಹೋದಾಗ ಕೈ ಬೆರಳನ್ನು ನೀರಿನಲ್ಲಿ ಅದ್ದಿ ಬಂಡೆಗಳ ಮೇಲೆ ಮೀನಿನ ಚಿತ್ರವನ್ನು ಬಿಡಿಸುತ್ತಿದ್ದ. ಮನೆಗೆ ಬಂದಾಗ ತನ್ನಲ್ಲಿದ್ದ ಕೆಲವೇ ಪೀಠೋಪಕರಣಗಳ ಚಿತ್ರವನ್ನು ತನ್ನ ಪುಟ್ಟ ಕೋಣೆಯ ನಾಲ್ಕು ಗೋಡೆಗಳ ಮೇಲೆಲ್ಲ ಬಿಡಿಸುತ್ತಿದ್ದ.

ದಿನಗಳು ಉರುಳುತ್ತಿದ್ದುವು. ಮಾಲಿಯಾಂಗ್ ಒಂದೇ ಒಂದು ದಿನವೂ ಚಿತ್ರ ಬರೆಯುವುದನ್ನು ಅಭ್ಯಾಸ ಮಾಡದೆ ಬಿಡುತ್ತಿರಲಿಲ್ಲಿ. ಇದರಿಂದಾಗಿ ಅವನು ಬಹಳಷ್ಟು ಪ್ರಗತಿಯನ್ನು ಸಾಧಿಸಿದ. ಅವನ ಚಿತ್ರಗಳು ಅದೆಷ್ಟು ಜೀವಂತ ವಾಗಿದ್ದುವೆಂದರೆ ಅವನ್ನು ನೋಡಿದ ಜನ ಈ ಹಕ್ಕಿಗಳು ಇನ್ನೇನು ಚಿಲಿಪಿಲಿ ಗುಟ್ಟಿಯಾವು, ಈ ಮೀನುಗಳು ಇನ್ನೇನು ಈಜಬಹುದು ಎಂದೆಲ್ಲ ಮರುಳಾಗು ತ್ತಿದ್ದರು. ಇಷ್ಟಾದರೂ ಅವನ ಬಳಿ ಒಂದು ಕುಂಚವಿರಲಿಲ್ಲ. ಒಂದು ಕುಂಚ ವಿದ್ದಿದ್ದರೆ ತನಗೆಷ್ಟೊಂದು ಸಂತೋಷವಾಗುತ್ತಿತ್ತು ಎಂದು ಹಲವಾರು ಸಲ ಅಂದು ಕೊಳ್ಳುತ್ತಿದ್ದ.

ದಿನವೆಲ್ಲಾ ಕೆಲಸ ಮಾಡಿ ಚಿತ್ರಗಳನ್ನು ಬಿಡಿಸಿ ತೀರ ದಣಿದು ಬಂದು ರಾತ್ರಿ ಹುಲ್ಲಿನ ಹಾಸಿಗೆಯ ಮೇಲೆ ತಲೆ ಹಾಕುತ್ತಲೇ ಮಾಲಿಯಾಂಗನನ್ನು ಗಾಢ ನಿದ್ರೆ ಆವರಿಸಿತು. ಆಗ ಉದ್ದನೆಯ ಬಿಳಿಯ ಗಡ್ಡವನ್ನು ಬಿಟ್ಟಿದ್ದ ಮುದುಕನೊಬ್ಬ ಅವನ ಬಳಿಬಂದು ಅವನಿಗೊಂದು ಕುಂಚವನ್ನು ಕೊಟ್ಟು ಹೇಳಿದ– " ಇದೊಂದು ಮಾಯಾ ಕುಂಚ. ಇದನ್ನು ಹುಶಾರಾಗಿ ಬಳಸು".

ಮಾಲಿಯಾಂಗ್ ಅದನ್ನು ಕೈಗೆತ್ತಿಕೊಂಡ. ಅದೊಂದು ಹೊಳೆಯುವ ಚಿನ್ನದ ಕುಂಚ. ಮತ್ತು ಅದು ಸಾಕಷ್ಟು ಭಾರವಾಗಿಯೂ ಇತ್ತು.

" ಎಂಥ ಸೊಗಸಾದ ಕುಂಚ " ! ಎಂದು ಸಂತೋಷದಿಂದ ಕುಣಿದು ಕುಪ್ಪಳಿಸಿದ. " ನಿನಗೆ ನಾನು ಯಾವಾಗಲೂ ಋಣಿ .... ".

ಮಾಲಿಯಾಂಗ್ ಆ ಮುದುಕನನ್ನು ವಂದಿಸುವ ಮಾತುಗಳನ್ನು ಇನ್ನೂ ಪೂರ್ತಿ ಮಾಡುವುದರೊಳಗಾಗಿ ಆ ಮುದುಕ ಅಲ್ಲಿಂದ ಕಣ್ಮರೆಯಾಗಿದ್ದ. ಹುಡುಗ ಗಾಬರಿಗೊಂಡು ಎಚ್ಚೆತ್ತ. ಅದು ಕನಸಾದರೂ ಹೇಗೆ? ಅವನಿಗೆ ದಿಗ್ಭ್ರಮೆಯಾಯಿತು.

ಈ ಮಾಯಾಕುಂಚದಿಂದ ಅವನೊಂದು ಹಕ್ಕಿಯನ್ನು ಬಿಡಿಸಿದ. ಹಕ್ಕಿಗರಿಗೆದರಿ ಆಕಾಶದಲ್ಲಿ ಎತ್ತರಕ್ಕೆ ಹಾರಿತು. ಅಲ್ಲಿಂದ ಅವನಿಗೆ ಕೇಳುವಂತೆ ಉಲ್ಲಾಸದಿಂದ ಹಾಡತೊಡಗಿತು. ಅದೇ ಕುಂಚದಿಂದ ಅವನು ಒಂದು ಮೀನನ್ನು ಚಿತ್ರಿಸಿದ. ಅವನು ನೋಡನೋಡುತ್ತಿದ್ದಂತೆಯೇ ಅದು ತನ್ನ ಬಾಲವನ್ನು ನಿಮಿರಿಸಿ ನದಿಗೆ ಹಾರಿ ಈಜ ತೊಡಗಿತು. ಇದರಿಂದ ಅವನ ಸಂತಸ ಮೇರೆ ಮೀರಿತು.

ಈ ಮಾಯಾ ಕುಂಚದಿಂದ ಮಾಲಿಯಾಂಗ್ ಪ್ರತಿದಿನವೂ ನೇಗಿಲು, ಸಲಿಕೆ, ದೀಪ, ಬಕೆಟ್ಟು ಇವುಗಳನ್ನು; ಇವು ಯಾವೂ ಇಲ್ಲದ ತನ್ನೂರಿನ ಬಡ ಜನರಿಗಾಗಿ ಚಿತ್ರಿಸುತ್ತಿದ್ದ.

ಆದರೆ ಯಾವ ಗುಟ್ಟೂ ಎಲ್ಲ ಕಾಲಕ್ಕೂ ಗುಟ್ಟಾಗಿರಲು ಸಾಧ್ಯವಿಲ್ಲ. ಮಾಲಿಯಾಂಗನ ಮಾಯಾಕುಂಚದ ಸಮಾಚಾರ ಆ ಊರಿನ ಶ್ರೀಮಂತ ಜಮೀನುದಾರನ ಕಿವಿಗೆ ಬಿತ್ತು. ಜಮೀನುದಾರ ಮಾಲಿಯಾಂಗನನ್ನು ಹಿಡಿದು ತರಲು ಮತ್ತು ತನಗೋಸ್ಕರ ಅವನು ಚಿತ್ರಗಳನ್ನು ಚಿತ್ರಿಸಬೇಕೆಂದು ಒತ್ತಾಯ ಪಡಿಸಲು ತನ್ನ ಕಡೆಯ ಇಬ್ಬರನ್ನು ಕಳುಹಿಸಿದ.

ಮಾಲಿಯಾಂಗ್ ಇನ್ನೂ ಬಾಲಕನಾದರೂ ತುಂಬ ಎದೆಗಾರ. ಆ ಶ್ರೀಮಂತರು ಎಂಥವರೆಂಬುದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಜಮೀನುದಾರ ಎಷ್ಟೇ ಬೆದರಿಸಿದರೂ, ಎಷ್ಟೇ ಹೊಗಳಿದರೂ ಅವನು ಅದಕ್ಕೆಲ್ಲ ಸೊಪ್ಪು ಹಾಕಲಿಲ್ಲ. ಅವನಿಗಾಗಿ ಒಂದೇ ಒಂದು ಚಿತ್ರ ಬರೆಯಲೂ ನಿರಾಕರಿಸಿದ. ಜಮೀನುದಾರ ಅವನನ್ನು ಕುದುರೆಯ ಲಾಯದಲ್ಲಿ ಕೂಡಿಹಾಕಿ ಉಪವಾಸ ಕೆಡವಿದ.

ಮೂರು ದಿನಗಳ ನಂತರ ವಿಪರೀತ ಮಂಜು ಸುರಿಯಲಾರಂಭಿಸಿತು. ಸಂಜೆಯ ಹೊತ್ತಿಗೆ ಮಂಜು ನೆಲದಮೇಲೆ ದಟ್ಟವಾಗಿ ಸುರಿದಿತ್ತು. ಹಸಿವಿನಿಂದಲ್ಲದಿದ್ದರೆ ಚಳಿಯಿಂದಲಾದರೂ ಇದುವರೆಗೆ ಮಾಲಿಯಾಂಗ್ ಸತ್ತು ಹೋಗಿರಬೇಕೆಂದೆಣಿಸಿ ಜಮೀನುದಾರ ನೋಡೋಣವೆಂದು ಲಾಯದ ಕಡೆ ಹೊರಟ. ಬಾಗಿಲ ಹತ್ತಿರ ಹೋಗುತ್ತಿದ್ದಂತೆ ಅದರ ಕಂಡಿಯಿಂದ ಕೆಂಪನೆಯ ಉರಿಯ ಬೆಳಕು ಕಾಣಿಸಿತು. ಅಷ್ಟೇ ಅಲ್ಲ; ಘಮಘಮ ಅಡಿಗೆಯ ವಾಸನೆಯೂ ಬಂತು. ಬಾಗಿಲ ಸಂದಿನಲ್ಲಿ ನೋಡಿದರೆ ಕಂಡದ್ದಾದರೂ ಏನು? ಮಾಲಿಯಾಂಗ್

ಒಂದು ದೊಡ್ಡ ಒಲೆಯಲ್ಲಿ ಕೆಂಡದ ಮೇಲೆ ರೊಟ್ಟಿ ಸುಡುತ್ತಾ ಕೂತಿದ್ದಾನೆ! ಬಿಸಿ ಬಿಸಿ ರೊಟ್ಟಿಯನ್ನು ತಿನ್ನುತ್ತಿದ್ದಾನೆ! ಜಮೀನುದಾರನಿಗೆ ತನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಒಲೆ ಹಾಗೂ ರೊಟ್ಟಿ ಎಲ್ಲಿಂದ ಬಂದವು? ಆಮೇಲೆ ಅವನಿಗೆ, ಮಾಲಿಯಾಂಗ್ ಅವುಗಳನ್ನು ಚಿತ್ರಿಸಿರಬಹುದು ಎನಿಸಿತು. ಕೋಪದಿಂದ ನಡುಗುತ್ತಾ ತನ್ನ ಕಡೆಯ ಜನರನ್ನು ಕರೆದು ಮಾಲಿಯಾಂಗನನ್ನು ಕೊಂದು ಅವನ ಕುಂಚವನ್ನು ಕಿತ್ತುಕೊಳ್ಳಲು ಹೇಳಿದ.

ಆದರೆ ಅವನ ಕಡೆಯ ಬಲಿಷ್ಠರಾದ ಹತ್ತಾಳು ಮುಂದೆ ಬರುವುದರೊಳಕ್ಕೆ, ನುಗ್ಗುವ ಹೊತ್ತಿಗೆ ಅಲ್ಲೆಲ್ಲೂ ಮಾಲಿಯಾಂಗನ ಸುಳಿವೇ ಇಲ್ಲ. ಅವರಿಗೆ ಕಂಡದ್ದೇ ಸಿದ್ಧರೂ ಗೋಡೆಗೊರಗಿಸಿಟ್ಟ ಒಂದು ಏಣಿ ಅಷ್ಟೆ. ಜಮೀನುದಾರ ಅವನನ್ನು ಹಿಂಬಾಲಿಸಲು ತಡಮಾಡಲಿಲ್ಲ. ಅದೇ ಏಣಿಯನ್ನು ಕೂಡಲೇ ಹತ್ತಿದ. ಆದರೆ ಮೂರನೇ ಮೆಟ್ಟಿಲನ್ನು ಹತ್ತುವುದರೊಳಗೇ ಎಡವಿ ಬಿದ್ದುಬಿಟ್ಟ. ಮತ್ತೆ ಮೇಲೇಳುವುದರೊಳಗಾಗಿ ಏಣಿಯೇ ಮಾಯವಾಗಿತ್ತು.

ಜಮೀನುದಾರನ ಮನೆಯಿಂದ ತಪ್ಪಿಸಿಕೊಂಡ ಮೇಲೆ ಮಾಲಿಯಾಂಗ್ ತಾನು ಇನ್ನು ಆ ಹಳ್ಳಿಯಲ್ಲಿ ಅಡಗಿಕೊಂಡಿರುವುದು ಅಸಾಧ್ಯವೆಂದುಕೊಂಡ. ಹಾಗೆ ಮಾಡುವುದರಿಂದ ತನಗೆ ಆಶ್ರಯ ನೀಡಿದವರನ್ನೇ ಕಷ್ಟಕ್ಕೆ ಸಿಕ್ಕಿಸಿದಂತಾಗುತ್ತದೆ ಎನ್ನುವುದೇ ಅದಕ್ಕೆ ಕಾರಣ. ಅಲ್ಲಿಂದ ಬಹುದೂರ ಹೋಗಬೇಕು. ತನ್ನ ಪರಿಚಯದ ಮನೆಗಳವರಿಗೆ ಸ್ನೇಹಿತರಿಗೆ ಕೊನೆಯ ನಮಸ್ಕಾರ ಹೇಳಿ ಬೀಳ್ಕೊಂಡ.

ಆಮೇಲೆ ಒಂದು ಕುದುರೆಯನ್ನು ಚಿತ್ರಿಸಿದ. ಅದನ್ನೇರಿ ನಾಗಾಲೋಟದಿಂದ ಸಾಗಿದ.

ಅವನಿನ್ನೂ ಹೆಚ್ಚು ದೂರ ಹೋಗಿರಲಿಲ್ಲ. ಹಿಂದುಗಡೆ ಕೋಲಾಹಲ ಕೇಳಿಬಂತು. ಹಿಂತಿರುಗಿ ನೋಡಿದರೆ ಜಮೀನುದಾರನ ಕಡೆಯ ಸುಮಾರು ಇಪ್ಪತ್ತು ಜನ ಬಂಟರು ಕುದುರೆಗಳ ಮೇಲೆ ಅವನನ್ನು ಬೆನ್ನಟ್ಟಿ ಬರುತ್ತಿದ್ದರು. ಅವರೆಲ್ಲ ಪಂಜು ಹಿಡಿದಿದ್ದರು. ಜಮೀನುದಾರನ ಕೈಯಲ್ಲಿ ಒಂದು ಕತ್ತಿ ಹೊಳೆಯುತ್ತಿತ್ತು.

ಬೇಗನೆ ಅವರು ಇವನನ್ನು ಸಮೀಪಿಸಿದರು. ಮಾಲಿಯಾಂಗ್ ಸದ್ದಿಲ್ಲದೆ ತನ್ನ ಮಾಯಾಕುಂಚದಿಂದ ಒಂದು ಬಿಲ್ಲು ಮತ್ತು ಬಾಣವನ್ನು ಚಿತ್ರಿಸಿ ಬಿಲ್ಲಿಗೆ ಬಾಣವನ್ನು ಹೂಡಿದ. ಬಾಣ ಜಮೀನುದಾರನ ಕುತ್ತಿಗೆಯನ್ನು ತಾಕಿತು. ಜಮೀನುದಾರ ಕುದುರೆಯಿಂದ ಕೆಳಗೆ ಬಿದ್ದ. ಮಾಲಿಯಾಂಗ್ ತನ್ನ ಕುದುರೆಯನ್ನು ಚಪ್ಪರಿಸಿದ. ಅದು ರೆಕ್ಕೆ ಮೂಡಿತೋ ಎಂಬಂತೆ ನಾಗಾಲೋಟದಿಂದ ಓಡತೊಡಗಿತು.

ಮಾಲಿಯಾಂಗ್ ಹಲವಾರು ದಿನ ಹಗಲು ರಾತ್ರಿ ಎಲ್ಲಿಯೂ ನಿಲ್ಲದೆ ನಾಗಾಲೋಟದಿಂದ ಸಾಗಿದ ಮೇಲೆ ಒಂದು ನಗರವನ್ನು ತಲುಪಿದ. ತನ್ನ ಹುಟ್ಟೂರಿನಿಂದ ಆ ಊರು ಬಹು ದೂರವಿದ್ದುದರಿಂದ ಅಲ್ಲಿಯೇ ನೆಲೆಸುವುದೆಂದು ನಿಶ್ಚಯಿಸಿದ. ಆ ಊರಿನಲ್ಲಿ ಯಾವ ಕೆಲಸವೂ ಸಿಗದಿದ್ದರಿಂದ ಚಿತ್ರಗಳನ್ನು ಬರೆದು ಪೇಟೆಯಲ್ಲಿ ಅವನ್ನು ಮಾರಿಯೇ ಜೀವಿಸಬೇಕಾಗಿತ್ತು. ತನ್ನನ್ನು ಇತರರಾರೂ ಕಂಡುಹಿಡಿಯಬಾರದೆಂದು ತಾನು ಚಿತ್ರಿಸುವ ಚಿತ್ರಗಳು ಜೀವ ತಳೆಯದಿರಲೆಂದು ತುಂಬ ಎಚ್ಚರವಹಿಸಿದ. ಅದೇ ಕಾರಣಕ್ಕಾಗಿಯೇ ಅವನು ಹಕ್ಕಿಗಳನ್ನು ಬಿಡಿಸಿದಾಗ ಅವಕ್ಕೆ ಕೊಕ್ಕು ಇಲ್ಲದಂತೆಯೋ ಅಥವಾ ಪ್ರಾಣಿಗಳನ್ನು ಚಿತ್ರಿಸಿದಾಗ ಅವಕ್ಕೆ ಒಂದು ಕಾಲು ಇಲ್ಲದಂತೆಯೋ ಚಿತ್ರಿಸುತ್ತಿದ್ದ.

ಒಂದು ದಿನ ಕೊಕ್ಕರೆಯೊಂದನ್ನು ಬಿಡಿಸಿದ. ಅದಕ್ಕೆ ಕಣ್ಣುಗಳನ್ನು ಬೇಕೆಂದೇ ಬಿಡಿಸಿರಲಿಲ್ಲ. ಆದರೆ ಅವನ ಅಜಾಗರೂಕತೆಯಿದಾಗಿ ಕಣ್ಣುಗಳಿರಬೇಕಾದ ಜಾಗದಲ್ಲಿ ಮಸಿಯನ್ನು ಸಿಡಿಸಿಬಿಟ್ಟಿದ್ದ. ಅದರಿಂದಾಗಿ ಕೊಕ್ಕರೆ ತನ್ನ ಕಣ್ಣರಳಿಸಿ ಗರಿಗೆದರಿ ಹಾರಿಹೋಯಿತು. ಒಮ್ಮೆಲೇ ಇಡೀ ನಗರ ಆಶ್ಚರ್ಯಚಕಿತಗೊಂಡಿತು. ಯಾರೋ ಆತುರಗಾರರು ಚಕ್ರವರ್ತಿಗೆ ಈ ಸುದ್ದಿ ಮುಟ್ಟಿಸಿದರು. ಚಕ್ರವರ್ತಿ ಮಾಲಿಯಾಂಗನನ್ನು ಆಸ್ಥಾನಕ್ಕೆ ಕರೆತರಲು ಅಧಿಕಾರಿಗಳನ್ನಟ್ಟಿದ. ಮಾಲಿಯಾಂಗ್‌ಗೆ ಅಲ್ಲಿಗೆ ಹೋಗಲಿಷ್ಟವಿರಲಿಲ್ಲ. ಆದರೆ ಅಧಿಕಾರಿಗಳು ಒಳ್ಳೆಯ ಭರವಸೆಗಳನ್ನು ಕೊಟ್ಟು; ಅದಕ್ಕೂ ಜಗ್ಗದಿದ್ದಾಗ ಸೌಮ್ಯವಾದ ಬೆದರಿಕೆಗಳನ್ನು ಹಾಕಿ ಕರೆದೊಯ್ದರು.

ಬಡವರ ವಿಚಾರದಲ್ಲಿ ಚಕ್ರವರ್ತಿ ಅದೆಷ್ಟು ಕ್ರೂರವಾಗಿ ವರ್ತಿಸುತ್ತಾನೆಂಬ ಬಗ್ಗೆ ಮಾಲಿಯಾಂಗ್ ಅನೇಕ ಕತೆಗಳನ್ನು ಕೇಳಿದ್ದ. ಅದರಿಂದಾಗಿ ಚಕ್ರ

ವರ್ತಿಯನ್ನು ಅತ್ಯಂತ ಆಳವಾಗಿ ದ್ವೇಷಿಸುತ್ತಿದ್ದ. ಅಂಥ ವ್ಯಕ್ತಿಗಾಗಿ ದುಡಿಯಲು ಖಂಡಿತವಾಗಿಯೂ ಅವನೆಂದೂ ಸಿದ್ಧನಿರಲಿಲ್ಲ. ಚಕ್ರರ್ತಿ ಉಗ್ರ ಜಂತುವಾದ ಡ್ರೇಗನ್ ಅನ್ನು ಚಿತ್ರಿಸು ಎಂದು ಹೇಳಿದಾಗ ಅದಕ್ಕೆ ಬದಲಾಗಿ ಅವನೊಂದು ಕಪ್ಪೆಯನ್ನು ಚಿತ್ರಿಸಿದ. ಚಕ್ರವರ್ತಿ ಫೀನಿಕ್ಸ್ ಪಕ್ಷಿಯನ್ನು ಚಿತ್ರಿಸು ಎಂದು ಆಜ್ಞಾಪಿಸಿದಾಗ ಮಾಲಿಯಾಂಗ್ ಅದರ ಬದಲು ಹುಂಜವನ್ನು ಚಿತ್ರಿಸಿದ. ಈ ವಿಕಾರವಾದ ಕಪ್ಪೆ ಹಾಗೂ ಅಸಹ್ಯಕರವಾದ ಹುಂಜ ಎರಡೂ ಚಕ್ರವರ್ತಿಯ ಸುತ್ತಲೂ ಕುಪ್ಪಳಿಸಿ ಹಾರಾಡಿದವು. ಅವುಗಳ ಹಾರಾಟದಿಂದ ಅರಮನೆ ಯೆಲ್ಲಾ ಕಸ ಮಣ್ಣುಗಳಿಂದ ತುಂಬಿಹೋಯಿತು. ಆಗ ಚಕ್ರವರ್ತಿ ಮಿತಿ ಮೀರಿದ ಕೋಪದಿಂದ, ಮಾಲಿಯಾಂಗ್‌ನಿಂದ ಮಾಯಾಕುಂಚವನ್ನು ಕಿತ್ತು ಕೊಂಡು ಸೆರೆಮನೆಗೆ ತಳ್ಳಿರಿ ಎಂದು ತನ್ನ ಅಂಗರಕ್ಷಕರಿಗೆ ಆಜ್ಞೆ ಮಾಡಿದ.

ಈಗ ಮಾಯಾಕುಂಚ ಚಕ್ರವರ್ತಿಯ ಕೈಸೇರಿತು. ಅವನು ತಾನೇ ಅದರಿಂದ ಚಿತ್ರ ಬಿಡಿಸಲು ಯತ್ನಿಸಿದ. ಮೊದಲು ಅವನೊಂದು ಚಿನ್ನದ ಪರ್ವತವನ್ನು ಚಿತ್ರಿಸಿದ. ಆ ಮೇಲೆ ಒಂದು ಚಿನ್ನದ ಪರ್ವತ ಸಾಲದೆಂದು ಒಂದಾದ ನಂತರ ಮತ್ತೊಂದು ಹೀಗೆ ಹಲವಾರು ಚಿನ್ನದ ಪರ್ವತಗಳನ್ನು ಚಿತ್ರಿಸಿದ. ಕೊನೆಗೆ ಅವನ ಚಿತ್ರಪಟದ ತುಂಬ ಚಿನ್ನದ ಪರ್ವತಗಳೇ ತುಂಬಿ ಹೋದವು. ಆದರೆ ಚಿತ್ರವೆಲ್ಲ ಮುಗಿದ ಮೇಲೆ ಆ ಚಿನ್ನದ ಪರ್ವತಗಳಿ ಗೇನಾಯಿತು ಅಂತ ತಿಳಿದುಕೊಂಡಿದ್ದೀರಿ ? ಅವೆಲ್ಲ ಕಲ್ಲಿನ ರಾಶಿಯಾದುವು. ಅವೆಲ್ಲ ಒಂದರ ಮೇಲೊಂದು ಸೇರಿಕೊಂಡು ಭಾರವಾಗಿದ್ದುದರಿಂದ ಎಲ್ಲ ಕೆಳಗು ರುಳಿದುವು. ಚಕ್ರವರ್ತಿಯ ಕಾಲ್ಬೆರಳುಗಳು ಅದರಡಿಯಲ್ಲಿ ಸಿಕ್ಕಿ ಹೆಚ್ಚು ಕಡಿಮೆ ಜಜ್ಜಿಹೋದವು.

ಇಷ್ಟಾದರೂ ಚಕ್ರವರ್ತಿಯ ದುರಾಶೆ ತಣಿಯಲಿಲ್ಲ. ಚಿನ್ನದ ಪರ್ವತವನ್ನು ಚಿತ್ರಿಸಲು ಸೋತು ಇದೀಗ ಚಿನ್ನದ ಇಟ್ಟಿಗೆಗಳನ್ನು ಚಿತ್ರಿಸಲು ನಿರ್ಧರಿಸಿದ. ಒಂದು ಇಟ್ಟಿಗೆಯನ್ನು ಚಿತ್ರಿಸಿದ. ಅದು ತೀರ ಚಿಕ್ಕದೆನಿಸಿತು. ಅದಕ್ಕಿಂತ ದೊಡ್ಡದನ್ನು ಚಿತ್ರಿಸಿದ. ಅದೂ ಚಿಕ್ಕದೆನಿಸಿತು. ಕೊನೆಗೆ ತುಂಬ ಉದ್ದವಾದ ಚಿನ್ನದ ಕೋಲನ್ನು ಚಿತ್ರಿಸಿದ. ಆದರೆ ಚಿತ್ರ ಮುಗಿದ ಮೇಲೆ ಏನಾಯಿತು ಗೊತ್ತೆ? ಚಿನ್ನದ ಕೋಲು ಒಂದು ಭಯಂಕರ ಸರ್ಪದ ಆಕಾರವನ್ನು

ಾಳಿತು. ಅದು ಅಗಲವಾಗಿ ಬಾಯ್ತೆರೆಯುತ್ತಾ ಕೆನ್ನಾಲಗೆಯನ್ನು ಚಾಚಿ ೊಂಡು ಚಕ್ರವರ್ತಿಯತ್ತ ನುಗ್ಗಿತು. ಚಕ್ರವರ್ತಿ ಭಯದಿಂದ ಪ್ರಜ್ಞೆತಪ್ಪಿದ. ದೃಷ್ಟವಶಾತ್ ಅವನ ಕಡೆಯ ಅಧಿಕಾರಿಗಳು ಬೇಗನೆ ರಕ್ಷಣೆಗೆ ಧಾವಿಸಿದರು. ಲ್ಲದಿದ್ದರೆ ಅವನು ಆ ಉಗ್ರಸರ್ಪಕ್ಕೆ ಆಹುತಿಯಾಗುತ್ತಿದ್ದ.

ಮಾಯಾಕುಂಚವನ್ನು ತನ್ನಷ್ಟಕ್ಕೆ ತಾನೇ ಉಪಯೋಗಿಸಿಕೊಳ್ಳಲಾರೆ ೆಂದು ಚಕ್ರವರ್ತಿಗೀಗ ಅರಿವಾಯಿತು. ಮಾಲಿಯಾಂಗನನ್ನು ಸೆರೆಯಿಂದ ಿಡಿಸಿದ. ಅವನೊಡನೆ ಒಳ್ಳೆಯ ಮಾತುಗಳನ್ನಾಡಿದ. ಅವನಿಗೆ ಚಿನ್ನ ಬೆಳ್ಳಿಗಳನ್ನು ೊಟ್ಟ. ಅವನಿಗೊಬ್ಬ ರಾಜಕುಮಾರಿಯನ್ನು ಬಳುವಳಿಯಾಗಿ ಕೊಡುವುದಾಗಿ ಾಗ್ದಾನ ಮಾಡಿದ. ಚಕ್ರವರ್ತಿ ಹೇಳಿದ್ದಕ್ಕೆಲ್ಲಾ ಒಪ್ಪಿದ. ಚಕ್ರವರ್ತಿಗೆ ತುಂಬ ಂತೋಷವಾಯಿತು. ಅವನ ಮಾಯಾಕುಂಚವನ್ನು ಹಿಂತಿರುಗಿಸಿದ.

ಚಕ್ರವರ್ತಿ ಮನದಲ್ಲೇ ಯೋಚಿಸಿದ– "ಅವನು ಪರ್ವತವನ್ನು ಚಿತ್ರಿಸಿದ್ದೇ ಆದರೆ ಅದರಿಂದ ಕ್ರೂರ ಪ್ರಾಣಿಗಳು ಹೊರಬಂದಾವು. ಅದರ ಬದಲು ಸಮುದ್ರವನ್ನು ಚಿತ್ರಿಸಿದರೆ ಒಳ್ಳೆಯದು".

ಸರಿ, ಮಾಲಿಯಾಂಗನಿಗೆ ಸಮುದ್ರವನ್ನು ಚಿತ್ರಿಸಲು ಆಜ್ಞಾಪಿಸಿದ.

ಮಾಲಿಯಾಂಗ್ ಕುಂಚವನ್ನು ಕೈಗೆತ್ತಿಕೊಂಡ. ಕೂಡಲೇ ಚಕ್ರವರ್ತಿಯ ಕಣ್ಣೆದುರು ಒಂದು ನಿಚ್ಚಳವಾದ ಅಪಾರ ಸಾಗರ ಸಿದ್ಧವಾಯಿತು. ೀಲ ಸಾಗರ ಪ್ರಶಾಂತವಾಗಿತ್ತು. ಅದೊಂದು ವಿಶಾಲ ದರ್ಪಣದಂತೆ ಫಳ ಫಳ ೊಳೆಯುತ್ತಿತ್ತು.

"ಏಕೆ ಈ ಸಮುದ್ರದಲ್ಲಿ ಮೀನುಗಳೇ ಕಾಣುತ್ತಿಲ್ಲವಲ್ಲ"– ಅದರತ್ತ ೋಡುತ್ತ ಚಕ್ರವರ್ತಿ ಪ್ರಶ್ನಿಸಿದ.

ಮಾಲಿಯಾಂಗ್ ತನ್ನ ಕುಂಚದಿಂದ ಅಲ್ಲಲ್ಲಿ ಕೆಲವು ಚುಕ್ಕೆಯ ುರುತುಗಳನ್ನು ಮಾಡಿದ. ಹಾಗೆ ಮಾಡಿದ ಕೂಡಲೇ ಕಾಮನ ಬಿಲ್ಲಿನ ಏಳೂ ಣ್ಣಗಳ ಮೀನುಗಳು ಕಾಣಿಸಿಕೊಂಡುವು. ತಮ್ಮ ಬಾಲವನ್ನು ನಿಮಿರಿಸಿ ಸ್ವಲ್ಪ ೊತ್ತು ಉಲ್ಲಾಸವಾಗಿ ನೀರಿನಲ್ಲಿ ಆಡುತ್ತಿದ್ದು ಆಮೇಲೆ ದೂರ ಸಾಗರದತ್ತ ಈಜುತ್ತ ಹೋದುವು.

ಚಕ್ರವರ್ತಿ ತುಂಬ ಸಂತೋಷದಿಂದ ಅವುಗಳನ್ನು ನೋಡುತ್ತಿದ್ದ. ಅವು ದೂರ ದೂರ ಹೋದಂತೆ ಅವನು ಮಾಲಿಯಾಂಗ್‌ಗೆ ಆಜ್ಞಾಪಿಸಿದ– "ತಡಮಾಡದೆ ಒಂದು ದೋಣಿ ಚಿತ್ರಿಸು! ಆ ಮೀನುಗಳನ್ನು ನೋಡಲು ನಾನು ಸಮುದ್ರದಲ್ಲಿ ಯಾನ ಮಾಡಬಯಸುತ್ತೇನೆ".

ಮಾಲಿಯಾಂಗ್ ಒಂದು ದೊಡ್ಡ ದೋಣಿಯನ್ನು ಚಿತ್ರಿಸಿದ. ಚಕ್ರವರ್ತಿ, ರಾಣಿ, ರಾಜಕುಮಾರರು, ರಾಜಕುಮಾರಿಯರು ಹಾಗೂ ಅನೇಕ ಮಂತ್ರಿಗಳು ಎಲ್ಲರೂ ಅದನ್ನೇರಿದರು. ಅನಂತರ ಒಂದೆರಡು ಸಲ ಕುಂಚವನ್ನಾಡಿಸಿ ಮಾಲಿಯಾಂಗ್ ಗಾಳಿಯನ್ನು ಚಿತ್ರಿಸಿದ. ಸುಂದರವಾದ ಅಲೆಗಳು ಸಾಗರದಲ್ಲಿ ಎದ್ದುವು. ದೋಣಿ ಮುಂದೆ ಸಾಗಿತು.

ಆದರೆ ಚಕ್ರವರ್ತಿಗೆ ದೋಣಿಯ ವೇಗ ತೀರ ನಿಧಾನವೆನಿಸಿತು. ದೋಣಿಯ ಮುಂಭಾಗದಲ್ಲಿ ನಿಂತು ಜೋರಾಗಿ ಕಿರುಚಿದ–

"ಗಾಳಿ ಜೋರಾಗಿ ಬೀಸಲಿ! ಜೋರಾಗಿ!

ಮಾಲಿಯಾಂಗ್ ತನ್ನ ಕುಂಚವನ್ನು ಇನ್ನಷ್ಟು ಬಲವಾಗಿ ಆಡಿಸಿದ. ಗಾಳಿ ಪ್ರಬಲವಾಯಿತು. ಸಮುದ್ರ ಉಗ್ರ ರೂಪ ತಾಳಿತು. ದೋಣಿ ಸಾಗರ ಮಧ್ಯಕ್ಕೆ ಸಾಗಿದಂತೆ ಬಿಳಿಯ ಪಟಗಳು ಎತ್ತರೆತ್ತರಕ್ಕೆ ಹಾರತೊಡಗಿದುವು.

ಮಾಲಿಯಾಂಗ್ ಇನ್ನೊಂದೆರಡು ಸಲ ಕುಂಚವನ್ನಾಡಿಸಿದ. ಸಮುದ್ರ ಭಯಂಕರವಾಗಿ ಮೊರೆಯ ತೊಡಗಿತು. ಭಾರಿ ಭಾರೀ ಅಲೆಗಳೆದ್ದುವು. ದೋಣಿ ಹಿಂದಕ್ಕೂ ಮುಂದಕ್ಕೂ ಆಡತೊಡಗಿತು.

"ಅಷ್ಟು ಗಾಳಿಸಾಕು! ಸಾಕು ಅಷ್ಟೇ"– ಚಕ್ರವರ್ತಿ ಗಂಟಲು ದೊಡ್ಡದು ಮಾಡಿ ಕಿರುಚಿದ.

ಆದರೆ ಮಾಲಿಯಾಂಗ್ ಅವನ ಮಾತಿಗೆ ಲಕ್ಷ್ಯಕೊಡಲೇ ಇಲ್ಲ. ಕುಂಚವನ್ನಾಡಿಸುವುದನ್ನು ಮುಂದುವರೆಸಿದ. ಸಮುದ್ರ ರುದ್ರಭಯಂಕರವಾಯಿತು. ಎತ್ತರದ ಅಲೆಗಳು ದೋಣಿಯ ಮೇಲುರುಳಿದುವು.

ಚಕ್ರವರ್ತಿ ಪೂರ್ತಿ ನೆನೆದುಹೋದ. ಪಟಸ್ತಂಭವನ್ನು ತಬ್ಬಿಕೊಂಡ. ಮಾಲಿಯಾಂಗನತ್ತ ತನ್ನ ಬಿಗಿದ ಮುಷ್ಟಿಯನ್ನು ತೋರಿಸಿ ಕಿರುಚುತ್ತಹೋದ.

ಮಾಲಿಯಾಂಗ್ ತನಗೇನೂ ಕೇಳಿಸುತ್ತಿಲ್ಲವೆಂಬಂತೆ ನಟಿಸಿದ. ಮತ್ತಷ್ಟು ಗಾಳಿಯನ್ನು ತರಿಸುತ್ತಾ ಹೋದ. ಪ್ರಬಲವಾದ ಚಂಡಮಾರುತ ಎಲ್ಲಿಂದಲೋ ಕಾರ್ಮೋಡಗಳನ್ನು ದಟ್ಟೈಸಿತು. ರೊಚ್ಚೆದ್ದ ರುದ್ರ ತೆರೆಗಳು ಎತ್ತರೆತ್ತರಕ್ಕೆ ಏರಿ ಒಂದಾದ ಮೇಲೊಂದು ದೋಣಿಯ ಮೇಲೆ ಅಪ್ಪಳಿಸಿದುವು. ಕಡೆಗೆ ದೋಣಿ ಅತ್ತಿತ್ತ ಹೊರಳಿ ತಲೆಕೆಳಗಾಗಿ ಸಾಗರತಳವನ್ನು ಸೇರಿತು. ಚಕ್ರವರ್ತಿ ಮತ್ತು ಅವನ ಮಂತ್ರಿಗಳು ಸಾಗರದಾಳವನ್ನು ಸೇರಿದರು.

ಚಕ್ರವರ್ತಿಯ ಮರಣಾನಂತರ ಮಾಲಿಯಾಂಗ್ ಮತ್ತು ಅವನ ಮಾಯಾಕುಂಚದ ಕತೆ ಎಲ್ಲೆಡೆ ಹಬ್ಬಿತು. ಆದರೆ ಮಾಲಿಯಾಂಗ್ ಏನಾದ? ಯಾರಿಗೂ ಖಚಿತವಾಗಿ ಗೊತ್ತಿಲ್ಲ. ಅವನು ತನ್ನ ಹಳ್ಳಿಗೆ ಹೊರಟುಹೋದ; ರೈತ ಮಿತ್ರರನ್ನು ಸೇರಿಕೊಂಡ ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಅವನು ತಾನು ಹೋದೆಡೆಯಲ್ಲೆಲ್ಲಾ ಬಡವರಿಗಾಗಿ ಚಿತ್ರಗಳನ್ನು ಚಿತ್ರಿಸುತ್ತ ಪ್ರಪಂಚವನ್ನೆಲ್ಲಾ ಸುತ್ತಿದ ಎಂದು ಹೇಳುತ್ತಾರೆ.

ಯಮನ ಸೋಲು

ಒಮ್ಮೆ ಹೀಗಾಯಿತು. ಯಮರಾಯನಿಗೆ ಲಿನ್-ಯೂ-ತಾಂಗನ ಮೇಲೆ ವಿಪರೀತ ಸಿಟ್ಟುಬಂತು. ಅವನನ್ನು ಹಿಡಿದುಕೊಂಡು ಬರಲು ಇಬ್ಬರು ಯಮದೂತರನ್ನು ಕಳುಹಿಸಿದ. ಒಬ್ಬಎತ್ತಿನ ರೂಪದಲ್ಲಿದ್ದ. ಇನ್ನೊಬ್ಬ ಕುದುರೆಯ ರೂಪದಲ್ಲಿದ್ದ ಹೊರಡುವುದಕ್ಕೆ ಮುನ್ನ ಅವರಿಬ್ಬರಿಗೂ ಹೇಳಬೇಕಾದ ಎಚ್ಚರಿಕೆಯ ಮಾತನ್ನು ಹೇಳುತ್ತ ಯಮ ಹೇಳಿದ– "ನೋಡಿ, ಹೋಗಿ ಹುಶಾರಾಗಿ ಕೆಲಸ ಮಾಡಿಕೊಂಡು ಬರಬೇಕು. ಧೂರ್ತ ಲಿನ್‌ಯೂತಾಂಗನ ಮೋಸಕ್ಕೆ ಒಳಗಾಗಕೂಡದು".

ಲಿನ್-ಯೂ-ತಾಂಗ್ ಬರೀ ಬುದ್ಧಿವಂತನಷ್ಟೇ ಅಲ್ಲ; ದೂರದರ್ಶಿಯೂ ಹೌದು. ತನ್ನನ್ನು ಹಿಡಿಯಲು ಇಬ್ಬರು ಯಮದೂತರು ಬರುತ್ತಿದ್ದಾರೆ ಎನ್ನುವ ವಿಷಯ ಅವನಿಗೆ ಗೊತ್ತಿತ್ತು. ಅವರಿಂದ ತನ್ನನ್ನು ಉಳಿಸಿಕೊಳ್ಳಲು ಮೊದಲೇ ಒಂದು ಉಪಾಯವನ್ನು ಯೋಚಿಸಿದ. ಬಹಳಷ್ಟು ಅಕ್ಕಿಯನ್ನು ಅಚ್ಚುಕಟ್ಟು ಮಾಡಿಸಿ ತನ್ನ ಹತ್ತಿರ ಇಟ್ಟುಕೊಂಡ. ಸ್ವಲ್ಪ ಹೊತ್ತಾದ ಮೇಲೆ ಯಮದೂತರು ಬಂದೇಬಿಟ್ಟರು.

ಯಮದೂತರು ಹೇಳಿದರು– "ಲಿನ್-ಯೂ-ತಾಂಗ್ ಏಳು ಮೇಲಕ್ಕೆ. ನಡಿ ನಮ್ಮ ಜೊತೆಯಲ್ಲಿ. ನಾವು ಯಮದೂತರು. ಯಮರಾಜ ನಮ್ಮನ್ನ ಕಳುಹಿಸಿದ್ದಾನೆ".

"ನೀವು ಬರುತ್ತಾ ಇದ್ದೀರಿ ಅಂತ ನನಗೆ ಮೊದಲೇ ಗೊತ್ತಿತ್ತು. ಅದರಿಂದಲೇ ನಾನು ಇಷ್ಟೆಲ್ಲ ಅಕ್ಕಿಯನ್ನು ಅಚ್ಚುಕಟ್ಟು ಮಾಡಿಸಿಟ್ಟಿದ್ದೀನಿ. ಇವನ್ನ ಬೀಸಿ, ದಾರಿಯಲ್ಲಿ ಹೋಗುವಾಗ ತಿನ್ನುವುದಕ್ಕೆ ರೊಟ್ಟಿ ಮಾಡಿಸಿಕೊಂಡು ತಗೊಂಡು ಬರ್ತೀನಿ".

" ಈ ಅಕ್ಕಿ ಬೀಸುವುದಕ್ಕೆ ನಿನಗೆ ಎಷ್ಟು ಹೊತ್ತು ಬೇಕಾಗುತ್ತೆ ?"

"ನಾನೊಬ್ಬನೇ ಬೀಸಿದರೆ ಕನಿಷ್ಠಪಕ್ಷ ಇಪ್ಪತ್ತು ವರ್ಷ ಆಗುತ್ತೆ "

"ಇಪ್ಪತ್ತು ವರ್ಷದತನಕ ನಾವು ನಿನ್ನನ್ನು ಕಾಯುವುದಕ್ಕೆ ಆಗುವುದಿಲ್ಲ".

" ಹಾಗದರೆ ನೀವೇ ಏನಾದರೂ ಒಂದು ಉಪಾಯ ಹೇಳಿ. ದೂರವೇನೋ ಸಾಕಷ್ಟಿದೆ. ಜೊತೆಯಲ್ಲಿ ಬುತ್ತಿ ಇಲ್ಲದೆ ದಾರಿಯಲ್ಲಿ ಹಸಿವಿನಿಂದ ಸಾಯ ಬೇಕೇನು ?"

ಸ್ವಲ್ಪಯೋಚನೆ ಮಾಡಿ ಪುನಃ ಹೇಳಿದ– "ನನ್ನನ್ನು ಆದಷ್ಟು ಬೇಗ ಯಮನ ಹತ್ತಿರಕ್ಕೆ ಕರೆದುಕೊಂಡು ಹೋಗಬೇಕಿದ್ದರೆ ಈ ಅಕ್ಕಿ ಬೀಸುವುದಕ್ಕೆ ಸಹಾಯ ಮಾಡಿ ".

ಯಮದೂತರೂ ಯೋಚನೆ ಮಾಡಿದರು. ತಾವಿಬ್ಬರೂ ಒಂದು ವೇಳೆ ಸಹಾಯ ಮಾಡಿದರೆ ಕೆಲಸ ಬೇಗ ಮುಗಿದು ಹೋಗುತ್ತೆ. ತಾವೂ ಬಹಳದಿನ ಕಾಯಬೇಕಾಗಿರುವುದಿಲ್ಲ. ಆದ್ದರಿಂದ ಇಬ್ಬರೂ ಅವನ ಮಾತಿಗೆ ಒಪ್ಪಿದರು. ಲಿನ್-ಯೂ-ತಂಗ್ ಇಬ್ಬರನ್ನೂ ಅಕ್ಕಿ ಬೀಸುವುದಕ್ಕೆ ಹಾಕಿದ. ಕೈಯಲ್ಲೊಂದು ದೊಡ್ಡ ಚಾವಟಿ ತೆಗದುಕೊಂಡು ಜೋರಾಗಿ ಚಾವಟಿ ಬೀಸಿ ಹೊಡೆಯುತ್ತ ರೇಗಿದ– " ಯಾಕೆ ನಿಧಾನವಾಗಿ ಬೀಸುತ್ತಾ ಇದ್ದೀರಿ. ಜೋರಾಗಿ ಬೀಸಿ ". ಇಬ್ಬರಿಗೂ ಪ್ರಾಣ ಹೋಗುವಂತಾಯಿತು.

ಇಬ್ಬರೂ ತಾಳಲಾರದೆ ಹೇಳಿದರು– " ಅಯ್ಯೋ ನಮ್ಮನ್ನು ಬಿಟ್ಟು ಬಿಡಿರಪ್ಪ. ನೀವು ಹೇಳಿದ ಹಾಗೇ ಇಪ್ಪತ್ತು ವರ್ಷದ ತನಕ ನಿಮ್ಮನ್ನು ಕಾಯುವುದಕ್ಕೆ ನಾವು ಸಿದ್ಧವಾಗಿದ್ದೀವಿ."

ಪುನಃ ಅವರ ಮೇಲೆ ಚಾವಟಿ ಚಲಾಯಿಸುತ್ತಾ ಹೇಳಿದ– " ಏನು ನೀವು ಹೇಳ್ತಿರೋದು ? ಯಮರಾಜ ತನ್ನ ಅಪ್ಪಣೆಯನ್ನು ಬೇಗ ಪಾಲಿಸದೆ ಇದ್ದರೆ ತುಂಬ ಕೋಪಿಸಿಕೊಳ್ತಾನೆ."

ಯಮದೂತರಿಬ್ಬರಿಗೂ ಬೆವರಿನ ಸ್ನಾನವಾಯಿತು. ಚಾವಟಿ ಏಟು ಬಿದ್ದಕೂಡಲೇ ಜೋರು ಜೋರಾಗಿ ಬೀಸುತ್ತಾ ಇದ್ದರು. ಅಕ್ಕಿ ಬೀಸುವುದರಲ್ಲೇ ಹಗಲೆಲ್ಲಾ ಕಳೆದುಹೋಯಿತು. ಲಿನ್-ಯೂ-ತಾಂಗನ ಚಾವಟಿ ಅವರ ಮೈಯ

ನ್ನೆಲ್ಲಾ ಛಿದ್ರಗೊಳಿಸಿತು. ಆದರೆ ಅಕ್ಕಿಯನ್ನು ಬೀಸಿದ್ದು ಎಲ್ಲೋ ಸ್ವಲ್ಪ ಮಾತ್ರ. ಯಮದೂತರಿಗೆ ವಿಪರೀತ ಗಾಬರಿಯಾಯಿತು. ಹೇಗಾದರೂ ಈ ಕಂಟಕದಿಂದ ಪಾರಾದರೆ ಸಾಕು ಎಂದಿದ್ದರು. ಊಟದ ಹೊತ್ತಿನಲ್ಲಿ ಸಮಯ ನೋಡಿ ಅಲ್ಲಿಂದ ಕಾಲುಕಿತ್ತರು. ಯಮನ ಹತ್ತಿರ ಹೋಗಿ ತಮಗಾದದ್ದೆಲ್ಲ ಹೇಳಿದರು. ಯಮನಂತೂ ತುಂಬ ಕೋಪಿಸಿಕೊಂಡ. ಈ ಸಲ ಯಮ ತನ್ನ ಬೋಳು ತಲೆಯ ದೂತನನ್ನು ಕಳುಹಿಸಿದ.

ಲಿನ್-ಯೂ-ತಾಂಗನಂತೂ ಹೇಗೂ ದೂರದರ್ಶಿ. ಈ ಬಕ್ಕತಲೆಯ ದೂತ ಬರುತ್ತಾನೆಂಬ ಸುದ್ದಿಯೂ ಮೊದಲೇ ಗೊತ್ತಿತ್ತು. ಬೇಗ ಹುಲ್ಲಿನಿಂದ ಒಂದು ಮನುಷ್ಯಾಕೃತಿಯನ್ನು ಮಾಡಿದ. ಅದರ ಮೇಲೆ ಚರ್ಮದ ಹೊದಿಕೆಯನ್ನು ಹೊದಿಸಿದ. ಅದರ ಮೇಲೆ ಆ ಆಕೃತಿಗೆ ಕಣ್ಣು, ಕಿವಿ, ಮೂಗು ಎಲ್ಲವನ್ನೂ ಮಾಡಿ ಥೇಟು ಒಬ್ಬ ಬಕ್ಕ ತಲೆಯ ಮನುಷ್ಯನಂತೆಯೇ ಕಾಣುವ ಹಾಗೆ ಮಾಡಿದ. ಆ ಮೇಲೆ ಒಂದಷ್ಟು ಮುಳ್ಳು, ಒಂದಷ್ಟು ಕೂದಲು ಇಟ್ಟು ಕೊಂಡು ಆ ಆಕೃತಿಯ ಹತ್ತಿರ ಕುಳಿತು ಕೊಂಡ.

ಯಮನ ಬಕ್ಕತಲೆಯ ದೂತ ಬಂದೇ ಬಂದ. ಬರುತ್ತಿದ್ದ ಹಾಗೆಯೇ ಗದರಿಕೊಂಡು ಹೇಳಿದ– "ಅಯ್ಯೋ ಚಂಡಾಲ! ನಡಿ ನನ್ನ ಜೊತೆ. ನೀನು ಅವೆಷ್ಟು ನಮ್ಮ ದೂತರನ್ನು ಹೊಡೆದಿರೋದು! ಅವರಿನ್ನೂ ಹಾಸಿಗೆ ಬಿಟ್ಟು ಮೇಲಕ್ಕೆದ್ದಿಲ್ಲ. ನನ್ನ ಹತ್ತಿರ ನಿನ್ನ ಆಟಗೀಟ ಏನೂ ನಡೆಯೋಲ್ಲ."

ಲಿನ್‌ಯೂತಾಂಗ್ ಹೇಳಿದ– "ಕಾಣ್ತಾ ಇಲ್ಲವೇನು ಕಣ್ಣಿಗೆ, ನಾನು ಈ ಬೋಡನಿಗೆ ಔಷಧಿ ಮಾಡ್ತಿರೋದು? ಈಗಲೇ ನನಗೆ ಪುರಸತ್ತಿಲ್ಲಿದೆ."

ಬೋಳುತಲೆಯ ಯಮದೂತ ನೋಡಿದ. ನಿಜವಾಗಿಯೂ ಲಿನ್ ಯೂತಾಂಗ್ ಕೈಯಲ್ಲೊಂದು ಮುಳ್ಳನ್ನೂ, ಕೂದಲನ್ನೂ ಹಿಡಿದುಕೊಂಡು ಒಬ್ಬ ಬೋಡನಿಗೆ ಚಿಕಿತ್ಸೆ ಮಾಡುತ್ತಾ ಇದ್ದಾನೆ. ಅವನಿಗೆ ಇವನ ವೈದ್ಯದ ಮೇಲೆ ನಂಬಿಕೆ ಬಂತು. ತನ್ನ ಬೋಳುತಲೆಯ ಮೇಲೆ ಒಂದು ಸಲ ಕೈಯಾಡಿಸಿ ಕೊಂಡ. ತಾನೂ ಏಕೆ ತನ್ನ ಬೋಳುತಲೆಗೆ ಇವನ ಕೈಯಲ್ಲಿ ಚಿಕಿತ್ಸೆ ಮಾಡಿಸಿ ಕೊಳ್ಳಬಾರದು. ಅನ್ನಿಸಿತು. ಮುಗುಳ್ನಗುತ್ತ ಲಿನ್‌ಯೂತಾಂಗನನ್ನು ಕೇಳಿದ– "ನನ್ನ ಬಕ್ಕತನವನ್ನು ಹೋಗುಸ್ತೀಯೇನು?"

“ ಖಂಡಿತವಾಗಿಯೂ ! ನಿಮ್ಮದಷ್ಟೇ ಏಕೆ, ಪ್ರತಿಯೊಬ್ಬ ಬಕ್ಕತಲೆ ಯುವನಿಗೂ ಕೂದಲು ಬೆಳೆಯೋ ಹಾಗೆ ಮಾಡ್ತೀನಿ.”

“ ಹಾಗಾದರೆ ನನಗೂ ಚಿಕಿತ್ಸೆ ಪ್ರಾರಂಭಿಸಿ ಬಿಡು. ಯಮರಾಜನಿಗೆ ನನ್ನನ್ನು ಕ್ಷಮಿಸಿಬಿಡುವುದಕ್ಕೆ ಹೇಳ್ತೀನಿ .”

“ಸರಿ ನಾನು ಸಿದ್ಧವಾಗಿದ್ದೀನಿ. ಆದರೆ ಒಂದೇ ಒಂದು ಷರತ್ತು. ನಾನು ಯುದ್ಧ ಮಾಡೋವಾಗ ನೀನು ಮಾತ್ರ ಒಂದು ಸ್ವಲ್ಪವೂ ಕಿರುಚಕೂಡದು. ಏನೇನಾದರೂ ಕಮುಕ್-ಕಿಮುಕ್ ಅಂದರೆ ಎಲ್ಲಾ ಹಾಳಾಗುತ್ತೆ ”.

“ ನಿಸ್ಸಂದೇಹವಾಗಿ. ನನ್ನ ಬಾಯಿಂದ ಏನೊಂದು ಸ್ವಲ್ಪವೂ ಶಬ್ದ ಬರೋದಿಲ್ಲ .”

“ ನನಗೆ ನಿನ್ನ ಮೇಲೆ ನಂಬಿಕೆ ಇಲ್ಲ ”. ಹುಲ್ಲಿನ ಆಕೃತಿಯ ಕಡೆ ಕೈ ತೋರಿಸಿ ಹೇಳಿದ– “ ಅವರಿಂದ ನಿನ್ನನ್ನೂ ಆ ಮನುಷ್ಯನ ಹಾಗೆಯೇ ಹಗ್ಗದಿಂದ ಕಟ್ಟಿ ಬಿಡ್ತೀನಿ. ಹೇಳು, ಸಿದ್ಧವಾಗಿದ್ದರೆ .”

“ ಓಹೋ ಅದಕ್ಕೇನಂತೆ ! ನನ್ನ ಬಕ್ಕತಲೆ ಸರಿಹೋಗೋದಾದರೆ ನೀನು ಹೇಗೆ ಹೇಳಿದರೆ ಹಾಗೆ ಕೇಳ್ತೀನಿ .”

ಲಿನ್‌ಯೂತಾಂಗ್ ಯಮದೂತನನ್ನು ಹಗ್ಗದಿಂದ ಭದ್ರವಾಗಿ ಬಿಗಿದು ಕಟ್ಟಿದ. ಅವನ ತಲೆಯ ಮೇಲೆ ಮುಳ್ಳಿನಿಂದ ಚುಚ್ಚಲು ಶುರು ಮಾಡಿದ. ಆಮೇಲೆ ಅವನ ತಲೆಯ ಮೇಲೆ ಉಪ್ಪಿನ ನೀರು ಸುರಿದ. ನೀರು ಬೀಳುತ್ತಿದ್ದ ಹಾಗೆಯೇ ಗಟ್ಟಿಯಾಗಿ ಕಿರುಚಿಕೊಳ್ಳಲು ಪ್ರಾರಂಭಿಸಿದ.

“ ನನ್ನನ್ನು ಬಿಟ್ಟುಬಿಡು ಲಿನ್‌ಯೂತಾಂಗ್. ಇನ್ನೊಂದು ಸಲ ನಿನ್ನನ್ನು ಹಿಡಿದುಕೊಂಡು ಬರುವ ಸಾಹಸಕ್ಕೆ ಕೈ ಹಾಕುವುದಿಲ್ಲ .”

ಬೋಳು ತಲೆಯ ದೂತ ಯಮಲೋಕಕ್ಕೆ ಓಡಿದ. ಈ ಸಲ ಕೆಟ್ಟ ಕಣ್ಣಿನ ದೂತನೊಬ್ಬ ಬರುತ್ತಾನೆ ಎಂಬುದನ್ನು ಲಿನ್‌ಯೂತಾಂಗ್ ತಿಳಿದ. ಒಂದಷ್ಟು ತವರವನ್ನು ಕಾಯಿಸಿ ಪಕ್ಕದಲ್ಲಿಟ್ಟುಕೊಂಡ. ಸ್ವಲ್ಪ ಹೊತ್ತಿನ ನಂತರ ಕೆಟ್ಟ ಕಣ್ಣಿನ ದೂತ ಬಂದ. ಲಿನ್‌ಯೂತಾಂಗನಿಗೆ ಹೇಳಿದ- “ಲಿನ್‌ಯೂತಾಂಗ್

ಒಳ್ಳೆ ಮಾತಿನಲ್ಲಿ ನೇರವಾಗಿ ಯಮಲೋಕಕ್ಕೆ ಹೊರಡು. ನಿನ್ನ ಮೋಸದ ಬಲೆಗೆ ನಾನು ಯಾವ ಥರದಲ್ಲೂ ಒಳಗಾಗುವಂಥವನಲ್ಲ."

"ಸ್ವಲ್ಪ ಉಸಿರಾಡುವುದಕ್ಕಾದರೂ ಅವಕಾಶ ಕೊಡು ಮಹರಾಯ. ಈಗ ತಾನೆ ಒಬ್ಬ ಮನುಷ್ಯನ ಕಣ್ಣಿಗೆ ಔಷಧಿ ಕೊಟ್ಟು ಬಂದಿದ್ದೀನಿ. ಅವನಿಗೆ ಮದ್ದು ಮಾಡಿದ ಮೇಲೆ ನನ್ನ ಹತ್ತಿರ ಇನ್ನೂ ಸ್ವಲ್ಪ ಔಷಧಿ ಉಳಿದಿದೆ. ಅದನ್ನು ಇನ್ಯಾರಾದರೂ ರೋಗಿಗೆ ಜೋಪಾನವಾಗಿ ಇಡಬೇಕು ಅಂತ ಇದ್ದೀನಿ."

ಯಮದೂತ ತುಂಬ ದೂರದಿಂದ ಬಂದಿದ್ದ. ಅದರಿಂದ ಅವನ ಕಣ್ಣುಗಳು ತುಂಬನೋಯುತ್ತಿದ್ದುವು. ತನ್ನ ಕಣ್ಣಿಗೆ ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೆ ಇದು ಒಳ್ಳೆಯ ಅವಕಾಶ ಎಂದು ಭಾವಿಸಿದ. ಲಿನ್‌ಯೂತಾಂಗನಿಗೆ ಹೇಳಿದ– "ನೋಡಣ್ಣ ಈ ಔಷಧಿಯಿಂದ ನನ್ನ ಕಣ್ಣಿಗೂ ಚಿಕಿತ್ಸೆ ಮಾಡಿದರೆ ಬಹಳ ಉಪಕಾರವಾಗುತ್ತೆ."

ಲಿನ್-ಯೂ-ತಾಂಗ್ ಇನ್ನೇನೂ ಬೇರೆ ವಿಧಿಯೇ ಇಲ್ಲವೇನೋ ಎಂಬಂತೆ– "ಆಯಿತು ಇದೊಂದಿಷ್ಟು ಔಷಧಿ ಇನ್ನೆಲ್ಲಿ ಇಡಲಿ? ಬಾ. ನಿನ್ನ ಕಣ್ಣನ್ನೇ ಸರಿಪಡಿಸಿ ಬಿಡೋಣ"– ಎಂದು ಹೇಳಿದ.

"ಈಗ ನೇರವಾಗಿ ಮಲಗಿಬಿಡು" ಎಂದು ಆ ದೂತನಿಗೆ ಹೇಳಿದ. ದೂತ ಕಣ್ಣುಗಳನ್ನು ಅರೆತೆರೆದಂತೆ ಮಾಡಿಕೊಂಡು ನೆಲದ ಮೇಲೆ ಮಲಗಿದ. ಲಿನ್‌ಯೂತಾಂಗ್ ತವರದ ನೀರನ್ನು ಅವನ ಕಣ್ಣಿನೊಳಕ್ಕೆ ಸುರಿದ. ಯಮದೂತ ಚೀರಿದ. ನೋವಿನಿಂದ ನೆಲದ ಮೇಲೆ ಅತ್ತಿತ್ತ ಉರುಳಾಡಿದ.

"ಲಿನ್-ಯೂ-ತಾಂಗ್ ನಾನು........ ನಿನಗೆ....... ನಾನು....... "

ಲಿನ್-ಯೂ-ತಾಂಗ್ ಗಹಗಹಿಸಿ ನಗುತ್ತಾ ಹೇಳಿದ– "ಹೆಚ್ಚಿಗೆ ಏನಾದರೂ ತಕರಾರು ಮಾಡಿದೆ ಅಂದ್ರೆ ಇದನ್ನು ನಿನ್ನ ಕಿವಿಯೊಳಕ್ಕೆ ಸುರಿದು ಬಿಡ್ತೀನಿ ನೋಡು."

ಯಮದೂತ "ಅಯ್ಯಯ್ಯೋ" ಎಂದು ಕಿರುಚುತ್ತಾ ಹೆದರಿ ಓಡಿ ಹೋದ.

ಯಮ ಈಗ ಅವನನ್ನು ಹಿಡಿದು ತರಲು ಮತ್ತೊಬ್ಬ ದೂತನನ್ನು ಕಳುಹಿಸಿದ. ಇವನು ಸಾಕಷ್ಟು ಬುದ್ಧಿವಂತ. ಗೋಡೆಯ ಸಂದಿನಲ್ಲಿ ಬೇಕಾದರೂ ನುಸುಳಿಕೊಂಡು ಬರಬಲ್ಲವನಾಗಿದ್ದ. ಲಿನ್-ಯೂ-ತಾಂಗನಿಗೆ ಇವನ ಸಮಾಚಾರವೂ ಪೂರ್ತಿ ಗೊತ್ತಿತ್ತು. ಅದರಿಂದ ಅವನನ್ನು ಎದುರುಗೊಳ್ಳಲು ಎಲ್ಲಾ ಸಿದ್ಧತೆಯನ್ನೂ ಪ್ರಾರಂಭಿಸಿದ. ತನ್ನ ಕೋಣೆಯ ಗೋಡೆಯಲ್ಲಿ ಒಂದು ರಂಧ್ರವೂ ಇರದಂತೆ ಮಾಡಿದ. ಆಮೇಲೆ ಒಂದು ಚರ್ಮದ ಚೀಲ ತಯಾರಿಸಿದ. ಯಮದೂತ ಬರುವುದನ್ನು ಕಾಯುತ್ತಾ ಕುಳಿತ.

ದೂತ ಹೊರಗಿನಿಂದ ಕೂಗಿದ– “ಏಯ್ ಲಿನ್-ಯೂ-ತಾಂಗ್! ಏಯ್ ಲಿನ್-ಯೂ-ತಾಂಗ್.”

“ಹೌದು, ಯಾರು ಬಂದಿರೋದು?” ಲಿನ್-ಯೂ-ತಾಂಗ್ ಕೇಳಿದ.

“ಬೇಗ ಹೊರಕ್ಕೆ ಬಾ. ನನ್ನ ಜೊತೆ ಯಮಪುರಿಗೆ ಹೊರಡು.”

“ಒಳಕ್ಕೆ ದಯಮಾಡಿಸಿ ಸ್ವಾಮಿ. ನಾನೇನು ಎಲ್ಲೂ ಓಡಿಹೋಗೋಲ್ಲ.”

“ಆದರೆ ಒಳಕ್ಕೆ ಬರೋಕ್ಕೆ ದಾರಿಯೇ ಇಲ್ಲವಲ್ಲ. ನಿನ್ನ ಕೋಣೆಯ ಯಾವ ಗೋಡೆಯಲ್ಲೂ ಒಂದು ಕಂಡಿಯೂ ಇಲ್ಲ.

ಆಯಿತು ಸ್ವಲ್ಪ ತಾಳಿ. ನೀವು ಬರೋಕೆ ಗೋಡೆಯಲ್ಲಿ ಒಂದು ಕಂಡಿ ಮಾಡಿ ಬಿಡ್ತೀನಿ.”

ಲಿನ್-ಯೂ-ತಾಂಗ್ ಒಂದು ಸೂಜಿಯನ್ನೂ ಒಂದು ಚರ್ಮದ ಚೀಲವನ್ನೂ ಹೊರಕ್ಕೆಳೆದುಕೊಂಡ. ಸೂಜಿಯಿಂದ ಕಿಟಕಿಗೆ ಹಾಕಿದ್ದ ಕಾಗದದ ಮೇಲೆ ಒಂದು ತೂತು ಮಾಡಿದ. ಚರ್ಮದ ಚೀಲದ ಬಾಯನ್ನು ಸರಿಯಾಗಿ ಆ ತೂತಿನ ನೇರಕ್ಕೆ ಹೊಂದಿಸಿದ. ಆ ಮೇಲೆ ಯಮದೂತನನ್ನು ಕರೆದ– “ಬನ್ನಿ ಈಗ ಒಳಕ್ಕೆ ಬಂದುಬಿಡಿ. ತಮಗೆ ಸುಸ್ವಾಗತ.”

ಯಮದೂತ ಕೂಡಲೇ ರಂಧ್ರದ ಮೂಲಕ ಒಳನುಗ್ಗಿದ. ಸರಿ ಇನ್ನೇನು! ಲಿನ್-ಯೂ-ತಾಂಗ್ ಅವನನ್ನು ಅದರಲ್ಲಿ ಹಿಡಿದು ಅನುವಿಸಿದ. ಚೀಲದ ಬಾಯನ್ನು ರೇಶ್ಮೆದಾರದಿಂದ ಕಟ್ಟಿಬಿಟ್ಟ. ಆಮೇಲೆ ಆಟದ ಮೈದಾನಕ್ಕೆ ಹೋದ. ಆ ಚೀಲವನ್ನು “ಫುಟ್ ಬಾಲ್” ಮಾಡಿಕೊಂಡು ಅಲ್ಲಿ ಆಟ

ವಾಡುತ್ತಿದ್ದ. ಹುಡುಗರ ಜೊತೆ ಆಡಲು ನಿಂತ. ಹಗಲೆಲ್ಲಾ ಆಟ ಸಾಗಿತು. ಲೆಕ್ಕವಿಲ್ಲದಷ್ಟು ಪೆಟ್ಟುಗಳು ಬಿದ್ದದ್ದರಿಂದ ಅವನು ಅರೆಜೀವವಾದ. ಆಡುತ್ತಾ ಆಡುತ್ತಾ ಹುಲ್ಲಿನ ಕೂಳೆ ಚುಚ್ಚಿಕೊಂಡು ಚೆಂಡಿನ ಚರ್ಮ ಹರಿಯಿತು. ಯಮದೂತ ತನ್ನ ಜೀವ ಉಳಿಸಿಕೊಂಡು ಓಡಿದ.

ಯಮರಾಜ ಕನಲಿ ಕೆಂಡವಾದ. ತನ್ನ ವಾನರದೂತನನ್ನು ಕರೆದು ಹೇಳಿದ– "ನೋಡು ಆ ಬದ್ಮಾಶ್ ಲಿನ್‌ಯೂತಾಂಗ್ ತುಂಬ ಕಿಲಾಡಿ. ಅವನ ಕುಚೇಷ್ಟೆಗಳಿಂದ ನಮ್ಮ ಕಡೆಯ ದೂತರು ಹೇಗೆ ಹೇಗೋ ಬದುಕಿ ಬಂದರು. ನೀನು ನನ್ನ ದೂತರಲ್ಲೆಲ್ಲಾ ಬಲು ಬುದ್ಧಿವಂತ. ಹೋಗು ಅವನನ್ನು ಹಿಡಿದುಕೊಂಡು ಬಾ."

ಯಮನ ವಾನರದೂತನಿಗೆ ಲಿನ್-ಯೂ-ತಾಂಗ್‌ನ ಮನೆಯ ದಾರಿ ಗೊತ್ತಿರಲಿಲ್ಲ. ಆದರಿಂದ ದಾರಿಯಲ್ಲಿ ಅವನ ಮನೆ ಎಲ್ಲಿದೆ ಎಂದು ವಿಚಾರಿಸಿ ಕೊಂಡು ಹೋಗುತ್ತಾ ಇದ್ದ. ಆಗ ಉರಿಬೇಸಿಗೆ. ಮಧ್ಯಾಹ್ನದ ಹೊತ್ತಿಗೆ ಅವನು ಬೆವರಿನ ಮುದ್ದೆಯಾದ. ಹಸಿವು ಮತ್ತು ಬಾಯಾರಿಕೆಯಿಂದ ಪ್ರಾಣ ಹೋಗುವ ಹಾಗೆ ಆಯಿತು. ದಾರಿಯಲ್ಲಿ ಎದುರುಗಡೆ ಒಂದು ಮರ ಕಾಣಿಸಿತು. ಮರದ ನೆರಳಿನಲ್ಲಿ ಒಬ್ಬ ಮನುಷ್ಯ ಕುಳಿತಿದ್ದ. ಅವನ ಪಕ್ಕದಲ್ಲಿ ಒಂದು ಬುಟ್ಟಿ ಇತ್ತು. ಅದರಿಂದ ಹಣ್ಣುಗಳನ್ನು ತೆಗೆದುಕೊಂಡು ತಿನ್ನುತ್ತಿದ್ದ. ಈ ಮಂಗನ ಬಾಯಲ್ಲಿ ನೀರೂರಿತು. ಹಣ್ಣುಗಳನ್ನು ನೋಡಿ ಅವನ ಹಸಿವು ಇನ್ನಷ್ಟು ಹೆಚ್ಚಾಯಿತು. ಈಗ ಏನಾದರೂ ಒಂದಿಷ್ಟು ಹೊಟ್ಟೆಗೆ ಹಾಕಿಕೊಳ್ಳದೆ ಮುಂದುವರೆಯುವುದು ಕಷ್ಟವಾಯಿತು. ಒಂದೆರಡು ಹಣ್ಣುಗಳನ್ನು ಹಾರಿಸಬೇಕು ಅಂದುಕೊಂಡ. ಅದಕ್ಕೋಸ್ಕರ ಅವನ ಹತ್ತಿರದಲ್ಲಿದ್ದ ಒಂದು ನುಣುಪಾದ ಕಲ್ಲಿನ ಮೇಲೆ ಆ ಅಪರಿಚಿತನ ಪಕ್ಕದಲ್ಲಿ ಹೋಗಿ ಕುಳಿತ. ಕುಳಿತುಕೊಳ್ಳುವಾಗ ಅವನಿಗೆ ಕಲ್ಲು ಸ್ವಲ್ಪ ಅಂಟಿಕೊಂಡ ಹಾಗೆ ಅನ್ನಿಸಿತು. ಅದರೆ ಅದನ್ನು ಅವನು ಲೆಕ್ಕಿಸಲಿಲ್ಲ. ಅವನಿಗೆ ಹಸಿವು ಹಿಂಗಿದರೆ ಸಾಕಾಗಿತ್ತು. ಆ ಮನುಷ್ಯ ಅವನಿಗೊಂದು ಹಣ್ಣು ಕೊಟ್ಟು ಅವನ ಜೊತೆ ಮಾತಿಗೆ ತೊಡಗಿದ. ಅವನು ಯಮದೂತನಿಗೆ ಹಣ್ಣು ಕೊಡುತ್ತಲೇ ಇದ್ದ. ಹಾಗೆಯೇ ಮಾತಾಡುತ್ತಲೂ ಇದ್ದ. ಮಾತು ಆಡುತ್ತಾ ಆಡುತ್ತಾ ಸಂಜೆಯಾಯಿತು. ಅವನು ಯಮದೂತನನ್ನು ಕೇಳಿದ– "ತಾವು ಎಲ್ಲಿಗೆ ಹೊರಟದ್ದೀರಿ."

"ಲಿನ್‌ಯೂತಾಂಗನನ್ನು ಹಿಡಿದುಕೊಂಡು ಬರೋಕೆ."

"ಯಾಕೆ ಅವನೇನಾದರೂ ತಪ್ಪು ಮಾಡಿದ್ದಾನೇನು ?"

"ಲಿನ್-ಯೂ-ತಾಂಗ್ ಯಮುನಿಗೆ ವಿರುದ್ಧವಾಗಿ ಹಂಚಿಕೆಗಳನ್ನು ಹೂಡುತ್ತಿದ್ದಾನೆ. ತನ್ನ ವಂಚನೆಯ ಆಟಗಳಿಂದ ಯಮದೂತರಿಗೆ ಬಲು ತೊಂದರೆ ಕೊಟ್ಟಿದ್ದಾನೆ. ಅದಕ್ಕೋಸ್ಕರವೇ ನಮ್ಮ ಯಮರಾಜರು ಅವನ ಮೇಲೆ ಸೇಡು ತೀರಿಸಿಕೊಳ್ಳಲು ಹಾತೊರೆಯುತ್ತಿದ್ದಾರೆ. ಅವರೇ ಅವನನ್ನು ಹಿಡಿದುಕೊಂಡು ಬರಲು ನನ್ನನ್ನು ಕಳುಹಿಸಿದ್ದಾರೆ. ನಿನಗೆ ಅವನು ಗೊತ್ತೇನು?"

ಆ ಮನುಷ್ಯ ದೀರ್ಘವಾಗಿ ನಿಟ್ಟುಸಿರು ಬಿಡುತ್ತಾ ಹೇಳಿದ- "ಓ! ಈಗ ಗೊತ್ತಾಯಿತು. ನಾನು ಭಾರೀ ತಪ್ಪು ಮಾಡಿದೆ. ಅದರಿಂದಲೇ ಯಮರಾಜನಿಗೂ ಅವನ ದೂತರಿಗೂ ನನ್ನನ್ನು ಕಂಡರೆ ಆಗೋದಿಲ್ಲ ಅಂತ ಚೆನ್ನಾಗಿ ಗೊತ್ತು ."

"ಎಲಾ ಇವನಾ ! ನೀನೇ ಏನು ಆ ಚಂಡಾಲ ಲಿನ್-ಯೂ-ತಾಂಗ್?"

"ಹೌದು ನಾನೇ ಲಿನ್-ಯೂ-ತಾಂಗ್."

"ಬಹಳ ಒಳ್ಳೇದೇ ಆಯಿತು. ಬೇಟೆ ತಾನಾಗಿಯೇ ಕೈಗೆ ಸಿಕ್ಕಿತು".

ವಾನರ ತನ್ನ ಚೂಪಾದ ಹಲ್ಲುಗಳನ್ನು ತೆರೆದುಕೊಂಡು ಅವನ ಮೇಲೆ ಬೀಳುವುದಕ್ಕೆ ಹೋದ. ಆದರೆ ಕಲ್ಲು ಬಿಟ್ಟು ಮೇಲೇಳಲು ಆಗಲೇ ಇಲ್ಲ. ಅದಕ್ಕೇ ಅಂಟಿಕೊಂಡು ಬಿಟ್ಟಿತು.

'ನಮಸ್ಕಾರ' ಎಂದು ಹೇಳಿ ಲಿನ್-ಯೂ-ತಾಂಗ್ ಹೊರಟುನಿಂತ. ವಾನರ ಒದ್ದಾಡತೊಡಗಿದ. ಲಿನ್-ಯೂ-ತಾಂಗ್ ಮೊದಲೇ ಅವನಿಗೆ ಗೊತ್ತಿಲ್ಲದ ಹಾಗೆ ಕಲ್ಲಿನ ಮೇಲೆ ಗೋಂದು ಅಂಟಿಸಿದ್ದ. ಅದರಿಂದ ಲಿನ್-ಯೂ-ತಾಂಗನನ್ನು ಹಿಡಿಯಲು ರಭಸದಿಂದ ತನ್ನೆಲ್ಲಾ ಶಕ್ತಿಬಿಟ್ಟು ಮೇಲಕ್ಕೆ ಎದ್ದಾಗ ಅವನ ದೇಹದ ಒಂದಿಷ್ಟು ಮಾಂಸ ಅಲ್ಲೇ ಕಲ್ಲಿಗೆ ಅಂಟಿಕೊಂಡಿತು. ಮಾಂಸ ಕಿತ್ತು ಬಂದದ್ದರಿಂದ ಅವನ ಮೈಯಲ್ಲಿ ಗಾಯವಾಯಿತು. ನೋವಿನಿಂದ ಸುತ್ತಲೂ ಕೈ ಕಾಲು ಬಡಿಯತೊಡಗಿದ. ಲಿನ್-ಯೂ-ತಾಂಗ್ ಹೇಳಿದ– "ಲೋ ನಿನಗೆ ಪ್ರಾಣದ ಮೇಲೆ ಆಸೆ ಇದ್ದರೆ ಮೊದಲು ಇಲ್ಲಿಂದ ಕಂಬಿ ಕೀಳು. ಸ್ವಲ್ಪ ತಡಮಾಡಿದರೂ ನಿನ್ನನ್ನು ಇಲ್ಲೇ ಮುಗಿಸಿಬಿಡ್ತೀನಿ."

ಆ ವಾನರ ಹೆದರಿ ಓಡಿದ.

ಯಮದೂತ ವಾನರನಿಗೂ ಚಳ್ಳೆಹಣ್ಣು ತಿನ್ನಿಸಿದ. ಲಿನ್-ಯೂ-ತಾಂಗ್ ಮನೆಗೆ ಬಂದ. ಮನಸ್ಸಿನಲ್ಲೇ ಯೋಚನೆ ಮಾಡಿದ– "ಯಮ ಕಳುಹಿಸಿದ ದೂತರನ್ನೆಲ್ಲ ನಾನು ಬಡಿದು ಕಳುಹಿಸಿದೆ. ಈ ಸಲ ಯಮ ಸ್ವತಃ ತಾನೇ ನನ್ನನ್ನು ಹಿಡಿಯಲು ಬರುತ್ತಿದ್ದಾನೆ. ಅವನಿಗೆ ಹೇಗೆ ಚಳ್ಳೆಹಣ್ಣು ತಿನ್ನಿಸುವುದು? ಅದರಿಂದ ಬೇಗ ಏನಾದರೂ ಉಪಾಯ ಯೋಚಿಸಬೇಕು". ಈ ಯೋಚನೆಯಲ್ಲಿ ಇರುವಾಗಲೇ ತನ್ನ ಬಡಕಲು ಹಸು ಅರಚಿದ್ದು ಕೇಳಿಸಿತು. ಈ ಯಮದೂತರ ಕಾಟದಲ್ಲಿ ಬಹಳ ದಿನ ಹಸುವಿಗೆ ಹುಲ್ಲು ನೀರನ್ನೂ ಕಾಣಿಸಲಿಲ್ಲ ಎಂಬುದು ನೆನಪಿಗೆ ಬಂತು. ಈ ಹಸುವಿನ ನೆಪದಲ್ಲೇ ಏಕೆ ಯಮನಿಗೆ ಟೋಪಿ ಹಾಕಬಾರದು ಎಂದು ಅನಿಸಿತು.

ಲಿನ್-ಯೂ-ತಾಂಗ್ ಕೂಡಲೇ ನೀರು ತಂದು ಚೆನ್ನಾಗಿ ಅದರ ಮೈ ತೊಳೆದ. ಕೊಳೆ ಎಲ್ಲ ಹೋದನೇಲೆ ಅದರ ಬೆನ್ನ ಮೇಲೆ ಒಂದು ಕೆಂಪು ಬಟ್ಟೆ ಹೊದಿಸಿದ. ಒಂದು ಸೊಗಸಾದ ಹೂವಿನ ಹಾರವನ್ನು ಅದರ ಕೊರಳಿಗೆ ಹಾಕಿದ. ಹಸುವಿಗೆ ಅಲಂಕಾರ ಮಾಡುವುದರಲ್ಲಿ ಅವನೇನೂ ಹಿಂದೆ ಬೀಳಲಿಲ್ಲ. ಆದರೂ ಒಂದು ಕೊರತೆ ಇತ್ತು. ಹಸು ಬಡಕಲಾಗಿತ್ತು. ಮೈ ತುಂಬಾ ಬರೀ ಮೂಳೆಯೇ ಕಾಣಿಸುತ್ತಿತ್ತು. ಅದನ್ನು ದಪ್ಪವಾಗಿ ಕಾಣುವಂತೆ ಮಾಡಲು ಅದರ ಹೊಟ್ಟೆಯ ತುಂಬ ಗಾಳಿ ತುಂಬಿದ. ಆಮೇಲೆ ಒಂದು ಒಳ್ಳೆಯ ಚಾವಟಿಯನ್ನೂ ಸಿದ್ಧ ಮಾಡಿದ. ಹೀಗೆ ಯಮನನ್ನು ಎದರುಗೊಳ್ಳಲು ಎಲ್ಲ ಸಿದ್ಧತೆಗಳನ್ನೂ ಮಾಡಿ ಮುಗಿಸಿದ.

ಸ್ವಲ್ಪ ಸಮಯದ ನಂತರ ಯಮ ತನ್ನ ಸೇನೆಯನ್ನೆಲ್ಲ ತೆಗೆದುಕೊಂಡು ಬಂದು ಲಿನ್-ಯೂ-ತಾಂಗನ ಮನೆಯನ್ನು ಮುತ್ತಿದ. ಹೊಸಿಲ ಮೇಲೆ ಕಾಲಿಡುತ್ತಿದ್ದಂತೆಯೇ ಯಮ ಗರ್ಜಿಸಿದ– "ಲಿನ್-ಯೂ-ತಾಂಗ್ ನನ್ನ ಕೈಯಿಂದ ತಪ್ಪಿಸಿಕೊಂಡು ಅದೆಲ್ಲಿ ಹೋಗ್ತೀಯ ಅಂತ ನಾನೂ ನೋಡ್ತೀನಿ. ನೀನು ನನ್ನ ದೂತರಿಗೆ ಅದೆಷ್ಟು ಕಿರುಕುಳ ಕೊಟ್ಟಿದ್ದು? ಬಡ ಮುಂಡೇವು ಅವು ಬದುಕಿ ಬಂದದ್ದೇ ಕಷ್ಟವಾಯಿತು. ಅದರಿಂದ ಇನ್ನೇನೂ ಬೇರೆ ದಾರಿ ಇಲ್ಲದೆ ನಾನೇ ಬರಬೇಕಾಯಿತು. ಈಗ ನನ್ನಮುಂದೆ ನಿನ್ನ ಬುದ್ಧಿವಂತಿಕೆಯನ್ನೆಲ್ಲಾ ಕಟ್ಟಿಡು."

ಲಿನ್-ಯೂ-ತಾಂಗ್ ಹಸುವಿನ ಹತ್ತಿರವೇ ಇದ್ದ. ಹೇಳಿದ– "ಪ್ರಭೂ ನನ್ನಂಥವನು ಎಲ್ಲಾದರೂ ಯಮರಾಜನ ವಿರೋಧ ಕಟ್ಟಿಕೊಳ್ಳೋದು ಅಂದ್ರೆ ಏನು ? ಅದು ಅಸಾಧ್ಯ. ಇದೇ ಈಗ ತಾನೆ ನಿಮ್ಮ ಹತ್ತಿರ ಕ್ಷಮೆ ಕೇಳುವುದಕ್ಕೆ ಹೊರಟಿದ್ದೆ. ಈಗ ಹೇಗೂ ತಾವೇ ದಯಮಾಡಿಸಿದ್ದೀರಿ. ಆದ್ದರಿಂದ ತಮ್ಮ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುತ್ತೀನಿ."

ಯಮರಾಯ ಹೇಳಿದ– " ನೀನು ಹೇಳಿದ್ದೇನೋ ಸರಿ. ಆದರೆ ನೀನು ನಮ್ಮ ಜೊತೆ ಹೇಗೆ ಬರ್ತೀಯ ?"

ಅವನು ಹೇಳಿದ– " ನಾನು ಈ ಹಸುವಿನ ಮೇಲೆ ಕೂತುಕೊಂಡು ಬರ್ತೀನಿ."

ಯಮ ನಗುತ್ತ ಹೇಳಿದ– "ನಾನು ಈ ದೈವೀ ಅಶ್ವದ ಮೇಲೆ ಬರ್ತೀನಿ. ಇದು ಸಾವಿರಾರು ಮೈಲಿ ದೂರವನ್ನು ಕೆಲವಾರು ನಿಮಿಷದಲ್ಲಿ ತಲುಪುತ್ತೆ. ನೀನು ಈ ಹಸುವಿನ ಮೇಲೆ ನನ್ನ ಸಮಕ್ಕೆ ಹೇಗೆ ಬರುತ್ತೀ?"

ಲಿನ್-ಯೂ-ತಾಂಗ್ ಹೇಳಿದ– "ನೀವು ನಿಮ್ಮ ಕುದುರೆಯ ಸಾಮರ್ಥ್ಯವನ್ನೇ ಕೊಚ್ಚಿಕೊಳ್ಳುತ್ತಿದ್ದೀರಿ. ನನ್ನ ಹಸುವಿನ ಗುಣಗಳು ನಿಮಗೆ ಗೊತ್ತಾಯಿತು ಅಂದರೆ ನೀವು ಅಬ್ಬಬ್ಬಾ ಅನ್ನುತ್ತೀರಿ. ಇದು ಸಾಮಾನ್ಯವಾದ ಹಸುವಲ್ಲ. ಸಾವಿರಾರು ಮೈಲಿ ಹೋಗುತ್ತೆ. ಓಡುವಾಗಲಂತೂ ವಾಯು ವೇಗವೇ. ನಿಮ್ಮ ಕುದುರೆ ಇದರ ಮುಂದೆ ಒಂದೆರಡು ಕ್ಷಣವೂ ನಿಲ್ಲಲ್ಲ. ನನ್ನ ಮಾತು ನಿಮಗೆ ತಮಾಷೆ ಅಂತ ಅನ್ನಿಸಬಹುದು. ನೋಡಿ, ನಿಮ್ಮ ಅನುಮಾನ ಬಗೆಹರಿಸ್ತೀನಿ." ಹಾಗೆಂದು ಹೇಳಿದ್ದೇ ತಡ ತನ್ನ ಮೊನಚಾದ ಚಾವಟಿ ಯಿಂದ ಅದರ ಬೆನ್ನಮೇಲೆ ಬಾರಿಸಿದ. ಚಾವಟಿ ಬೀಸುತ್ತಿದ್ದ ಹಾಗೆಯೇ ಹಸು ಮೇಲಕ್ಕೆ ನೆಗೆಯಿತು. ಕುಣಿಯುತ್ತ ಹೋಗಿ ದೂರ ನಿಂತುಕೊಂಡಿತು.

ನೋಡಲು ಮಜಬೂತಾಗಿ ಕಣ್ಣಿಗೆ ಅಲಂಕಾರವಾಗಿ ಇದ್ದ ಹಸು ಯಮರಾಜನ ಮನಸ್ಸಿಗೆ ಚೆನ್ನಾಗಿ ಹಿಡಿಸಿಬಿಟ್ಟಿತು. ಯೋಚನೆ ಮಾಡಿದ– "ನಾನು ಯಮಪುರಿಯ ರಾಜ. ತೀರ ಸಾಮಾನ್ಯವಾದೊಂದು ಕುದುರೆಯ ಮೇಲೆ ಸಂಚಾರ ಮಾಡ್ತೀನಿ. ಈ ಯಃಕಶ್ಚಿತ್ ಲಿನ್‌ಯೂ-ತಾಂಗ್ ಈ ಅಸಾಧಾರಣ ಹಸುವಿನ ಮೇಲೆ ಸವಾರಿಮಾಡ್ತಾನೆ". ಇದೇ ಯೋಚನೆಯಲ್ಲೇ ಅವನು

ಹೇಳಿದ- " ನನಗೆ ಅದೆಷ್ಟು ಕೆಲಸ ಇರುತ್ತೆ ಅನ್ನೋದು ನಿನಗೇ ಗೊತ್ತಲ್ಲಣ್ಣ. ನಿನ್ನ ಹಸುವನ್ನು ನನಗೊಂದು ವೇಳೆ ಕೊಟ್ಟರೆ ನನ್ನ ಕೆಲಸ ಹಗುರವಾಗುತ್ತೆ. ನಾವಿಬ್ಬರೂ ನಮ್ಮ ನಮ್ಮ ವಾಹನಗಳನ್ನು ಅದಲು ಬದಲು ಮಾಡಿಕೊಳ್ಳೋಣ."

ಲಿನ್-ಯೂ-ತಾಂಗ್ ಉದಾಸೀನ ಭಾವದಿಂದ ಹೇಳಿದ- " ಯಮ ರಾಜ ನೀವು ನನಗೆ ಅನ್ಯಾಯ ಮಾಡ್ತಿದ್ದೀರಿ. ಈ ಹಸು ನಮ್ಮಪ್ಪ ಅಜ್ಜಂದಿರ ಮರ್ಯಾದೆಯ ಸಂಕೇತ. ಆದರೆ ನೀವು ಆಜ್ಞೆ ಮಾಡಿದ ಮೇಲೆ ನಾನು ಏನು ತಾನೆ ಮಾಡೋಕಾಗುತ್ತೆ ? ಆದರೆ ನಿಮ್ಮಲ್ಲಿ ನನ್ನದೊಂದು ಪ್ರಾರ್ಥನೆ. ನನ್ನ ಶಿಕ್ಷೆಯನ್ನು ಕಡಿಮೆ ಮಾಡಬೇಕು."

" ಓಹೋ ಖಂಡಿತ ಮಾಡೋಣ. ಅದನ್ನೂ ಹೇಳಬೇಕೆ ?" ಹಾಗೆಂದು ಹೇಳುತ್ತಲೇ ಯಮ ಹಸುವಿನ ಹಗ್ಗವನ್ನು ಹಿಡಿಯಲು ಮುಂದು ವರಿದ. ಹಸು ಈ ಅಪರಿಚಿತ ವ್ಯಕ್ತಿಯನ್ನು ನೋಡುತ್ತಿದ್ದ ಹಾಗೆಯೇ ಬೆದರಿ ಅವನನ್ನು ಹಾಯಲು ಮುನ್ನುಗ್ಗಿತು. ಹೆದರಿಕೆಯಿಂದ ಯಮ ಅಲ್ಲೇ ನೆಲದ ಮೇಲೆ ಬಿದ್ದುಬಿಟ್ಟ.

ಲಿನ್-ಯೂ-ತಾಂಗ್ ಯಮರಾಜನನ್ನು ಎಬ್ಬಿಸುತ್ತ ಹೇಳಿದ- "ಏಳಿಏಳಿ. ಈ ಹಸು ಹೊಸಬರನ್ನು ಹತ್ತಿರ ಬಿಟ್ಟುಕೊಳ್ಳೋಲ್ಲ ಅಂತ ಹೇಳುವುದು ಮರೆತೆ. ಆದರಿಂದ ನಾವುಗಳು ವಾಹನ ಬದಲಾಯಿಸುವುದರ ಜೊತೆಗೇ ನಮ್ಮ ನಮ್ಮ ವೇಷವನ್ನೂ ಬದಲಾಯಿಸಬೇಕು."

ಯಮನಿಗೆ ಹೇಗಾದರೂ ಹಸುವನ್ನು ಪಡೆದುಕೊಳ್ಳಬೇಕು ಎನ್ನು ವುದು ಮನಸ್ಸಿನಲ್ಲಿತ್ತು. ಅದರಿಂದಲೇ ಅವನ ಈ ಮಾತಿಗೂ ಒಪ್ಪಿದ. ಇಬ್ಬರೂ ತಮ್ಮ ತಮ್ಮ ವೇಷಗಳನ್ನು ಬದಲಾಯಿಸಿಕೊಂಡರು. ಅಷ್ಟೇ ಅಲ್ಲ ಯಮ ರಾಜ ಲಿನ್-ಯೂ-ತಾಂಗನಿಗೆ ತನ್ನ ರಾಜ ಮುದ್ರೆಯನ್ನೂ ಕೊಟ್ಟುಬಿಟ್ಟ.

ಲಿನ್-ಯೂ-ತಾಂಗ್ ಯಮರಾಜನ ವೇಷ ಧರಿಸಿಕೊಂಡು ಅವನ ಕುದುರೆಯ ಬೆನ್ನೇರಿದ. ಯಮನ ಸೈನಿಕರಿಗೆ ಆಜ್ಞಾಪಿಸಿದ- " ನಡೀರಿ ಈಗ ನಾವು ಯಮಪುರಿಗೆ ಹೋಗೋಣ. ಲಿನ್-ಯೂ-ತಾಂಗ್ ನಿಮ್ಮ ವಶದಲ್ಲಿ ದಾನೆ. ನಮ್ಮ ಕೈಯಿಂದ ತಪ್ಪಿಸಿಕೊಂಡು ಅದಿನ್ನೆಲ್ಲಿ ಹೋಗ್ತಾನೆ?"

ಲಿನ್-ಯೂ-ತಾಂಗ್ ಯಮನ ಜೊತೆಯಲ್ಲಿ ಹೊರಟ. ಲಿನ್-ಯೂ-ತಾಂಗ್ ಕುದುರೆಯ ಮೇಲಿದ್ದ. ಯಮ ಹಸುವಿನ ಬೆನ್ನಮೇಲಿದ್ದ. ಹಳ್ಳಿಯಿಂದ ಹೊರಟು ಒಂದು ನದಿಯ ಹತ್ತಿರ ಹೋದರು. ಹಸು ಬಹಳ ಬಾಯಾರಿತ್ತು. ನೀರು ಕಣ್ಣಿಗೆ ಬಿದ್ದ ಕೂಡಲೇ ಬಾಯಗಲಿಸಿಕೊಂಡು ಆ ಕಡೆಗೆ ಓಡಿತು. ನದಿಯ ನೀರಿಗೆ ಬಾಯಿ ಚಾಚಿತು. ಲಿನ್-ಯೂ-ತಾಂಗ್ ಇಂಥ ಸಮಯವನ್ನೇ ಕಾಯುತ್ತಿದ್ದ. ತಕ್ಷಣ ಅವನ ಸೈನಿಕರಿಗೆ ಸೂಚನೆ ಕೊಟ್ಟ– "ನೋಡಿ ಅವನು ಕೂತಿರೋ ಹಸು ಸಾವಿರಾರು ಮೈಲಿಯನ್ನು ಕೆಲವೇ ನಿಮಿಷದಲ್ಲಿ ತಲುಪಿ ಬಿಡುತ್ತೆ. ಆದ್ದರಿಂದ ನಾವು ಅವನಿಗೋಸ್ಕರ ಕಾಯಬೇಕಾದ್ದಿಲ್ಲ. ಇನ್ನಷ್ಟು ವೇಗವಾಗಿ ಹೋಗಬೇಕು."

ಸೈನಿಕರೆಲ್ಲಾ ನೋಡಿದರು. ಇದು ಯಮನ ಆಜ್ಞೆ. ಅದನ್ನು ಧಿಕ್ಕರಿಸುವಷ್ಟು ಧೈರ್ಯ ಯಾರಿಗಿದೆ? ಆದರಿಂದ ಎಲ್ಲರೂ ಬೇಗ ಬೇಗ ಹೆಜ್ಜೆ ಹಾಕುತ್ತಾ ಮುಂದೆ ಸಾಗಿದರು. ಲಿನ್-ಯೂ-ತಾಂಗ್ ಸೈನಿಕರನ್ನು ಜೊತೆಯಲ್ಲಿ ಕರೆದುಕೊಂಡು ತನ್ನ ಕುದುರೆಯ ನಡಿಗೆಯನ್ನು ಇನ್ನಷ್ಟು ಚುರುಕುಗೊಳಿಸಿದ. ಸ್ವಲ್ಪಹೊತ್ತಿನಲ್ಲೇ ಅವರೆಲ್ಲರೂ ಕಣ್ಣಿಂದ ಮರೆಯಾದರು.

ಅರಮನೆಗೆ ಹೋದಮೇಲೆ ಯಮರಾಜ ಲಿನ್-ಯೂ-ತಾಂಗ್ ತನ್ನೆಲ್ಲ ದೂತರನ್ನೂ ಸೈನಿಕರನ್ನೂ ಕರೆಸಿ ಹೇಳಿದ– "ನೋಡಿ ಆ ಅರೆಜೀವವಾಗಿರುವ ಹಸುವಿನ ಮೇಲೆ ನಿಧಾನವಾಗಿ ಬದ್ಮಾಶ್ ಲಿನ್-ಯೂ-ತಾಂಗ್ ಬರ್ತಾ ಇದ್ದಾನೆ. ಅವನ ಮೇಲೆ ಸೇಡು ತೀರಿಸಿಕೊಳ್ಳೋಕೆ ನೀವೆಲ್ಲಾ ಸಿದ್ಧವಾಗಿರಿ. ಅವನು ಬರುತ್ತಿದ್ದ ಹಾಗೇ ಎಲ್ಲರೂ ಒಟ್ಟಿಗೆ ಅವನ ಮೇಲೆ ಬೀಳಬೇಕು.

ಎತ್ತಿನ ದೂತ, ಕುದುರೆಯ ದೂತ, ಬೋಳುತಲೆಯ ದೂತ ಮತ್ತು ವಾನರ ದೂತ ಮೊದಲಾದ ಎಲ್ಲ ಯಮದೂತರೂ ಇವನ ಮೇಲೆ ಸೇಡು ತೀರಿಸಿಕೊಳ್ಳಲು ಕಾದುಕೂತಿದ್ದರು. ಲಿನ್-ಯೂ-ತಾಂಗ್ ಸಿಕ್ಕಿಬಿಟ್ಟನೆಂಬ ಸಮಾಚಾರ ಕೇಳಿದ ತಕ್ಷಣ ಅವರೆಲ್ಲ ಸಂತೋಷದಿಂದ ಕುಣಿದಾಡಿದರು. ಎಲ್ಲರೂ ಅವನ ಮೇಲೆ ಸೇಡು ತೀರಿಸಿಕೊಳ್ಳಲು ದೊಣ್ಣೆ, ಕಲ್ಲು, ಕತ್ತಿ ಹಿಡಿದುಕೊಂಡು ನಿಂತರು.

ರಾತ್ರಿಯಾಯಿತು. ಎಲ್ಲೆಲ್ಲೂ ಕತ್ತಲು ಆವರಿಸಿತು. ಲಿನ್‌ಯೂ ತಾಂಗ್ ಇನ್ನೂ ಬರಲೇ ಇಲ್ಲ. ಎಲ್ಲರಿಗೂ ಯೋಚನೆಗಿಟ್ಟುಕೊಂಡಿತು. ಬಹುಶಃ ಯಮನಿಗೂ ಮೋಸಮಾಡಿರಬೇಕೆಂದುಕೊಂಡರು. ಅದೇ ಸಮಯಕ್ಕೆ ಸರಿಯಾಗಿ ಒಬ್ಬ ಮನುಷ್ಯ ಕಾಣಿಸಿದ. ಅವನ ಮೈಯೆಲ್ಲಾ ಕೆಸರಿನಿಂದ ತುಂಬಿತ್ತು. ಒಂದು ಮುದಿ ಹಸುವಿನ ಮೇಲೆ ಕೂತಿದ್ದ. ಹಸುವನ್ನು ಬಾರುಕೋಲಿನಿಂದ ಹೊಡೆಯುತ್ತ ನಿಧಾನವಾಗಿ ಬರುತ್ತಾ ಇದ್ದ. ಲಿನ್-ಯೂ-ತಾಂಗ್ ಯಮನ ಕಡೆ ಕೈ ತೋರಿಸಿ ಹೇಳಿದ-"ನೋಡ್ರಪ್ಪಾ ಲಿನ್-ಯೂ-ತಾಂಗ್ ಬಂದುಬಿಟ್ಟ. ಇವನ ಮೇಲೆ ನಿಮ್ಮ ಆಕ್ರೋಶ ತೀರಿಸಿಕೊಳ್ಳಿ. ಈ ಚಂಡಾಲ ಇನ್ನೆಲ್ಲೂ ತಪ್ಪಿಸಿಕೊಳ್ಳಕೂಡದು." ಯಮದೂತರು ಮತ್ತು ಸೈನಿಕರು ಗುಂಪು ಗುಂಪಾಗಿ ದೊಣ್ಣೆ, ಕಲ್ಲು, ಕತ್ತಿಗಳನ್ನು ತೆಗೆದುಕೊಂಡು ಯಮರಾಜನ ಮೇಲೆಬಿದ್ದರು. ಯಮರಾಜ ತನ್ನ ಪರವಾಗಿ ಏನನ್ನಾದರೂ ಹೇಳುವುದಕ್ಕೆ ಮುಂಚೆಯೇ ಮೃತನಾದ.

ಆಮೇಲೆ ಲಿನ್-ಯೂ-ತಾಂಗ್ ತಾನೇ ಯಮರಾಜನಾದ.

ದುರಾಶೆಯ ಫಲ

ಬಹಳ ಹಿಂದೆ ಚಾಂಗ್ ಜನಾಂಗಕ್ಕೆ ಸೇರಿದ ಒಬ್ಬ ಕಲ್ಲುಕುಟಿಗನಿದ್ದ. ಅವನು ತನ್ನ ಕಸುಬಿನಲ್ಲಿ ಅಸಾಧಾರಣ ನೈಪುಣ್ಯವನ್ನು ಹೊಂದಿದ್ದ. ಆ ಸುತ್ತಿನಲ್ಲಿ ಅವನು ಹೆಸರುವಾಸಿಯಾದ ಕಲ್ಲುಕುಟಿಗ.

ಒಂದು ದಿನ ಒಬ್ಬ ಸಾಹುಕಾರ ತನ್ನಲ್ಲಿ ಕಲ್ಲು ಒಡೆಯುವ ಕೆಲಸ ಇದೆ ಎಂದು ಹೇಳಿ ಕಳುಹಿಸಿದ. ಅಲ್ಲಿ ಹೋಗಿ ನೋಡಿದರೆ ಆ ಸಾಹುಕಾರನ ಭವ್ಯ ಭವನ ಕಣ್ಣಿಗೆ ಬಿತು. ಆ ಶ್ರೀಮಂತ ಒಳ್ಳೆ ಬೆಲೆಬಾಳುವ ಬಟ್ಟೆಗಳನ್ನು ತೊಟ್ಟಿದ್ದ. ರುಚಿಕರವಾದ ಭಕ್ಷ್ಯ ಭೋಜ್ಯಗಳೇ ಅವನ ದಿನನಿತ್ಯದ ಆಹಾರ. ಮನೆಯ ತುಂಬ ಆಳು-ಕಾಳುಗಳಿದ್ದರು. ಅವನ ಶ್ರೀಮಂತಿಕೆಯನ್ನು ಕಂಡ ಕಲ್ಲು ಕುಟಿಗನಿಗೆ ತೀರ ಅಸೂಯೆಯಾಯಿತು. ತನ್ನ ಕೆಲಸಕ್ಕೆ ಶರಣುಹೊಡೆದು ತಾನೂ ಅಂಥ ಶ್ರೀಮಂತನೇ ಆಗಬೇಕೆಂದು ಆಸೆಪಟ್ಟ.

ಅವನ ಮನಸ್ಸಿನ ಆಸೆಯನ್ನು ಕೇಳಿಸಿಕೊಂಡ ಒಬ್ಬ ಯಕ್ಷಿ ಅವನನ್ನು ಶ್ರೀಮಂತನನ್ನಾಗಿ ಮಾಡಿದಳು. ಕಲ್ಲುಕುಟಿಗನಿಗೋ ಹಿಡಿಸಲಾರದಷ್ಟು ಸಂತೋಷವಾಯಿತು.

ಕೆಲವು ದಿನಗಳನಂತರ ಒಬ್ಬ ಉನ್ನತ ದರ್ಜೆಯ ಅಧಿಕಾರಿ ತನಿಖೆಗಾಗಿ ಪ್ರವಾಸ ಹೊರಟ. ಅವನ ಕಡೆಯವರು ಅವನನ್ನು ಒಂದು ಪಲ್ಲಕ್ಕಿಯಲ್ಲಿ ಕೊಂಡೊಯ್ಯುತ್ತಿದ್ದರು. ಭಾರೀ ಘೋಷಣೆಗಳ ಮಧ್ಯೆ ಹೊಗಳುಭಟ್ಟರ ಪರಾಕಿನೊಡನೆ ತಂಬಟೆ, ನಗಾರಿ ಇತ್ಯಾದಿ ವಾದ್ಯ ಹಾಡುಗಳ ಸಮೇತ ಅವರು ಎಲ್ಲೆಡೆ ಅವನನ್ನು ಕರೆದೊಯ್ಯುತ್ತಿದ್ದರು. ಅವನು ಹೋದೆಡೆಯಲ್ಲೆಲ್ಲಾ ಜನರು ತಲೆಬಾಗಿ ನಮಸ್ಕಾರ ಮಾಡುತ್ತಿದ್ದರು. ತಾವಾಗಿಯೇ ದೂರಸರಿದು ಜಾಗ ಮಾಡಿಕೊಡುತ್ತಿದ್ದರು. ಆ ಅಧಿಕಾರಿ ಈ ಕಲ್ಲುಕುಟಿಗನ ಮನೆಯ ಮಾರ್ಗ

ವಾಗಿಯೇ ಹೋಗಬೇಕಿತ್ತು. ಅರ್ಧರಾತ್ರಿಯಲ್ಲಿ ಕೊಡೆಹಿಡಿಯುವ ಜಾತಿಗೆ ಸೇರಿದ್ದ ಕಲ್ಲುಕುಟಿಗ, ಒಮ್ಮೆಲೇ ಪ್ರಾಪ್ತವಾಗಿದ್ದ ಶ್ರೀಮಂತಿಕೆಯ ಗತ್ತಿನಿಂದ ಅಧಿಕಾರಿಗೆ ತಲೆಬಾಗಲು ನಿರಾಕರಿಸಿದ. "ನನಗೂ ಅವನಿಗಿರುವಷ್ಟೇ ಆಳು-ಕಾಳುಗಳಿದ್ದಾರೆ. ನಾನೇಕೆ ಅವನಿಗೆ ತಲೆಬಾಗಬೇಕು" ಎಂದ. ಅವನ ಉದ್ಧಟತನದಿಂದ ವಿಪರೀತ ಕೋಪಗೊಂಡ ಅಧಿಕಾರಿ ತನ್ನ ಆಳುಗಳಿಗೆ ಹೇಳಿ ಅವನನ್ನು ಹಗ್ಗದಿಂದ ಕಟ್ಟಿಹಾಕಿಸಿ ಹೊಡೆಸಿದ. ಅಷ್ಟಕ್ಕೇ ಬಿಡದೆ ದಂಡವನ್ನೂ ವಿಧಿಸಿದ.

ನೋವಿನಿಂದ ಹೇಗೋ ಮೇಲೆದ್ದ ಕಲ್ಲುಕುಟಿಗ ನಿಟ್ಟುಸಿರು ಬಿಡುತ್ತ ತನ್ನಲ್ಲೇ ಅಂದುಕೊಂಡ– "ಉನ್ನತ ದರ್ಜೆಯ ಅಧಿಕಾರಿಗಳೆಂದರೆ ನಿಜಕ್ಕೂ ನನ್ನಂಥ ಶ್ರೀಮಂತರಿಗಿಂತಲೂ ಹೆಚ್ಚು." ಆ ಕ್ಷಣದಿಂದಲೇ ಅವನಿಗೆ ತಾನೂ ಉನ್ನತ ಅಧಿಕಾರಿಯಾಗಬೇಕೆನಿಸಿತು.

ಮತ್ತೆ ಅವನ ಮನದ ಆಸೆಯನ್ನು ಕೇಳಿಸಿಕೊಂಡ ಯಕ್ಷಿ ಅವನನ್ನೊಬ್ಬ ಉನ್ನತಾಧಿಕಾರಿಯನ್ನಾಗಿ ಮಾಡಿದಳು. ಈ ಬದಲಾವಣೆಯಿಂದ ಅವನಿಗೆ ಎಲ್ಲಿಲ್ಲದ ಹಿಗ್ಗುಂಟಾಯಿತು.

ತಾನು ಹಿಂದೆ ಕಂಡಿದ್ದ ಅಧಿಕಾರಿಯನ್ನನುಕರಿಸಿ ಅವನೂ ತನ್ನ ಜಿಲ್ಲೆಯಲ್ಲಿ ಜನರೊಂದಿಗೆ ತುಂಬ ಒರಟಾಗಿ ವರ್ತಿಸಿದ. ಇದರಿಂದ ಜನರೆಲ್ಲ ಅವನಿಗೆ ವಿರೋಧಿಗಳಾದರು.

ಒಂದು ದಿನ ಅವನು ತನ್ನ ಸೇವಕನೊಂದಿಗೆ ಬೆಟ್ಟಗಡ್ಡಗಳ ಪ್ರದೇಶಕ್ಕೆ ಹೋದ. ಅಲ್ಲಿ ಸುಂದರ ತರುಣಿಯರ ತಂಡವೊಂದು ಅವರ ಕಣ್ಣಿಗೆ ಬಿತ್ತು. ಹಸಿದ ಹುಲಿ ಅಸಹಾಯಕ ಕುರಿಗಳ ಮೇಲೆ ಹರಿಹಾಯುವಂತೆ ಅವರಿಬ್ಬರೂ ಆ ತರುಣಿಯರ ಮೇಲೆ ಮುಗಿಬಿದ್ದರು. ಹುಡುಗಿಯರು ಸಹಾಯಕ್ಕಾಗಿ ಜೋರಾಗಿ ಕೂಗಿಟ್ಟರು. ಕಣ್ಣುಮಿಟುಕಿಸುವಷ್ಟರೊಳಗೆ ಚಾಂಗ್ ಜನಗಳ ಒಂದು ಭಾರೀ ಗುಂಪು ಕತ್ತಿ, ಕೊಡಲಿ, ಸಲಿಕೆಗಳನ್ನು ಹಿಡಿದು ಜೋರಾಗಿ ಕಿರುಚುತ್ತ ಎಲ್ಲ ಕಡೆಯಿಂದಲೂ ಧಾವಿಸಿದರು. ಅವರೆಲ್ಲ ಆ ಕಲ್ಲುಕುಟಿಗನನ್ನು ದರದರನೆ ಹಳ್ಳಿಗೆ ಎಳೆತಂದು ಹಣ್ಣುಗಾಯಿ ನೀರುಗಾಯಿ ಮಾಡಿದರು.

ಜನಗಳಿಂದ ಒದೆತ ತಿಂದಮೇಲೆ ಅವನ ಕುಕೃತ್ಯಗಳು ಕೊನೆಯಾದುವು. “ ಅಧಿಕಾರಿಗಳು ಎಷ್ಟೇ ದರ್ಪವುಳ್ಳವರಾದರೂ ಚಾಂಗ್ ರೈತರ ಮುಂದೆ ಅವರ ಬೇಳೆ ಬೆಯ್ಯುವುದಿಲ್ಲ” ಎಂದು ಪಶ್ಚಾತ್ತಾಪದಿಂದೆಂಬಂತೆ ಹೇಳಿಕೊಂಡ. ತಾನೂ ಚಾಂಗ್ ರೈತನಾಗಬೇಕೆಂದುಕೊಂಡ.

ಪುನಃ ಅವನ ಆಸೆಯನ್ನು ಅರಿತುಕೊಂಡ ಯಕ್ಷಿ ಅವನನ್ನು ಚಾಂಗ್ ರೈತನಾಗೆಂದು ಹೇಳಿದಳು. ಅವಳ ಮಾತಿನಂತೆ ಚಾಂಗ್ ರೈತನಾಗಿ ಸಂತಸ ವನ್ನು ತಾಳಿದ.

ದಿನವೂ ತನ್ನ ಆಳುಗಳೊಂದಿಗೆ ಗುಡ್ಡದ ಕಡೆ ಹೋಗುತ್ತಿದ್ದ. ಬೆಳಗಿನಿಂದ ಸಂಜೆಯವರೆಗೂ ಹೊಲ ಉಳುವುದು, ಬೀಜಬಿತ್ತುವುದು ಇವೇ ಮುಂತಾದ ಕೆಲಸಗಳಲ್ಲಿ ತೊಡಗಿರುತ್ತಿದ್ದ. ಆಗ ಬೇಸಿಗೆ. ಸೂರ್ಯ ಬೆಂಕಿಯ ಚೆಂಡಾಗಿದ್ದ. ಬಿಸಿಲಿನ ತಾಪಕ್ಕೆ ಮೈಸುಡುತ್ತಿತ್ತು. ತಲೆತಿರುಗು ಬರಿಸುವಂಥ ಬಿಸಿಲುಅದು. ಅದನ್ನು ಸಹಿಸುವುದು ಮನುಷ್ಯ ಮಾತ್ರನಾದವನ ತಾಳಿಕೆಗೆ ಮೀರಿದ್ದು. ಬಿಸಿಲಿನ ಝಳಕ್ಕೆ ಹೆದರಿ ಹಕ್ಕಿ ಪಕ್ಷಿಗಳು, ಕಾಡುಪ್ರಾಣಿಗಳು ಗವಿಗಳಲ್ಲಿ ಅಡಗಿಕೊಳ್ಳುತ್ತಿದ್ದುವು. ಎಮ್ಮೆಗಳಂತೂ ಕುತ್ತಿಗೆಯವರೆಗೂ ಕೊಚ್ಚೆ ನೀರಿನಲ್ಲಿ ಮುಳುಗಿರುತ್ತಿದ್ದುವು. ಹೊಳೆಯುವ ಬತ್ತದ ಪೈರು ಮಾತ್ರ ಚಾಂಗ್ ಜನಗಳಂತೆ ಸೋಲದೆ ತಲೆಯೆತ್ತಿ ನಿಂತಿದ್ದುವು. ಇದನ್ನು ಕಂಡ ಕಲ್ಲುಕುಟಿಗನಿಗೆ ಸೂರ್ಯನೇ ಜಗತ್ತನ್ನಾಳುವ ಮಹಾಶಕ್ತಿ ಎನಿಸಿತು. ತಾನೂ ಸೂರ್ಯನಾಗುವ ಕನಸು ಕಾಣತೊಡಗಿದ.

ಅವನ ಬಯಕೆಯನ್ನು ಕೇಳಿಸಿಕೊಂಡ ಯಕ್ಷಿ ಅವನನ್ನು ಆಕಾಶದಲ್ಲಿ ಒಬ್ಬ ಸೂರ್ಯನನ್ನಾಗಿ ಮಾಡಿದಳು. ಎಲ್ಲರೂ ಭಯಭೀತರಾಗುವಂತೆ ಅವನು ತನ್ನ ಪ್ರಚಂಡ ಕಿರಣಗಳನ್ನು ಬೀರತೊಡಗಿದ.

ಆ ಸಮಯಕ್ಕೆ ಪಶ್ಚಿಮದ ಕಡೆಯಿಂದ ತೇಲುತ್ತ ಬಂದ ಒಂದು ದಟ್ಟ ಮೋಡ ಸೂರ್ಯನನ್ನು ಪೂರ್ತಿ ಮರೆಮಾಡಿತು. ಆಗ ಕಲ್ಲುಕುಟಿಗ ನಿಟ್ಟುಸಿರುಬಿಟ್ಟ. “ ಯಾರು ಬಲ್ಲರು; ದಟ್ಟನೆಯ ಕಪ್ಪು ಮೋಡ ಸೂರ್ಯನಿಗಿಂತಲೂ ಬಲವಾದದ್ದು ಅಂತ.”

ಈಗ ಅವನು ತಾನೂ ಒಂದು ಕಪ್ಪು ಮೋಡವಾಗಬೇಕೆಂದು ಬಯಸಿದ. ಕೂಡಲೇ ಯಕ್ಷಿ ಅವನಾಸೆಯನ್ನು ಪೂರೈಸಿದಳು. ಮರುಕ್ಷಣದಲ್ಲೇ ಅವನು ಆಕಾಶದಲ್ಲಿ ತೇಲುವ ಒಂದು ಕಪ್ಪು ಮೋಡವಾಗಿದ್ದ.

ಆಗ ಇದ್ದಕ್ಕಿದ್ದಂತೆ ಎಲ್ಲಿಂದಲೋ ಬಲವಾದ ಬಿರುಗಾಳಿ ಬೀಸಿ ಆ ಮೋಡವನ್ನು ದಿಕ್ಕಾಪಾಲಾಗಿ ಚದುರಿಸಿ ಬಿಟ್ಟಿತು. "ಈ ಗಾಳಿ ಇಷ್ಟು ಶಕ್ತಿಶಾಲಿ ಅಂತ ನನಗೆ ಗೊತ್ತೇ ಇರಲಿಲ್ಲವಲ್ಲ" ಎಂದು ನಿರಾಶನಾಗಿ ಉಸಿರುಗರೆದ. "ಈ ಗಾಳಿಯ ಅವಾಂತರದಲ್ಲಿ ನನಗೆ ಇರಲು ಎಡೆಯೇ ಇರುವುದಿಲ್ಲ. ನನ್ನನ್ನೂ ಪ್ರಚಂಡ ಮಾರುತನನ್ನಾಗಿ ಮಾಡು" ಎಂದು ಮೊರೆಯಿಟ್ಟ.

ಆಗಲೂ ಯಕ್ಷಿ ಅವನ ಸಹಾಯಕ್ಕೆ ಬಂದಳು. ಉತ್ತರ ಕ್ಷಣದಲ್ಲೇ ಅವನು ಬಿರುಗಾಳಿಯಾದ.

ಕಲ್ಲುಕುಟಿಗ ಚಂಡಮಾರುತವಾಗಿ ನುಗ್ಗಿದ. ಆ ಗಾಳಿಯ ಹೊಡೆತಕ್ಕೆ ಮರಗಳೆಲ್ಲ ಬುಡಸಮೇತ ಉರುಳಿಬಿದ್ದುವು. ಮನೆಗಳು ನೆಲಸಮವಾದುವು, ಹೀಗೆ ಭಯಂಕರವಾಗಿ ಬೀಸಿದ.

ಆದರೆ ಭೂಮಿಯ ಮೇಲೆ ಹಾದುಹೋದಾಗ ಒಂದು ಭಾರೀ ಬಂಡೆ ಗಾಳಿಯನ್ನು ತಡೆದು ನಿಸಿಲ್ಲಿತು. ಎಷ್ಟೇ ಬಲವಾಗಿ ಬೀಸಿದರೂ ಬಂಡೆ ಒಂದಿಷ್ಟೂ ಚಲಿಸಲಿಲ್ಲ. ಕಲ್ಲುಕುಟಿಗ ತನ್ನಲ್ಲೇ ಯೋಚಿಸಿದ– ಓಹೋ ಎಂಥ ಬಿರುಗಾಳಿಯಾದರೂ ಬಂಡೆಯನ್ನೇನೂ ಮಾಡಲಾರದು! ನಾನೂ ಒಂದು ಬಂಡೆಯಾಗಿದ್ದಿದ್ದರೆ ಯಾರೂ ನನಗೆದುರೇ ಇರುತ್ತಿರಲಿಲ್ಲ."

ಆ ಕೂಡಲೇ ಯಕ್ಷಿಯ ಕೃಪೆಯಿಂದ ಎತ್ತರವಾದ ಪರ್ವತವೊಂದರ ಮೇಲೆ ಒಂದು ಭಾರೀ ಬಂಡೆಯಾದ. ಈಗ ಅವನಿಗೆ ಯಾರೊಬ್ಬರ ಪೀಡೆಯ ಭಯವೂ ಇರಲಿಲ್ಲ.

ಕೆಲ ಕಾಲಾನಂತರ, ಅವನು ಬಂಡೆಯಾಗಿ ನಿಂತಿದ್ದ ಆ ಪರ್ವತದ ತುದಿಗೆ ಕೆಲವು ಕಲ್ಲುಕುಟಿಗರು ಬಂದರು. ಅವರು ಈ ಬೃಹತ್ ಬಂಡೆಯನ್ನು ಕಂಡರು. ತಮ್ಮ ಕೆಲಸಕ್ಕೆ ಈ ಬಂಡೆ ಹೇಳಿಮಾಡಿಸಿದ್ದು ಎಂದು ಕಂಡುಕೊಂಡು

ಅದನ್ನು ಒಡೆಯತೊಡಗಿದರು. ಗಾಬರಿಗೊಂಡ ಕಲ್ಲುಕುಟಿಗ ತನ್ನನ್ನು ಕಾಪಾಡಬೇಕೆಂದು ಯಕ್ಷಿಗೆ ಮೊರೆಯಿಟ್ಟ "ನೀನು ಮೊದಲಿನಂತಿರುವುದೇ ಒಳ್ಳೆಯದು" ಎಂದು ಹೇಳಿದಳು. ಸರಿ; ಅವನು ಮೊದಲಿನ ಕಲ್ಲುಕುಟಿಗನೇ ಆದ.

ಅಂದಿನಿಂದ ತನ್ನ ಕೆಲಸದಲ್ಲಿ ಎಂದೂ ಇಲ್ಲದ ನಿಷ್ಠೆಯಿಂದ ದುಡಿಯ ಹತ್ತಿದ. ತನ್ನ ಕಸುಬಿನಲ್ಲಿ ಇನ್ನಷ್ಟು ನೈಪುಣ್ಯವನ್ನೂ ಪ್ರಗತಿಯನ್ನೂ ಸಾಧಿಸಿದ. ಜನಗಳೂ ಈ ಕೆಲಸಕ್ಕೆ ಅವನನ್ನೇ ಹೆಚ್ಚು ಹೆಚ್ಚು ಕರಿಯ ತೊಡಗಿದರು. ಕಾಲ ಕಳೆದಂತೆ ಅವನು ತುಂಬ ಹೆಸರುವಾಸಿಯಾದ. ಆ ಊರಿನಲ್ಲಿ ಅವನನ್ನು ಎಲ್ಲರೂ ತುಂಬ ಗೌರವಿಸುತ್ತಿದ್ದರು.

ಗುರುವಿಗೆ ತಿರುಮಂತ್ರ

ಒಂದಾನೊಂದು ಕಾಲದಲ್ಲಿ ಬೆಟ್ಟದ ಗವಿಯಲ್ಲಿ ಒಂದು ಹುಲಿ ವಾಸವಾಗಿತ್ತು. ಅದೊಂದು ಬಲಿಷ್ಠ ಹುಲಿ. ಆದರೆ ಅದಕ್ಕೆ ಒಂದಿಷ್ಟೂ ಚಾಕಚಕ್ಯತೆ ಇರಲಿಲ್ಲ. ಇದರಿಂದಾಗಿ ಪ್ರಾಣಿಗಳನ್ನು ಹಿಡಿಯುವುದು ಅದಕ್ಕೆ ತುಂಬ ಕಷ್ಟವಾಗಿತ್ತು.

ಒಂದು ದಿನ ಅದು ಆಹಾರಕ್ಕಾಗಿ ತನ್ನ ಗುಹೆಯಿಂದ ಹೊರಬಿತ್ತು. ಹಾಗೆ ಹೋಗುತ್ತಿದ್ದಾಗ ದಾರಿಯಲ್ಲಿ ಒಂದು ಬೆಕ್ಕು ಬೆಟ್ಟದ ಮೇಲಿನಿಂದ ತನ್ನ ಕಡೆಗೇ ಇಳಿದು ಬರುತ್ತಿರುವುದನ್ನು ಕಂಡಿತು. ಬೆಕ್ಕಿನ ಚುರುಕಿನ ನಡಿಗೆಯನ್ನು ಕಂಡು ಹುಲಿಗೆ ಅಸೂಯೆಯಾತು. ಮನಸ್ಸಿನಲ್ಲೇ– " ನಾನೂ ಆ ಬೆಕ್ಕಿನಷ್ಟೇ ಚತುರನಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದುಕೊಂಡಿತು. ಅದು ಬೆಕ್ಕಿನ ಹತ್ತಿರ ಹೋಗಿ– " ಗುರುಗಳೇ ನನಗೂ ನಿಮ್ಮಷ್ಟೇ ಸಲೀಸಾಗಿ ಬೆಟ್ಟ ಹತ್ತುವುದನ್ನು ಕಲಿಸಿಕೊಡ್ತೀರಾ- " ಎಂದು ಕೇಳಿಕೊಂಡಿತು.

ಈ ಹುಲಿಗಳ ಹೃದಯ ಒಳ್ಳೆಯದಲ್ಲ ಎಂದು ತಿಳಿದಿದ್ದ ಬೆಕ್ಕು ತನಗೆ ಗೊತ್ತಿರುವುದನ್ನೆಲ್ಲಾ ಇದಕ್ಕೆ ಹೇಳಿಕೊಟ್ಟುಬಿಟ್ಟರೆ ತನ್ನ ಪ್ರಾಣಕ್ಕೇ ಸಂಚಕಾರ ಬರಬಹುದು ಎಂದು ಭಾವಿಸಿತು. ಆದ್ದರಿಂದ ಅದು ತಲೆಯೊಗೆಯುತ್ತ ತುಂಬ ಅನುಮಾನದಿಂದ ಹೇಳಿತು– " ನನಗೆ ಅದೆಲ್ಲ ಅಷ್ಟೇನೂ ಚೆನ್ನಾಗಿ ಗೊತ್ತಿಲ್ಲ. ನಾನು ಒಂದು ವೇಳೆ ಹೇಳಿಕೊಟ್ಟರೆ ನೀನು ಅದನ್ನು ನನ್ನ ವಿರುದ್ಧವೇ ಬಳಸೋದಿಲ್ಲ ಅಂತ ಹೇಗೆ ಗೊತ್ತು ?

ಹುಲಿ ಬಹು ವಿಧೇಯನೆಂಬಂತೆ ವರ್ತಿಸಿತು. ಬೆಕ್ಕಿಗೆ ಸಾಷ್ಟಾಂಗ ನೆರಗಿತು. " ಪೂಜ್ಯ ಗುರುಗಳೇ, ನಾನು ಕೊಟ್ಟ ಮಾತಿನಂತೆ ನಡೆಯುವವನು. ನೀವು ದಯಮಾಡಿ ನನಗೆ ಹೇಳಿಕೊಟ್ಟರೆ ನಿಮ್ಮ ಒಳ್ಳೆಯತನಕ್ಕೆ ನಾನು ಎರಡು

ಬಗೆಯುವುದಿಲ್ಲ. ಆಮೇಲೆ ಯಾರಾದರೂ ನಿಮ್ಮನ್ನು ಪೀಡಿಸಿದ್ದೇ ಆದರೆ, ಅಂಥ ವರನ್ನು ನಾನು ಹಿಸುಗಿ ಹಾಕಿ ಬಿಡುತ್ತೇನೆ."

ಹುಲಿಯು ಈ ಜೇನಿನಂಥ ಮಾತುಗಳಿಗೆ ಮರುಳಾದ ಬೆಕ್ಕಿಗೆ ಅದರ ಬಗ್ಗೆ ಸಹಾನುಭೂತಿ ಉಂಟಾಯಿತು. ಒಪ್ಪಿಗೆಯ ಸೂಚಕವಾಗಿ ತಲೆಗುಣುಕು ಹಾಕಿ– "ಹಾಗೇ ಆಗಲಿ: ನೀನು ಅಷ್ಟು ಭರವಸೆ ಕೊಟ್ಟದ್ದೇ ಆದರೆ, ನನಗೆಂದೂ ಖಂಡಿತ ದ್ರೋಹ ಬಗೆಯುವುದಿಲ್ಲ ಎಂದಾದರೆ ನಾನು ನಿನಗೆ ಕಲಿಸಿ ಕೊಡುತ್ತೇನೆ " ಎಂದು ಹೇಳಿತು.

ಹುಲಿಗೆ ಹಿಡಿಸಲಾರದಷ್ಟು ಹಿಗ್ಗುಂಟಾಯಿತು. ಅದು ತನ್ನ ಬಾಲ ವಲ್ಲಾಡಿಸಿ ಬೆಕ್ಕಿನ ಮುಂದೆ ಮಂಡಿಯೂರಿ ಹೇಳಿತು– "ಇನ್ನು ಮುಂದೆ ಬೆಟ್ಟ ಹತ್ತುವ, ಪ್ರಾಣಿಗಳನ್ನು ಹಿಡಿಯುವ ಕಲೆಯನ್ನೆಲ್ಲಾ ಕರಗತ ಮಾಡಿಕೊಂಡ ಮೇಲೆ ನಿಮ್ಮನ್ನೆಂದೂ ಮರೆಯುವುದಿಲ್ಲ ಗುರುಗಳೇ. ಹಾಗೇನಾದರೂ ಒಂದು ವೇಳೆ ನಾನು ನಿಮ್ಮ ವಿಷಯದಲ್ಲಿ ಕ್ರೂರನಾಗಿ ವರ್ತಿಸಿದ್ದೇ ಆದರೆ ನಾನೆಲ್ಲಾದರೂ ಪರ್ವತದ ಆಳವಾದ ಕಂದರಕ್ಕೆ ಬಿದ್ದು ಸಾಯುವಂತಾಗಲಿ."

ಕೆಲವು ಕಾಲದವರೆಗೂ ಅದು ತನ್ನ ಮಾತನ್ನುಳಿಸಿಕೊಂಡಿತು. ಬೆಕ್ಕಿನ ವಿಷಯಕ್ಕೆ ಹುಲಿ ಒಬ್ಬ ವಿಧೇಯ ಶಿಷ್ಯ ಗುರುವಿನ ಹತ್ತಿರ ಹೇಗೆ ನಡೆದುಕೊಳ್ಳ ಬೇಕೋ ಹಾಗೆ ನಡೆದುಕೊಂಡಿತು. ಪ್ರತಿದಿನ ಬೆಕ್ಕು ಬೆಳಗಿನಿಂದ ಸಂಜೆಯ ವರೆಗೂ ತನ್ನ ಶಿಷ್ಯನಿಗೆ ವಿದ್ಯೆಕಲಿಸಲು ಸಾಧ್ಯವಾದಷ್ಟೂ ಯತ್ನಿಸಿತು. ಬಹು ಬೇಗ ಹುಲಿಗೆ ಒಂದನ್ನು ಬಿಟ್ಟು ಉಳಿದೆಲ್ಲ ತಂತ್ರಗಳನ್ನೂ ಹೇಳಿಕೊಟ್ಟಿತು. ಹುಲಿಗಂತೂ ಅತ್ಯಂತ ಹರ್ಷವಾಯಿತು. ತನ್ನ ಗುರುವಾದ ಬೆಕ್ಕಿನ ಬಗೆಗೂ ತುಂಬ ತೃಪ್ತಿಯುಂಟಾಯಿತು.

ಒಂದು ದಿನ ಇನ್ನೂ ಬಾಕಿ ಉಳಿದಿರುವುದನ್ನೆಲ್ಲಾ ಕಲಿಯಲು ತನ್ನ ಗುರುವಿನ ಹತ್ತಿರ ಬಂತು. ಆಗ ಬೆಕ್ಕಿನ ದಷ್ಟಪುಷ್ಟವಾದ ದೇಹವನ್ನು ನೋಡಿ ಅದರ ಬಾಯಲ್ಲಿ ನೀರೂರಿತು. "ಅದು ತನಗೆ ಎಂಥ ಸೊಗಸಾದ ಭೋಜನ ವಾದೀತು!" ಎನಿಸಿತು. ಆದರೆ ಬೆಕ್ಕಿಗೆ ಅದರ ಈ ದುರುದ್ದೇಶದ ಅರಿವಿತ್ತು. ಹುಲಿಯನ್ನು ಪರೀಕ್ಷಿಸಿ ನೋಡಬೇಕೆಂದು ನಿಶ್ಚಯಿಸಿತು.

ಹುಲಿಗೆ ಹೇಳಿತು– "ನನಗೆ ಗೊತ್ತಿರುವುದನ್ನೆಲ್ಲಾ ನಿನಗೆ ಹೇಳಿ ಕೊಟ್ಟಿದ್ದೇನೆ. ನೀನು ಇನ್ನೇನೂ ಕಲಿಯಬೇಕಾದ್ದಿಲ್ಲ."

ಹುಲಿ ತಾನು ಕಾಯುತ್ತಿದ್ದ ಅವಕಾಶ ಒದಗಿ ಬಂತು ಎಂದುಕೊಂಡಿತು. "ಓಹ್!" ಎಂದು ಮನದಲ್ಲೇ ಉದ್ಗರಿಸಿತು. "ಈ ಕೊಬ್ಬಿದ ಬೆಕ್ಕು ನನ್ನ ಪಂಜ ದಿಂದ ಇನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ." ಎಂದುಕೊಂಡಿತು. ಬೆಕ್ಕು ಹೇಳಿಕೊಟ್ಟಿದ್ದನ್ನು ತಾನು ತಪ್ಪಾಗಿ ಗ್ರಹಿಸಿಲ್ಲವೋ ಹೇಗೆ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಬೆಕ್ಕನ್ನು ಕೇಳಿತು– "ಪೂಜ್ಯ ಗುರುಗಳೇ ನೀವು ನನಗೆ ಎಲ್ಲ ವನ್ನೂ ಕಲಿಸಿದ್ದೀರಿ ಅಂತ ನಿಮಗೆ ಖಚಿತವಾಗಿ ಗೊತ್ತುತಾನೆ."

"ಓಹೋ! ಎಲ್ಲ ಕಲಿಸಿದ್ದೀನಿ."

ಹುಲಿಯ ಬುದ್ಧಿಗೆ ಒಂದು ಉಪಾಯ ಹೊಳೆಯಿತು. ಅದರ ಕಣ್ಣು ಗಳು ಮಿಂಚಿದುವು. ಬೆಕ್ಕನ್ನು ಕುರಿತು– "ಗುರುಗಳೇ ಅದೇನು ಈ ಮರದ ಮೇಲಿರೋದು?"

ಆ ಕಡೆ ನೋಡಲು ಬೆಕ್ಕು ತನ್ನ ಕತ್ತನ್ನು ಹೊರಳಿಸುತ್ತಿದ್ದಂತೆಯೇ ಹುಲಿ ತನ್ನ ದಾಡೆಯನ್ನು ಅಗಲವಾಗಿ ತೆರೆಯುತ್ತಾ ಪಂಜಗಳನ್ನು ಅರಳಿಸುತ್ತ ಬೆಕ್ಕಿನ ಮೇಲೆ ಎರಗಿತು. ಆದರೆ ಬೆಕ್ಕು ಅಷ್ಟೇ ವೇಗದಲ್ಲಿ ಓಡಿ ಮರವನ್ನು ಏರಿತು.

ಬೆಕ್ಕು ಮರದ ಮೇಲೆ ಕುಳಿತು ಸಿಟ್ಟಿನಿಂದ ಹೇಳಿತು– "ಓ ಹೀಗೋ ಸಮಾಚಾರ! ಕೃತಘ್ನ ಮುಂಡೇದೆ! ನಿನ್ನ ಮಾತಿಗೆ ಚಿಕ್ಕಾಸಿನ ಬೆಲೆಯೂ ಇಲ್ಲ. ನಿನಗೆ ಮರ ಹತ್ತುವುದನ್ನು ಹೇಳಿಕೊಡದೆ ಬುದ್ಧಿವಂತಿಕೆ ಮಾಡಿದ್ದು ನನ್ನ ಅದೃಷ್ಟ ಅಂತ ಹೇಳಬೇಕು. ಅದನ್ನೇನಾದರೂ ಹೇಳಿಕೊಟ್ಟಿದ್ದರೆ ಇದು ವರೆಗೆ ನನ್ನನ್ನು ನೀನು ತಿಂದು ಹಾಕಿ ಬಿಡ್ತಿದ್ದೆ."

ಹುಲಿಗೋ ಅಸಾಧ್ಯವಾದ ಕೋಪ. ಸಿಟ್ಟಿನಿಂದ ಮರದ ಬುಡದಲ್ಲಿ ನೆಗೆದಾಡ ತೊಡಗಿತು. ಆದರೆ ಮರ ಹತ್ತುವುದು ಅದಕ್ಕೆ ಗೊತ್ತಿರಲಿಲ್ಲ. ಮರವನ್ನು ಸಿಗಿದುಹಾಕಲು ನೋಡಿತು. ಆದರೆ ಅದರ ಕಾಂಡ ಬಹಳ ದಪ್ಪ

ವಾಗಿತ್ತು. ಹೀಗಾಗಿ ಹಲ್ಲು ಕಾಂಡದಲ್ಲಿ ನಾಟಲೇ ಇಲ್ಲ. ಬೆಕ್ಕು ಕೊಂಬೆಯಿಂದ ಕೊಂಬೆಗೆ ಕುಪ್ಪಳಿಸುತ್ತಾ ಆಗೊಮ್ಮೆ ಈಗೊಮ್ಮೆ ಹುಲಿಯನ್ನು ಅಣಕಿಸುತ್ತಾ ಇತ್ತು. ಹುಲಿಗೆ ಸಿಟ್ಟೇರುತ್ತಾ ಹೋಯಿತು. ಆದರೆ ಏನು ಮಾಡಲೂ ಸಾಧ್ಯ ವಿರಲಿಲ್ಲ. ಕಟ್ಟ ಕಡೆಗೆ ಬೆಕ್ಕು ಸುಲಭವಾಗಿ ಮರದಿಂದ ಮರಕ್ಕೆ ಹಾರಿ ಹುಲಿಯ ಕಣ್ಣಿಂದ ಮರೆಯಾಯಿತು.

ಹುಲಿಯ ದುರುದ್ದೇಶಗಳೆಲ್ಲ ವ್ಯರ್ಥವಾದುವು. ಈಗ ಮಾಡಬಹುದಾಗಿದ್ದ ಕೆಲಸವೆಂದರೆ ಬಂದದಾರಿಗೆ ಸುಂಕವಿಲ್ಲದಂತೆ ಮರಳಿ ಬೆಟ್ಟವನ್ನೇರುವುದು.

—oOo—

ಇಬ್ಬರು ಸೋದರರು

ಬಹಳ ಹಿಂದಿನ ಮಾತು. ಒಂದೂರಿನಲ್ಲಿ ಇಬ್ಬರು ಅಣ್ಣ ತಮ್ಮಂದಿರಿದ್ದರು. ಅಣ್ಣನ ಹೆಸರು ಲಾಂಗ್. ತಮ್ಮನ ಹೆಸರು ಚಿಕ್ಕಲಾಂಗ್. ಎಳವೆಯಲ್ಲೇ ಅವರು ತಮ್ಮ ಅಪ್ಪ ಅಮ್ಮನನ್ನು ಕಳೆದುಕೊಂಡು ಅನಾಥರಾಗಿದ್ದರು. ಅವರ ಹತ್ತಿರ ಅವರ ತಂದೆ ತಾಯಿಗಳ ಆಸ್ತಿಯಾಗಿ ಇದ್ದದ್ದು; ಕೆಲಸಕ್ಕೆ ಬಾರದ ಒಂದೇ ಒಂದು ತುಂಡು ಜಮೀನು, ಒಂದು ಎತ್ತು ಮತ್ತು ಒಂದು ಕಂದುಬಣ್ಣದ ನಾಯಿ ಇಷ್ಟು ಮಾತ್ರ. ಇದರ ಹೊರತು ಅವರ ಹತ್ತಿರ ಇನ್ನೇನೂ ಇರಲಿಲ್ಲ.

ಅಣ್ಣ ಕೆಲಸದಲ್ಲಿ ತುಂಬಾ ಸೋಮಾರಿ. ಹೊಲದಲ್ಲಿ ಕೆಲಸ ಮಾಡುವುದಕ್ಕೆ ಬದಲು ಇಡೀ ದಿನ ಮನೆಯಲ್ಲೇ ಬಿದ್ದಿರುತ್ತಿದ್ದ. ಇದರಿಂದ ಎತ್ತನ್ನು ನೋಡಿಕೊಳ್ಳುವ, ಹೊಲ ಉಳುವ ಕೆಲಸವೆಲ್ಲಾ ತಮ್ಮನ ತಲೆಯ ಮೇಲೇ ಬೀಳುತ್ತಿತ್ತು.

ಒಂದು ದಿನ ಅಣ್ಣನ ಮನಸ್ಸಿಗೊಂದು ಕೆಟ್ಟ ಯೋಚನೆ ಬಂತು. ತಮ್ಮನ ಹತ್ತಿರ ಹೇಳಿದ- "ಯಾರ ಮಕ್ಕಳೇ ಆಗಲಿ, ವಯಸ್ಸಿಗೆ ಬಂದ ಕೂಡಲೇ ತಮ್ಮೆಲ್ಲಾ ಆಸ್ತಿಯನ್ನು ಪಾಲು ಮಾಡಿಕೊಳ್ಳುತ್ತಾರೆ. ನಾವಿಬ್ಬರೂ ಈಗ ವಯಸ್ಸಿಗೆ ಬಂದಿದ್ದೀವಿ. ಆದ್ದರಿಂದ ನಾವೂ ನಮ್ಮ ಆಸ್ತಿಯನ್ನು ಪಾಲುಮಾಡಿಕೊಂಡು ಬೇರೆ ಬೇರೆ ಇರೋಣ. ಆಗ ತಮ್ಮ ಹೇಳಿದ– "ನಾವಿಬ್ಬರೂ ಜೊತೆ ಜೊತೆಯಲ್ಲೇ ತುಂಬಾ ಚೆನ್ನಾಗಿಯೇ ಇರುತ್ತಾ ಇದ್ದೀವಲ್ಲ. ನಾವಿಬ್ಬರೂ ಬೇರೆ ಬೇರೆ ಆಗೋ ಅಂಥ ಅವಶ್ಯಕತೆಯಾದರೂ ಏನು." ಆದರೆ ಅಣ್ಣ ಸಿಟ್ಟುಮಾಡಿಕೊಂಡು ಹೇಳಿದ– "ನಾನು ನಿನಗೆ ಸ್ಪಷ್ಟವಾಗಿ ಹೇಳ್ತಿದ್ದೀನಿ. ಇನ್ನು ಮೇಲೆ ನಮ್ಮ ಬದುಕು ಒಂದು ದಿನವೂ ಹೀಗೆ ನಡೆಯುವುದಕ್ಕೆ ಸಾಧ್ಯವಿಲ್ಲ. ನಾನು ನಿನಗೆ ದಿನವೂ ಅಡಿಗೆ ಮಾಡಿ ಹಾಕುತ್ತಾ ಇದ್ದೀನಿ. ನೀನು ಯಾವಾಗ ಅಡಿಗೆ ಸಿದ್ಧವಾಗುತ್ತೋ ಅಂತ ಕಾಯ್ತಾ ಇರುತ್ತೀಯ. ನಾನು ಇನ್ನು ಒಂದು ದಿನವೂ ಈ ಕೆಲಸ ಮಾಡಲಾರೆ."

ಅಣ್ಣನನ್ನು ಒಪ್ಪಿಸಲು ತಮ್ಮನ ಕೈಯಲ್ಲಿ ಆಗಲಿಲ್ಲ. ಇಬ್ಬರೂ ಬೇರೆಯಾದರು. ಅಣ್ಣ ಉಪಾಯದಿಂದ ಜಮೀನಿನ ಒಳ್ಳೆಯ ಭಾಗವನ್ನೂ ಎತ್ತನ್ನೂ ತಾನು ಇಟ್ಟುಕೊಂಡ. ತಮ್ಮನಿಗೆ ಬರಡು ಭೂಮಿಯೂ ನಾಯಿಯೂ ದೊರೆತುವು.

ಆ ಚಿಕ್ಕ ಆಸ್ತಿ ಪಾಲಾಗಿಹೋಯಿತು. ಆದರೆ ಅಣ್ಣನ ಸೋಮಾರಿತನವೇನೂ ಕಡಿಮೆಯಾಗಲಿಲ್ಲ. ಅವನ ಎತ್ತು ಹೊಟ್ಟೆಗಿಲ್ಲದೆ ದಿನದಿನಕ್ಕೆ ಬಡವಾಗುತ್ತಾ ಹೋಯಿತು. ಆದರೆ ಅವನು ಮಾತ್ರ ಜಪ್ಪಯ್ಯ ಎನ್ನಲಿಲ್ಲ. ಕೊನೆಗೆ ಅದು ತೀರ ಪ್ರಯಾಸದಿಂದ ತಟ್ಟಾಡಿಕೊಂಡು ನಡೆದಾಡುವ ಸ್ಥಿತಿಗೆ ಬಂತು. ಇತ್ತ ತಮ್ಮನಾದರೋ ಸುಖವಾಗಿ ಜೀವನ ಮಾಡುತ್ತಿದ್ದ. ಅವನು ತನ್ನ ನಾಯಿಗೆ ಹೊಟ್ಟೆತುಂಬ ಹಾಕುತ್ತಿದ್ದ. ದಿನವೂ ಸೌದೆ ತರಲು ಬೆಟ್ಟಕ್ಕೆ ಹೋಗುವಾಗ ನಾಯಿಯನ್ನೂ ಜೊತೆಗೆ ಕರೆದೊಯ್ಯುತ್ತಿದ್ದ. ಇದರಿಂದ ಅವನ ನಾಯಿ ದಷ್ಟಪುಷ್ಟವಾಗಿತ್ತು.

ಬೇಸಿಗೆಯಲ್ಲಿ ಹೊಲ ಉಳುವ ಕಾಲ ಬಂದಾಗ ಚಿಕ್ಕ ಲಾಂಗನಿಗೆ ತುಂಬಾ ಯೋಚನೆಗಿಟ್ಟುಕೊಂಡಿತು. ಕಾರಣ ಅವನ ಹತ್ತಿರ ಎತ್ತು ಇರಲಿಲ್ಲ. ಇದೇ ಚಿಂತೆಯಲ್ಲೇ ಊಟವನ್ನೂ ಬಿಟ್ಟ.

ಒಂದು ದಿನ ಇದೇ ಯೋಚನೆಯಲ್ಲಿ ಒಲೆಯ ಮುಂದೆ ತೂಕಡಿಸುತ್ತ ಕುಳಿತಿದ್ದಾಗ ಅವನ ನಾಯಿ ಹತ್ತಿರ ಬಂದು ಬೊಗಳತೊಡಗಿತು. ಚಿಕ್ಕಲಾಂಗ್ ಕಕ್ಕಾಬಿಕ್ಕಿಯಾಗಿ ಎದ್ದು ಕುಳಿತ. ಸಲಿಕೆಯನ್ನೂ ಗುದ್ದಲಿಯನ್ನೂ ಹೆಗಲಿಗೆ ಹಾಕಿಕೊಂಡು ಹೊಲದ ಕಡೆ ಹೊರಟ. ಸ್ವಲ್ಪ ಹೊತ್ತು ಕೆಲಸ ಮಾಡಿ ಆಯಾಸಗೊಂಡು ಅಲ್ಲಿಯೇ ಏದುತ್ತಾ ಕುಳಿತ. ನಾಯಿ ಮತ್ತೆ ಅವನ ಕಡೆಯೇ ತಿರುಗಿ ಬೊಗಳತೊಡಗಿತು. ಆಗ ಚಿಕ್ಕಲಾಂಗ್ ನಾಯಿಯನ್ನು ಕುರಿತು– "ನನ್ನ ಮುದ್ದು ಕೆಂಚ, ನೀನು ಯಾಕೆ ಬೊಗಳ್ತೀ? ನೀನು ನನ್ನ ಹೊಲ ಉಳ್ತೀಯಾ?"

ನಾಯಿ ನೇಗಿಲನ್ನು ಹೊತ್ತು ನಡೆಯುತ್ತಿದೆಯೋ ಎಂಬಂತೆ ಹೊಲದಲ್ಲೆಲ್ಲಾ ಅತ್ತಿತ್ತ ಅಡ್ಡಾಡಿತು. ಇದರಿಂದ ತಮ್ಮನು ತನ್ನ ಮುದ್ದುನಾಯಿಯನ್ನು ಹೊಲ ಉಳಲು ಎತ್ತಿನ ಹಾಗೆ ಬಳಸಬೇಕೆಂದು ತೀರ್ಮಾನಿಸಿದ. ನಾಯಿಗೆ ಎಳೆದಾಡಲು ಅನುಕೂಲವಾದ ಒಂದು ಚಿಕ್ಕ ನೇಗಿಲನ್ನು ಮಾಡಿಕೊಂಡು ದಿನವೂ ಹೊಲ ಉಳತೊಡಗಿದ.

ತಮ್ಮನ ಹೊಲ ಚೆನ್ನಾಗಿ ಉಕ್ಕೆಯಾಗಿರುವುದನ್ನು ನೋಡಿ ಅಣ್ಣನಿಗೆ ಎಲ್ಲಿಲ್ಲದ ಆಶ್ಚರ್ಯವಾಯಿತು. ಆಗ ಅವನು ತಮ್ಮನನ್ನು ಕೇಳಿದ- "ನಿನ್ನ ಹೊಲವನ್ನು ಉತ್ತವರು ಯಾರು?"

"ನಾನೇ ಸ್ವತಃ ಉತ್ತಿದ್ದೀನಿ."

"ನೀನು ಎತ್ತನ್ನು ಎಲ್ಲಿಂದ ತಂದೆ?"

"ನನ್ನ ಹತ್ತಿರ ಇದೆಯಲ್ಲ ನನ್ನ ಮುದ್ದುನಾಯಿ; ಅದರ ಸಹಾಯದಿಂದಲೇ ಉತ್ತಿದ್ದೀನಿ."

ನಾಯಿ ಹೊಲ ಉತ್ತಿದೆ ಎಂಬ ಮಾತನ್ನು ಕೇಳಿ ಅವನಿಗೆ ಇನ್ನಷ್ಟು ಆಶ್ಚರ್ಯವಾಯಿತು. ನಾಯಿ ಹೊಲ ಉಳುತ್ತದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ತಮ್ಮನಿಂದ ಅದನ್ನು ಕೆಲವು ದಿನದ ಮಟ್ಟಿಗೆ ಎರವಲು ಪಡೆದ.

ಆದರೆ ಅಣ್ಣನ ಹೊಲದಲ್ಲಿ ನಾಯಿ ಒಂದು ಹೆಜ್ಜೆಯನ್ನೂ ಮುಂದಿಡಲಿಲ್ಲ. ಕೊನೆಗೆ ಅವನಿಗೆ ಅದರ ಮೇಲೆ ಎಷ್ಟು ಸಿಟ್ಟು ಬಂದಿತೆಂದರೆ, ಆ ಬಡ ಪ್ರಾಣಿಯನ್ನು ಕೊಂದೇ ಹಾಕಿದ.

ಕತ್ತಲಾದರೂ ನಾಯಿ ಹಿಂತಿರುಗಿ ಬರಲೇ ಇಲ್ಲ. ಅದುಂತ ನಾಯಿಯ ಸಮಾಚಾರ ತಿಳಿಯಲು ತನ್ನ ಅಣ್ಣನ ಮನೆಗೆ ಬಂದ.

"ಅಣ್ಣಾ ನನ್ನ ನಾಯಿ ಎಲ್ಲಿ?"

"ನಿನ್ನ ನಾಯಿ ಎಲ್ಲಿ ಮರಗಿಹೋಯ್ತೋ ದೇವರಿಗೇ ಗೊತ್ತು."

ಅಣ್ಣನ ಕೋಪಗೊಂಡ ಮುಖವನ್ನು ಕಂಡು ಅವನನ್ನು ಮುಂದೇನೂ ಕೇಳಲಿಲ್ಲ. ಎಲ್ಲ ಕಡೆಯಲ್ಲೂ ನಾಯಿಯನ್ನು ಹುಡುಕಿಕೊಂಡು ಅಲೆದಾಡಿದ. ಆದರೆ ಎಲ್ಲೂ ಅದರ ಯಾವ ಗುರುತೂ ಸಿಗಲಿಲ್ಲ. ಕಡೆಗೆ ಅದು ಹೆಣಸಿಕ್ಕಿತು. ಆದೂ ಎಲ್ಲೋ ಮರೆಯಲ್ಲಿ ಬಿದ್ದಿತ್ತು. ಅತ್ಯಂತ ದುಃಖಿತನಾಗಿ ತನ್ನ ಪ್ರೀತಿಯ ನಾಯಿಯ ಕಳೇಬರವನ್ನು ಹೊತ್ತುಕೊಂಡು ದಾರಿಯುದ್ದಕ್ಕೂ ಅಳುತ್ತಾ ತನ್ನ ಮನೆಗೆ ಹೋದ. ಆಗ ಅವನ ಭಗ್ನ ಹೃದಯ ಹೀಗೆ ಹಾಡುತ್ತಿತ್ತು.

ಆಸ್ತಿಯ ಪಾಲಿನ ಹಂಚಿಕೆಯಲ್ಲಿ
ದೊರಕಿತೊಂದು ನಾಯಿ.
ಹೊಲವನುಳುತಲಿದ್ದ
ನನ್ನ ಮುದ್ದು ನಾಯಿ
ಅಯ್ಯೋ ! ಕೊಂದನಾರೊ ಪಾಪಿ !
ಮೂಕ ಮುಗ್ಧ ಶುನಕವ !

ಅದನ್ನು ಅಲ್ಲಿಯೇ ಇದ್ದ ಮಣ್ಣಿನ ದಿಬ್ಬವನ್ನು ಅಗೆದು ಅದರಲ್ಲಿ ಸಮಾಧಿ ಮಾಡಿದ. ದಿನವೂ ಬೆಳಗ್ಗೆ ತಪ್ಪದೆ ಅದರ ಸಮಾಧಿಯ ಹತ್ತಿರ ಹೋಗತೊಡಗಿದ.

ಒಂದು ದಿನ ಆ ಸಮಾಧಿಯಿದ್ದ ದಿಬ್ಬದ ಮೇಲೆ ಬಿದಿರಿನ ಹೊಂಬಣ್ಣದ ಗಿಡ ಬೆಳೆದಿರುವುದನ್ನು ಕಂಡ. ಅದೇ ದಿನ ರಾತ್ರಿ ಎರಡನೇ ಬಾರಿ ಅಲ್ಲಿಗೆ ಹೋದಾಗ ಆ ಗಿಡ ಎತ್ತರಕ್ಕೆ ಬೆಳೆದ ಸುಂದರವಾದೊಂದು ಮರವಾಗಿತ್ತು. ಆಗ ಅವನಿಗೆ ಅಪಾರ ಸಂತೋಷವಾಯಿತು. ಆ ಸಂತೋಷದಲ್ಲಿ ಅದರ ಒಂದು ಕೊಂಬೆಯನ್ನು ಹಿಡಿದು ಮರವನ್ನು ಅಲ್ಲಾಡಿಸುತ್ತ ಹೀಗೆ ಹಾಡತೊಡಗಿದ–

ಓ ಧನಪತಿಯೆ ಬಿದಿರೆ
ನನ್ನೊಂದು ವಿನತಿಯನು ಸಲಿಸು ನೀನು
ಚಿನ್ನ ಬೆಳ್ಳಿಯ ಮಳೆಯ
ನನ್ನ ಮಡಿಲೊಳು ಭರದಿ ಸುರಿಸು ನೀನು
ಬೆಳಗಿನೊಳು ಹಿಡಿ ಚಿನ್ನ
ಬೈಗಿನೊಳು ಬಲು ಬೆಳ್ಳಿ
ಬೇಕು ನನಗೆ.

ಈ ಹಾಡನ್ನು ಹಾಡಿ ಮುಗಿಸುತ್ತಿದ್ದಂತೆಯೇ ಅವನ ಮೇಲೆ ಚಿನ್ನ ಬೆಳ್ಳಿ ವಜ್ರಗಳ ಮಳೆಯೇ ಆಗತೊಡಗಿತು. ಕೂಡಲೇ ಆ ಎಲ್ಲ ಭಂಡಾರವನ್ನೂ ತನ್ನ ಜೇಬಿಗೆ ಸೇರಿಸಿದ. ಅಂದಿನಿಂದ ನಾಯಿಯ ಸಮಾಧಿಯ ಬಳಿ ಹೋದಾಗಲೆಲ್ಲ ಆ ಬಿದಿರನ್ನು ಹಿಡಿದು ಅಲುಗಾಡಿಸುತ್ತಾ ಅದೇ ಹಾಡನ್ನು ಹಾಡುತ್ತಿದ್ದ. ಆ ಹಾಡು ಮುಗಿದ ಮೇಲೆ ಚಿನ್ನ ಬೆಳ್ಳಿಗಳು ನೆಲದ ಮೇಲೆಲ್ಲಾ ಹರಡಿರುತ್ತಿದ್ದುವು.

ತನ್ನ ತಮ್ಮನ ಹತ್ತಿರ ಬೇಕಾದಷ್ಟು ಚಿನ್ನ ಬೆಳ್ಳಿ ಇರುವ ಸಮಾಚಾರ ಅಣ್ಣನಿಗೆ ಗೊತ್ತಾಯಿತು. ಅವನು ತನ್ನ ತಮ್ಮನನ್ನು ಕೇಳಿದ–

" ನೀನು ಇಷ್ಟೊಂದು ಚಿನ್ನ ಬೆಳ್ಳಿಯನ್ನು ಎಲ್ಲಿಂದ ಕದ್ದು ತಂದೆ?"

" ನಾನು ಎಲ್ಲಿಂದಲೂ ಕದ್ದು ತರಲಿಲ್ಲ. ಇದೆಲ್ಲವೂ ನನಗೆ ನನ್ನ ನಾಯಿಯ ಸಮಾಧಿಯ ಮೇಲೆ ಬೆಳೆದಿರುವ ಬಿದಿರುಮರವನ್ನು ಅಲ್ಲಾಡಿಸಿದಾಗ ಸಿಕ್ಕಿದ್ದು."

" ನೀನು ನಿಜ ಹೇಳ್ತಿದ್ದೀಯ ? ಈಗಲೂ ಅಲ್ಲಿ ಇನ್ನೂ ಏನಾದರೂ ಸ್ವಲ್ಪ ಇದೆಯೇನು"– ಅಣ್ಣ ಮತ್ತೆ ಕೇಳಿದ.

" ಖಂಡಿತವಾಗಿಯೂ! ಅಲ್ಲಿ ಈಗಲೂ ಎಲ್ಲವೂ ಸಿಕ್ಕುತ್ತೆ. ನೀನು ಆ ಬಿದಿರುಮರವನ್ನು ಅಲ್ಲಾಡಿಸುವುದಷ್ಟೇ ಕೆಲಸ. ಚಿನ್ನ ಬೆಳ್ಳಿಗಳು ನೆಲದ ಮೇಲೆ ಬೀಳುತ್ತವೆ."

" ನೀನು ಆ ಬಿದಿರುಮರವನ್ನು ಹೇಗೆ ಅಲ್ಲಾಡಿಸುತ್ತೀ ?"

ತಮ್ಮನು ಅಣ್ಣನಿಗೆ ತಾನು ದಿನವೂ ಅದನ್ನು ಹೇಗೆ ಅಲ್ಲಾಡಿಸುತ್ತಿದ್ದ ನೆಂಬುದನ್ನು ಯಥಾವತ್ತಾಗಿ ತಿಳಿಸಿದ.

ಅಣ್ಣನು ಬೇಗನೆ ಗೂಡೆಗಳನ್ನು ಜೊತೆಮಾಡಿಕೊಂಡು ಸಮಾಧಿಯ ಕಡೆಗೆ ಓಡಿದ. ನಾಯಿಯ ಸಮಾಧಿಯ ಮೇಲೆ ಬೆಳೆದಿದ್ದ ಬಿದಿರು ಮರವನ್ನು ಹಿಡಿದು ಇನ್ನೇನು ಹಾಡು ಹೇಳಬೇಕೆನ್ನುವಷ್ಟರಲ್ಲಿ ಚಿನ್ನ, ಬೆಳ್ಳಿ ವಜ್ರಗಳ ಬದಲು ಅವನ ತಲೆ, ಮೈ ಮತ್ತು ಕೈಕಾಲುಗಳ ಮೇಲೆ ಹುಳು ಹುಪ್ಪಟೆಗಳ ಮಳೆ ಸುರಿಯ ತೊಡಗಿತು. ಅವುಗಳ ರಾಶಿಯಲ್ಲಿ ಅವನು ಮುಚ್ಚಿ ಹೋಗುವ ವರೆಗೂ ಸುರಿಯುವುದು ನಿಲ್ಲಲಿಲ್ಲ. ಅಷ್ಟಕ್ಕೇ ಬಿಡದೆ ಅವು ಅವನ ಬಟ್ಟೆಗಳೊಳ ಗೆಲ್ಲಾ ಸೇರಿಕೊಂಡು ಇಡೀ ಶರೀರವನ್ನೆಲ್ಲಾ ಕಚ್ಚ ತೊಡಗಿದವು. ಕಡಿತದ ನೋವಿನಿಂದ ಹುಚ್ಚನಂತಾಗಿ ಅವನು ನೆಲದ ಮೇಲುರುಳಿದ.

ಸ್ವಲ್ಪ ಸಮಯದ ನಂತರ ಅಲ್ಲಿಂದ ಎದ್ದು ಬಂದು ಮಜಬೂತಾದ ಮಚ್ಚನ್ನು ತರಲು ಮನೆಗೆ ಓಡಿದ. ಕೋಪದಿಂದ ಆ ಬಿದಿರು ಮರವನ್ನು ಮಚ್ಚಿ ನಿಂದ ಕಡಿದು ಹಾಕಿದ.

ಮಾರನೇ ದಿನ ತಮ್ಮ ಎಂದಿನಂತೆ ನಾಯಿಯ ಸಮಾಧಿಯ ಹತ್ತಿರ ಹೋದ. ಕಡಿದು ಬಿದ್ದ ಮರವನ್ನು ನೋಡಿ ಅವನಿಗಾದ ದುಃಖ ಅಷ್ಟಿಷ್ಟಲ್ಲ. ಮರವನ್ನು ಮನೆಗೆ ಹೊತ್ತುಕೊಂಡು ಹೋಗುವಾಗ ದಾರಿಯಲ್ಲಿ ದುಃಖದಿಂದ ಹೀಗೆ ಹಾಡುತ್ತಿದ್ದ–

ಆಸ್ತಿಯ ಪಾಲಿನ ಹಂಚಿಕೆಯಲ್ಲಿ
ದೊರಕಿತೊಂದು ನಾಯಿ.
ಹೊಲವನುಳುತಲಿದ್ದ
ನನ್ನ ಮುದ್ದು ನಾಯಿ.
ಅಯ್ಯೋ! ಕೊಂದನಾರೊ ಪಾಪಿ!
ಮೂಕ ಮುಗ್ಧ ಶುನಕವ!
ಬೆಳೆಯಿತೊಂದು ಬಿದಿರು ಮರವು
ಅದರ ಗುಡ್ಡೆ ಮೇಲೆ
ಕೊಡುತಲಿತ್ತು ದಿನ ದಿನವೂ
ಬೆಳಗು ಬೈಗು ಬೇಡಿದಷ್ಟು
ಚಿನ್ನ ಬೆಳ್ಳಿಯ!
ಅಯ್ಯೋ! ಕಡಿದನಾರೊ ಪಾಪಿ
ಬಡವನ ಈ ಕಲ್ಪತರುವ!

ಚಿಕ್ಕಲಾಂಗನು ಬಿದಿರನ್ನು ಸಿಗಿದು ಕೋಳಿಗಳನ್ನು ಕೂಡುವ ಒಂದು ಗೂಡು ಮಾಡಿದ. ಅದನ್ನು ಮನೆಯ ಹೊರಗಡೆ ಒಂದು ಮೂಲೆಯಲ್ಲಿಟ್ಟ. ಮುಂದಿನ ಸಂತೆಯಲ್ಲಿ ಅದನ್ನು ಮಾರುವುದು ಅವನ ಉದ್ದೇಶ. ಆದರೆ ಅದು ಆದದ್ದೇ ಬೇರೆ. ಅಕ್ಕ ಪಕ್ಕದ ಬಹುಪಾಲು ಕೋಳಿಗಳೆಲ್ಲಾ; ಅಷ್ಟೇಕೆ ಹೆಣ್ಣು ತಿತ್ತಿರಿಗಳೂ ಬಂದು ಚಿಕ್ಕಲಾಂಗನ ಗೂಡಿನಲ್ಲಿ ಮೊಟ್ಟೆಗಳನ್ನಿಟ್ಟವು. ಹೀಗೆ ಒಂದೇ ದಿನಕ್ಕೆ ಚಿಕ್ಕಲಾಂಗನಿಗೆ ಬಹಳಷ್ಟು ಮೊಟ್ಟೆಗಳು ದೊರೆತುವು.

ಅವನ ಮುಖ ಮತ್ತೆ ಗೆಲುವಾಯಿತು. ಅವುಗಳನ್ನು ಮಾರಲು ಅಂಗಡಿಗೆ ಹೋದ. ಅಣ್ಣನಿಗೆ ಈ ವಿಚಾರ ತಿಳಿಯಿತು. ತಮ್ಮನನ್ನು ಕೇಳಿದ– "ನೀನು ಇಷ್ಟೊಂದು ಮೊಟ್ಟೆಗಳನ್ನು ಎಲ್ಲಿಂದ ಕದ್ದು ತಂದೆ?"

"ನಾನು ಅವನ್ನು ಕದ್ದು ತರಲಿಲ್ಲ. ಕೋಳಿಗಳು, ತಿತ್ತಿರಿಗಳು ನಾನು ಮಾಡಿಟ್ಟಗೂಡಿನಲ್ಲಿ ತಾವಾಗಿಯೇ ಬಂದು ಮೊಟ್ಟೆಯಿಟ್ಟು ಹೋಗಿದ್ದುವು."

"ಚಿಕ್ಕಲಾಂಗ್ ನನಗೂ ನಿನ್ನ ಆ ಗೂಡನ್ನು ಒಂದು ತಿಂಗಳ ತನಕ ಸಾಲವಾಗಿ ಕೊಟ್ಟೆರು."

ಮೋಸವನ್ನು ತಿಳಿಯದ ಸರಳನೂ ಪ್ರಾಮಾಣಿಕನೂ ಆದ ತಮ್ಮ ತನ್ನ ಅಣ್ಣನಿಗೆ ಅದನ್ನು ಸಾಲವಾಗಿ ಕೊಟ್ಟ. ಅಣ್ಣನು ಅದನ್ನು ತೆಗೆದುಕೊಂಡು ಹೋಗಿ ತನ್ನ ಮನೆಯ ಬಚ್ಚಲು ಮೋರಿಯ ಹತ್ತಿರ ಇಟ್ಟ. ಸ್ವಲ್ಪ ಹೊತ್ತಿನಲ್ಲಿ ಹೆಣ್ಣುತಿತ್ತಿರಿಗಳು ಹಾರುತ್ತಾ ಕುಣಿಯುತ್ತ ಒಂದೊಂದಾಗಿ ಬಂದು ಗೂಡಿನ ಸುತ್ತ ಗುಂಪಾಗಿ ಸೇರಿದುವು. ಅಣ್ಣ ಕಾತರನಾಗಿ ನೋಡತೊಡಗಿದ. ಆದರೆ ಮೊಟ್ಟೆಗಾಗಿ ಗೂಡಿನೊಳಕ್ಕೆ ಕೈಚಾಚಿದರೆ ಒಂದೂ ಸಿಗಲಿಲ್ಲ. ಅವನಿಗೆ ವಿಪರೀತ ಸಿಟ್ಟು ಬಂತು. ಅಲ್ಲೇ ಆ ಗೂಡನ್ನು ಚೂರು ಚೂರು ಮಾಡಿ ಸುಟ್ಟು ಹಾಕಿದ.

ಅಣ್ಣ ತಾನು ಕೊಟ್ಟದ್ದ ಗೂಡನ್ನು ಸುಟ್ಟು ಹಾಕಿದನೆಂಬ ಸಮಾಚಾರ ತಿಳಿದು ತಮ್ಮ ತೀರ ದುಃಖಿತನಾದ. ಅವನು ಅದರ ಬೂದಿಯನ್ನೆಲ್ಲ ಒಟ್ಟು ಹಾಕಿ ಮನೆಗೆ ಕೊಂಡೊಯ್ದ. ದಾರಿಯುದ್ದಕ್ಕೂ ಅವನ ನೊಂದ ಹೃದಯ ದಿಂದ ಈ ಹಾಡು ಹೊರ ಹೊಮ್ಮುತ್ತಿತ್ತು–

ಆಸ್ತಿಯ ಪಾಲಿನ ಹಂಚಿಕೆಯಲ್ಲಿ
  ದೊರಕಿತೊಂದು ನಾಯಿ
ಹೊಲವನುಳುತಲಿದ್ದ
  ನನ್ನ ಮುದ್ದು ನಾಯಿ.
ಅಯ್ಯೋ! ಕೊಂದನಾರೊ ಪಾಪಿ
  ಮೂಕ ಮುಗ್ಧ ಶುನಕವ!
ಬೆಳೆಯಿತೊಂದು ಬಿದಿರು ಮರವು
  ಅದರ ಗುಡ್ಡೆ ಮೇಲೆ.
ನೀಡುತಿತ್ತು ದಿನ ದಿನವೂ
ಬೆಳಗು ಬೈಗು ಬೇಡಿದಷ್ಟು

ಚಿನ್ನ ಬೆಳ್ಳಿಯು!
ಅಯ್ಯೋ! ಕಡಿದ ನಾರೊ ಪಾಪಿ
ಬಡವನ ಈ ಕಲ್ಪತರುವ!
ಮುರಿದ ಬಿದಿರಿನಿಂದ ನಾನು
ಗೂಡನೊಂದ ಮಾಡಿದೆ
ಇಡುಂತಲಿದ್ದುವೆಲ್ಲ ಕೋಳಿ
ಮೊಟ್ಟೆಗಳನು ಇದರೊಳು
ಇಟ್ಟನಾರೊ ಅದಕೆ ಬೆಂಕಿ
ಸುಟ್ಟಹೃದಯ ನನ್ನದು;
ಆಶೆ ಮಣ್ಣುಗೂಡಿತು !

ತಮ್ಮನ ಹತ್ತಿರ ಈಗ ಏನೇನೂ ಉಳಿದಿಲ್ಲ. ಅವನ ನಾಯಿ, ಚಿನ್ನ ಬೆಳ್ಳಿಯನ್ನು ಕೊಡುತ್ತಿದ್ದ ಅವನ ಬಿದಿರುಮರ, ಕೋಳಿಗಳೆಲ್ಲಾ ಬಂದು ಮೊಟ್ಟೆಯಿಡುತ್ತಿದ್ದ ಅವನ ಬಿದಿರಿನ ಗೂಡು ಎಲ್ಲವೂ ಹಾಳಾದವು. ಆದ್ದರಿಂದ ಗುದ್ದಲಿಯನ್ನು ಹೆಗಲಿಗೆ ಹಾಕಿಕೊಂಡು ಅವನೊಬ್ಬನೇ ತನ್ನ ತುಂಡು ಜಮೀನನ್ನು ಅಗೆಯಲು ಹೊರಟ. ಹೊಲದಲ್ಲಿ ಗೂಡನ್ನು ಸುಟ್ಟ ಬೂದಿಯ ಗೊಬ್ಬರವನ್ನು ಎರಚಿ ಕುಂಬಳ ಬೀಜವನ್ನು ಬಿತ್ತಿದ.

ಬೀಜಗಳು ಬೇಗನೆ ಮೊಳೆತು ಮೊದಲ ದಿನವೇ ಚಿಗುರುಗಳು ಹೊಮ್ಮಿದುವು. ಎರಡನೆಯ ದಿನವೇ ಎಲೆಗಳು ಮೂಡಿದುವು. ಮೂರನೇ ದಿನ ಸುತ್ತಲೂ ಬಳ್ಳಿ ಹಬ್ಬಿಕೊಂಡಿತು. ನಾಲ್ಕನೇ ದಿನ ಆ ಬಳ್ಳಿ ಇಡೀ ಹೊಲದಲ್ಲೆಲ್ಲಾ ಹರಡಿಕೊಂಡಿತು. ಐದನೇ ದಿನ ಥಳಥಳಿಸುವ ಹೊಂಬಣ್ಣದ ಕುಂಬಳ ಹೂಗಳಿಂದ ಬೆಟ್ಟವೆಲ್ಲಾ ಹೊಳೆಯತೊಡಗಿತು. ಆರನೇ ದಿನ ಚೆನ್ನಾಗಿ ಬಲಿತ ಕುಂಬಳಕಾಯಿಗಳಿಂದ ಬಳ್ಳಿ ಭಾರವಾಯಿತು. ಭಾರಿಯಾದ ಒಂದು ಕುಂಬಳ ಕಾಯಿ ಎಂಟರಿಂದ ಒಂಬತ್ತು ಅಡಿಗಳಷ್ಟು ಹಪ್ಪವಿತ್ತು. ಇಬ್ಬರು ಆಸಾಮಿಗಳು

ತಮ್ಮ ತೋಳುಗಳನ್ನು ಒಟ್ಟಿಗೇ ಚಾಚಿದರೂ ಅದನ್ನು ಬಳಸಲಾಗುತ್ತಿರಲಿಲ್ಲ. ಅದು ತುಂಬ ಸೊಗಸಾಗಿ ಕಾಣುತ್ತಿತ್ತು. ಚಿಕ್ಕಲಾಂಗನು ಅದಕ್ಕೆ 'ರಾಜಕುಂಬಳ' ಎಂದು ಹೆಸರಿಟ್ಟ.

ಒಂದು ಕೋತಿ ಆ ಕಡೆ ಬಂತು. ಅಲ್ಲಿ ಬಿಟ್ಟಿದ್ದ ಕುಂಬಳಕಾಯಿಗಳನ್ನು ನೋಡಿತು. ಆ ಮಂಗ ಒಂದು ಕುಂಬಳಕಾಯಿಯನ್ನು ಕಿತ್ತುಕೊಂಡು ಹೋಯಿತು. ಅನಂತರ ಕೂಡಲೇ ಗುಹೆಗೆ ಹೋಗಿ– "ಗೆಳೆಯರೆ, ಬೆಟ್ಟದ ಮೇಲೆ ತುಂಬಾ ಕುಂಬಳಕಾಯಿಗಳು ಬಿಟ್ಟಿವೆ" –ಎಂಬ ಸಂತೋಷದ ಸುದ್ದಿಯನ್ನು ತಿಳಿಸಿ– "ಹೋಗಿ ಒಂದಷ್ಟನ್ನು ಕಿತ್ತುಕೊಂಡು ಬನ್ನಿ" ಎಂದಿತು.

ರಾತ್ರಿ ಕೋತಿಗಳ ಹಿಂಡುಹಿಂಡೇ ಚಿಕ್ಕಲಾಂಗನ ಹೊಲಕ್ಕೆ ನುಗ್ಗಿದುವು. ಅರ್ಧದಷ್ಟು ಕುಂಬಳಕಾಯಿಗಳನ್ನು ಕೊಂಡು ಹೋದುವು. ಮಾರನೆ ದಿನ ಬಹುಪಾಲು ಕುಂಬಳಕಾಯಿಗಳು ಕಳವಾಗಿವೆ ಎಂಬುದು ಗೊತ್ತಾಗುತ್ತಲೇ ಚಿಕ್ಕಲಾಂಗನಿಗೆ ವಿಪರೀತ ಸಿಟ್ಟು ಬಂತು. ಅದೇ ರಾತ್ರಿ ಕುಂಬಳಕಾಯಿಗಳನ್ನು ಕಾಯಲು ಹೊಲದ ಹತ್ತಿರ ಹೋದ. ರಾಜಕುಂಬಳದಲ್ಲಿ ಒಂದು ಡೊಗರು ಮಾಡಿ ಅದರಲ್ಲಿ ಅಡಗಿ ಕುಳಿತ.

ಮಧ್ಯರಾತ್ರಿಯ ಸಮಯದಲ್ಲಿ ಮಂಗಗಳು ಮತ್ತೆ ಬಂದುವು. ಅಳಿದುಳಿದ ಕುಂಬಳಕಾಯಿಗಳನ್ನು ಕೊಂಡುಹೋದವು. ರಾಜಕುಂಬಳವೊಂದು ಮಾತ್ರ ಅಲ್ಲೇ ಉಳಿಯಿತು. ಕಾರಣ ಅದು ಬಹು ದೊಡ್ಡದಾಗಿತ್ತು.

ರಾಜಕುಂಬಳವನ್ನು ಕೊಂಡೊಯ್ಯಲು ಸಾಧ್ಯವಾಗದೆ ಇದ್ದದ್ದರಿಂದ ಕೋತಿಗಳು ತಮ್ಮ ರಕ್ಷಕದೇವತೆಯ ಸಹಾಯ ಪಡೆಯಲು ತೀರ್ಮಾನಿಸಿದುವು. ಅದಕ್ಕೋಸ್ಕರವಾಗಿಯೇ ಅವು ಕೂಡಲೇ ತಮ್ಮ ಗುಹೆಗೆ ಓಡಿ ಬಂದು ಅಲ್ಲಿಂದ ಚಿನ್ನ ಬೆಳ್ಳಿಯ ಬಟ್ಟಲುಗಳನ್ನು ತೆಗೆದುಕೊಂಡು ಹೋದುವು. ಈ ಬಟ್ಟಲುಗಳನ್ನು ರಾಜಕುಂಬಳದ ಮುಂದಿಟ್ಟುವು. ನಂತರ ದೀಪಗಳನ್ನೂ ಧೂಪದ ಬತ್ತಿಗಳನ್ನೂ ಹಚ್ಚಿದುವು. ತಮ್ಮ ದೇವತೆಯನ್ನು ಕರೆಯಲು ಕೈ ಜೋಡಿಸಿ ಪ್ರಾರ್ಥಿಸತೊಡಗಿದುವು.

ರಾಜಕುಂಬಳದ ಡೊಗರಿನೊಳಗಿಂದ ಇದೆಲ್ಲವನ್ನೂ ಚಿಕ್ಕಲಾಂಗ್ ನೋಡಿದ; ಕೇಳಿದ. ಇದ್ದಕ್ಕಿದ್ದಂತೆಯೇ ಅವನು "ಹೇ" ಎಂದು ಕೂಗಿದ. ಕೋತಿಗಳ ಕಿವಿಗಳು ನಿಮಿರಿದುವು. ಅವು ಇದು ರಾಜಕುಂಬಳದ ದನಿ ಇರ ಬಹುದೆಂದು ಭಾವಿಸಿ ಭಯದಿಂದ ತಮ್ಮ ಚಿನ್ನ ಬೆಳ್ಳಿಯ ಬಟ್ಟಲುಗಳನ್ನೆಲ್ಲಾ ಅಲ್ಲೇ ಬಿಟ್ಟು ಕೂಡಲೇ ಅತ್ತಿತ್ತ ಚದುರಿ ಓಡಿಹೋದವು.

ಹೊರಗೆ ಕೋತಿಗಳ ಗದ್ದಲ ಕೊನೆಯಾಗುತ್ತಲೇ ಚಿಕ್ಕಲಾಂಗ್ ಕುಂಬಳದ ಡೊಗರಿನೊಳಗಿಂದ ನುಸುಳಿಕೊಂಡು ಹೊರಬಂದ. ಚಿನ್ನ ಮತ್ತು ಬೆಳ್ಳಿಯ ಬಟ್ಟಲುಗಳನ್ನು ತೆಗೆದುಕೊಂಡು ಮನೆಗೆಬಂದ.

ಯಾವಾಗಿನಂತೆ ಅಣ್ಣ ತಮ್ಮನನ್ನು ಚಿನ್ನ ಬೆಳ್ಳಿಯ ಬಟ್ಟಲುಗಳು ಹೇಗೆ ಸಿಕ್ಕಿದುವು ಎಂಬುದನ್ನು ವಿಚಾರಿಸಲು ಬಂದ.

"ಈ ಬಟ್ಟಲುಗಳನ್ನು ಎಲ್ಲಿಂದ ಕದ್ದು ತಂದೆ?"


"ಇವು ಕದ್ದವಲ್ಲ, ನೆನ್ನೆ ರಾತ್ರಿ ಕುಂಬಳದ ಹೊಲದಿಂದ ತಂದೆ"

ಅಣ್ಣನಿಗೆ ಅದರ ಕಥೆಯನ್ನೆಲ್ಲಾ ಹೇಳಿದ– ಪಂಜರದ ಬೂದಿಯನ್ನು ಗೊಬ್ಬರವಾಗಿ ಕುಂಬಳದ ಹೊಲದಲ್ಲಿ ಹಾಕಿದ್ದು; ದೊಡ್ಡ ಕುಂಬಳಕಾಯಿ ಬಿಟ್ಟದ್ದು, ಕೋತಿಗಳು ಕುಂಬಳಕಾಯಿಗಳನ್ನು ಕದ್ದೊಯ್ಯುತ್ತಿದ್ದುದು, ಇತ್ಯಾದಿ.

ಕತ್ತಲಾಯಿತು. ಅಣ್ಣ ತಮ್ಮನ ಹೊಲಕ್ಕೆ ಹೋದ. ಅವನು ಮಾಡಿ ದಂತೆಯೇ ಇವನೂ ರಾಜಕುಂಬಳದೊಳಗೆ ಅವಿತು ಕುಳಿತ. ಕೋತಿಗಳು ಹಿಂದಿನ ದಿನಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಬಂದುವು. ಆದರೆ ಈ ಸಲ ಬಟ್ಟಲು ಗಳನ್ನೇನೂ ತಂದಿರಲಿಲ್ಲ. ಎಲ್ಲ ಸೇರಿ ಆ ಬೃಹತ್ ಗಾತ್ರದ ರಾಜಕುಂಬಳವನ್ನು ಎತ್ತಿಕೊಂಡು ಹೊರಟವು. ಸ್ವಲ್ಪ ದೂರ ಹೊಗುವುದರೊಳಗೆ ಅದರ ಕುಲುಕಾಟ ದಿಂದ ಅಣ್ಣನಿಗೆ ನಿದ್ದೆ ಬಂತು.

ಕೋತಿಗಳು ರಾಜಕುಂಬಳನನ್ನು ಎಳೆದುಕೊಂಡು ಬೆಟ್ಟದ ತುದಿಯಲ್ಲಿ ಹರಿಯುವ ನೀರಿನ ಝರಿಯ ಬಳಿಗೆ ಕೊಂಡೊಯ್ದುವು. ಅವು ಒಂದು ಕಡಿದಾದ ಬಂಡೆಯ ತುದಿಗೆ ತಲುಪಿದಾಗ ಅಣ್ಣನಿಗೆ ಎಚ್ಚರವಾಯಿತು.

ಕೋತಿಗಳ ಗದ್ದಲ ಯಾವಾಗ ಕಿವಿಗೆ ಬಿತ್ತೋ ಆಗ ಅವು ತ
ದೇವತೆಯನ್ನು ಪ್ರಾರ್ಥಿಸುತ್ತಿರಬಹುದೆಂದು ಭಾವಿಸಿ ಜೋರಾಗಿ 'ಹೇ' ಎಂ
ಕೂಗಿದ. ರಾಜಕುಂಬಳದ ದನಿಯನ್ನು ಕೇಳಿ ಕೋತಿಗಳು ಅಲ್ಲಿಂದ ಓಡಿದು
ರಾಜಕುಂಬಳ ಬೆಟ್ಟದಿಂದ ವೇಗವಾಗಿ ಉರುಳುತ್ತಾ ಕೆಳಗೆಬಿದ್ದು ಚೂರು ಚೂ
ಯಿತು. ರಾಜಕುಂಬಳವೇ ಚೂರು ಚೂರಾಯಿತೆಂದಮೇಲೆ ಅದರಲ್ಲಿ
ಕುಳಿತ ಅಣ್ಣನ ಗತಿ ಏನಾಯಿತೆಂದು ಹೇಳುವುದೇಬೇಡ.



" ಮುನ್ನುಡಿಯಿಂದ "................

ಶ್ರೀ ಲಕ್ಷ್ಮೀನಾರಾಯಣರ ಅನುವಾದ ತುಂಬ ಸರಳವಾಗಿದ್ದು ಭಾಷೆ ಹೂವೆತ್ತಿದಷ್ಟು ಹಗುರವಾಗಿದೆ, ಜಾನಪದ ಕಥನ ಜಗತ್ತಿಗೆ ನಮ್ಮನ್ನು ಕರೆದೊಯ್ದು ಅಲ್ಲಿನ ಬೆರಗುಗಳನ್ನು ಪರಿಚಯ ಮಾಡಿಕೊಡುತ್ತದೆ.

ಅವರು ಆರಿಸಿಕೊಂಡಿರುವ ಕಥೆಗಳು ಮಕ್ಕಳ ಕಥನ ಕುತೂಹಲವನ್ನು ತಣಿಸಬಲ್ಲ ವೈವಿಧ್ಯ ಪೂರ್ಣ ಕಥಾವಸ್ತುಗಳಿಂದ ಕೂಡಿವೆ. ವಿಶ್ವಾಸ ದ್ರೋಹ, ರೈತನ ಬುದ್ಧಿವಂತಿಕೆ, ಸಾಹಸಮಯ ಕಾರ್ಯಗಳನ್ನು ಲೀಲಾಜಾಲವಾಗಿ ಮುಗಿಸಬಲ್ಲ ಬೆಟ್ಟದ ಹುಡುಗನ ಸಾಹಸಗಳು, ಸಿಂಗ್ರನ ಸಾಹಸಗಳು ಸಾಧ್ವಿಯೂ ಚತುರೆಯೂ ಆದ ಹೆಣ್ಣು ಪುರುಷರ ಶೋಷಣೆಯ ವಿರುದ್ಧ ವೈಯಕ್ತಿಕವಾಗಿ ನಡೆಸುವ ಬೌದ್ಧಿಕ ಹೋರಾಟ, ಜೀವಂತ ವಸ್ತುಗಳನ್ನೇ ತನ್ನ ಕುಂಚದಿಂದ ಬಿಡಿಸುತ್ತಿದ್ದ ಕಲಾವಿದ ಮಾಲಿಯಾಂಗನ ಅಪ[illegible] ಫ್ಯಾಂಟಸಿ ಇವೆಲ್ಲ ಇಲ್ಲಿಯ ಕಥನದಲ್ಲಿ ಚಿತ್ರಣಗೊಂಡಿವೆ. ಮಕ್ಕಳ ಮನಸ್ಸನ್ನು ಸೆರೆ ಹಿಡಿಯಬಲ್ಲ ಸಮುದ್ರ, ಬೆಟ್ಟ, ದೈತ್ಯಪ್ರಾಣಿಗಳು, ಕಾಡಿನ ವಿಚಿತ್ರ ಪ್ರಾಣಿ ವರ್ಗ, ಮಾಯಾಲೋಕದ ವ್ಯಕ್ತಿಗಳು, ಕಥೆಯ ಸಜೀವ ಪಾತ್ರವರ್ಗಗಳಾಗಿ ನಿಂತು ಚಮತ್ಕಾರಿಕವಾಗಿ ಎಳೆಯರನ್ನು ಆಕರ್ಷಿಸಿ ಬಿಡುತ್ತವೆ. ಇಂಥದೊಂದು ಬೆರಗಿನ ಲೋಕಕ್ಕೆ ಕನ್ನಡದ ಎಳೆಯರನ್ನು ಕೊಂಡೊಯ್ಯುವ ಕಾರ್ಯದಲ್ಲಿ ಗೆಳೆಯ ಲಕ್ಷ್ಮೀನಾರಾಯಣ್ ಸಫಲರಾಗಿದ್ದಾರೆ.

ಅ. ರಾ. ಮಿತ್ರ

ಬೆಲೆ : ಹನ್ನೆರಡು ರೂಪಾಯಿ